6. ವಿತ್ತೀಯ ಕಾರ್ಯಕಲಾಪಗಳು

2014–15ನೇ ಸಾಲಿನ ಬೇಡಿಕೆ ಸಂಖ್ಯೆ: 7– ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಮೇಲೆ ಮುಂದುವರೆದ ಚರ್ಚೆ:–

ಶ್ರೀ ಕೆ.ಎನ್. ರಾಜಣ್ಣ (ಮಧುಗಿರಿ):– ಸನ್ಮಾನ್ಯ ಉಪಾಧ್ಯಕ್ಷರೆ, ಪ್ರಪ್ರಥಮವಾಗಿ ನನಗೆ ಅವಕಾಶ ಕೊಟ್ಟಿದ್ದಕ್ಕೆ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗಳ ಮೇಲೆ ಮಾತನಾಡತಕ್ಕಂಥದ್ದು ನನಗೆ ಒಂದು ರೀತಿಯಲ್ಲಿ ಬಹಳ ಖುಷಿ ತರುವ ಸಂಗತಿ. ಏಕೆಂದರೆ, ನಾನು ಕೂಡ ಗ್ರಾಮ ಪಂಚಾಯಿತಿಯಿಂದ ಇಲ್ಲಿಗೆ ಬಂದಿರತಕ್ಕಂಥವನು. ಗ್ರಾಮೀಣಾಭಿವೃದ್ಧಿ ಇಲಾಖೆಯ ವರದಿಯಲ್ಲಿ ಧ್ಯೇಯ ಎಲ್ಲವನ್ನೂ ಕೂಡ ಮುದ್ರಣ ಮಾಡಿದ್ದಾರೆ. ಇಲ್ಲಿಂದ ಹೊರಡತಕ್ಕಂಥ ಈ ವರದಿಗಳು, ಪತ್ರಗಳು, ಅವುಗಳು ಹೆಚ್ಚು ಪರಿಣಾಮಕಾರಿಯಾಗಿರಬೇಕು ಮತ್ತು ತಪ್ಪು ಒಪ್ಪುಗಳಿಂದ ದೂರ ಇರಬೇಕು. ತಪ್ಪು ತಪ್ಪು ಇರತಕ್ಕಂಥ ವರದಿಗಳನ್ನು ಮುದ್ರಿಸಿ ನಾವು ಹಂಚಿದರೆ ಅದು ಒಂದು ರೀತಿಯಲ್ಲಿ ಸರ್ಕಾರದ ಮೊನಚು ಕಡಿಮೆಯಾಗಿದೆ ಎನ್ನುವ ಭಾವನೆ ಸಾರ್ವಜನಿಕರಲ್ಲಿ ಬರುತ್ತದೆ. ನಾನು ಮೊದಲನೆಯದಾಗಿ, ಎಲ್ಲಾ ತಪ್ಪುಗಳನ್ನು ಹೇಳುವುದಕ್ಕೆ ಹೋಗುವುದಿಲ್ಲ, ಕೆಲವು ತಪ್ಪುಗಳನ್ನು ಮಾತ್ರ ಇಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಮೊದಲೆಲ್ಲಾ ನಾವು ಈ ಬಂಡಲ್‌ನ್ನು ತೆಗೆದು ಓದುತ್ತಿರಲಿಲ್ಲ. ಯಾವಾಗ ಇಲಾಖೆ ಬೇಡಿಕೆಗಳ ಮೇಲೆ ಚರ್ಚೆಗೆ ತಾವು ಅವಕಾಶ ಕೊಟ್ಟಿದ್ದೀರಿ, ಆ ಹಿನ್ನೆಲೆಯಲ್ಲಿ ಎಲ್ಲರೂ ಕೂಡ ಅವುಗಳನ್ನು ನೋಡತಕ್ಕಂಥ ಪ್ರಯತ್ನ ಮಾಡಿದ್ದಾರೆ. ನಾನು ನೋಡಿದ ಹಾಗೆ ಒಂದೆರಡು ತಪ್ಪುಗಳನ್ನು ಹೇಳಿ ಆ ನಂತರ ಮುಖ್ಯ ವಿಷಯಕ್ಕೆ ಬರುತ್ತೇನೆ. 2013–14 ನೇ ಸಾಲಿನ ವರದಿಯಲ್ಲಿ ಜಿಲ್ಲಾ ಪಂಚಾಯಿತಿಯವರಿಗೆ 2 ಕೋಟಿ ರೂಪಾಯಿ ಅನಿರ್ಬಂಧಿತ ಅನುದಾನ ಕೊಡುತ್ತೇವೆ ಮತ್ತು ತಾಲ್ಲೂಕು ಪಂಚಾಯಿತಿಯವರಿಗೆ 1 ಕೋಟಿ ರೂಪಾಯಿ ಕೊಡುತ್ತೇವೆಂದು ಇದೆ. ಇದು untied grant ಅಲ್ಲ. ಜಿಲ್ಲಾ ಪಂಚಾಯಿತಿಗೆ ಕೊಡತಕ್ಕಂತಹ development grant. ಆದರೆ ಆ ಸಂದರ್ಭದಲ್ಲಿ ಮೊನ್ನೆ ಮೊನ್ನೆಯೂ ಕೂಡ ಸರ್ಕಾರಿ ಆದೇಶಗಳು 17–07–2013 ರಲ್ಲಿ ಹೊರಟಿವೆ.

ತದ ನಂತರದಲ್ಲಿ ಸರ್ಕಾರಿ ಆದೇಶಗಳು ಬಂದಿದ್ದರೂ ಕೂಡ ಆ ಎಲ್ಲ ತಿದ್ದುಪಡಿಯನ್ನು ಇದರಲ್ಲಿ ಸೇರಿಸಿಲ್ಲ. ರಸ್ತೆಗಳ ಬಗ್ಗೆ ಪುಟ 5 ರಲ್ಲಿ ಮಾಹಿತಿ ಕೊಟ್ಟು ಅದರಲ್ಲಿ ಡಾಂಬರ್ ರಸ್ತೆ ಎಷ್ಟು ಇವೆ? ಜೆಲ್ಲಿ ಹಾಕಿರುವ ರಸ್ತೆಗಳು ಎಷ್ಟು ಇವೆ? ಎನ್ನುವ ಮಾಹಿತಿಯನ್ನು ಓದಿದರೆ ಅದು ರೂಪಾಯಿಗಳೆಂದು ಕಾಣಿಸುತ್ತದೆ. ಮಾನ್ಯ ದತ್ತಾ ರವರು ಓದಿರಬಹುದೆಂದು ಕಾಣಿಸುತ್ತದೆ. 58,184 ರೂಪಾಯಿ ತರಹ ಆಗುತ್ತದೆ. ಇದು 58,184 ಕಿ.ಮೀ. ಮೇಲುಗಡೆ ಬರೆದಿದ್ದಾರೆ ಕೆಳಗಡೆ ಮಾತ್ರ ರೂಪಾಯಿಗಳ ತರಹ ಬರೆದಿದ್ದಾರೆ. ಇನ್ನೊಂದು ಇದಕ್ಕೆ ಪೂರಕವಾಗಿ ಒಂದು ಆದೇಶ ಹೊರಡಿಸಿದ್ದಾರೆ. ಇದನ್ನು ಏಕೆ ಹೇಳುತ್ತೇನೆಂದರೆ, ಇಲ್ಲಿಂದ ಹೊರಡಿಸುವ ಕಾಗದ ಪತ್ರಗಳು, ಸರ್ಕಾರಿ ಆದೇಶಗಳು, ಯಾವ ರೀತಿ ಇರಬೇಕೆನ್ನುವುದಕ್ಕೆ ಒಂದು ಉದಾಹರಣೆ ಕೊಡಬಯಸುತ್ತೇನೆ. ಮಾನ್ಯ ರಾಯರೆಡ್ಡಿಯವರು ಮೊನ್ನೆ ಶಾಸಕರುಗಳಿಗೆ ಆಪ್ತ ಸಹಾಯಕರನ್ನು ಮತ್ತು ಇತರೆ ಸೌಲಭ್ಯಗಳನ್ನು ಕೊಡಬೇಕೆಂದು ಮಾತನಾಡಿದರು. ಆ ಹಿನ್ನೆಲೆಯಲ್ಲಿ ಒಂದು ಆದೇಶ ಹೊರಡಿಸಿದರು. ಅದು ರಾಜ್ಯಪಾಲರ ಹೆಸರಿನಲ್ಲಿ ಆದೇಶವಿದೆ. ಇದರಲ್ಲಿ, ಮಾನ್ಯ ಶಾಸಕರುಗಳಿಗೆ ಮತ್ತು ವಿಧಾನ ಪರಿಷತ್ತಿನ ಸದಸ್ಯರುಗಳಿಗೆ ಒಬ್ಬ ಆಪ್ತ ಶಾಸಕನನ್ನು ನೇಮಿಸುವುದು ಎಂದು ಮೇಲುಗಡೆ ಬರೆಯುತ್ತಾರೆ. ವಿಧಾನ ಪರಿಷತ್ತಿನ ಸದಸ್ಯರೆಂದರೆ ಅವರು ಶಾಸಕರಲ್ಲವೆ? ಮಾನ್ಯ ಶಾಸಕರುಗಳಿಗೆ ಮತ್ತು ವಿಧಾನ ಪರಿಷತ್ತಿನ ಸದಸ್ಯರುಗಳಿಗೆ ಒಬ್ಬ ಆಪ್ತ ಶಾಸಕನನ್ನು ನೇಮಿಸುವುದು ಎಂದು ಒಂದು ಸರ್ಕಾರಿ ಆದೇಶವನ್ನು ರಾಜ್ಯಪಾಲರ ಹೆಸರಿನಲ್ಲಿ ಹೊರಡಿಸುತ್ತಾರೆ. ಈ ರೀತಿಯಾಗಿ ತಪ್ಪು ತಪ್ಪು ಆದೇಶಗಳನ್ನು, ತಪ್ಪು ತಪ್ಪು ವರದಿಗಳನ್ನು ಏನು ಕಳುಹಿಸುತ್ತಾರೆ ಇದು ನಮ್ಮ ಆಡಳಿತದ ಮೇಲೆ ಒಂದು ರೀತಿಯ ಕಪ್ಪು ಚುಕ್ಕೆ ಎಂದು ನಾವು ಭಾವಿಸಬೇಕಾಗುತ್ತದೆ. ಆದ್ದರಿಂದ, ಇನ್ನು ಮುಂದೆ ಯಾವುದೇ ವರದಿಗಳನ್ನು ತಯಾರಿಸುವಾಗ ಇಲಾಖಾಧಿಕಾರಿಗಳು ಎಚ್ಚರಿಕೆ ವಹಿಸಬೇಕೆನ್ನುವ ಮಾತನ್ನು ಹೇಳಬಯಸುತ್ತೇನೆ. ಶಾಸಕರು ಎಂದರೆ ಸಾಕು, ವಿಧಾನ ಪರಿಷತ್ತಿನ ಸದಸ್ಯರು ಕೂಡ ಶಾಸಕರೇ ಆದರೆ, ಇಲ್ಲಿ ಇವರು ಶಾಸಕರು ಎಂದು ಬರೆದು ಮುಂದೆ ವಿಧಾನ ಪರಷತ್ತಿನ ಸದಸ್ಯರು ಎಂದು

ಬರೆಯುತ್ತಾರೆ. ಇದು ಸರ್ಕಾರದ ಆದೇಶ, ರಾಜ್ಯಪಾಲರ ಹೆಸರಿನಲ್ಲಿ ಹೊರಡಿಸತಕ್ಕಂಥ ಆದೇಶಗಳು, ಈ ರೀತಿ ತಪ್ಪಾದ ಆದೇಶಗಳು, ಆ ರೀತಿಯ ತಪ್ಪಾದ ವಾರ್ಷಿಕ ವರದಿಗಳನ್ನು, up-to-date ಮಾಡದೇ print ಮಾಡುವುದು ಇದು ನಮ್ಮ ಸರ್ಕಾರಕ್ಕೆ ಭೂಷಣ ತರುವುದಿಲ್ಲವೆನ್ನುವ ಮಾಹಿತಿಯನ್ನು ಮೊದಲನೆಯದಾಗಿ ಪ್ರಸ್ತಾಪಿಸುತ್ತೇನೆ.

ನಾನು ನೇರವಾಗಿ ಗ್ರಾಮ ಪಂಚಾಯಿತಿಗಳ ಕಾರ್ಯಚಟುವಟಿಕೆಗಳ ಬಗ್ಗೆ ಪ್ರಸ್ತಾಪಿಸುತ್ತೇನೆ. ಈ ಗ್ರಾಮ ಪಂಚಾಯಿತಿಗಳಲ್ಲಿ ಯಾವುದೇ ಕಾರ್ಯಕ್ರಮವಾಗಲಿ ಮತ್ತೊಂದಾಗಲಿ ಪ್ರತಿಯೊಂದಕ್ಕೂ ಗ್ರಾಮ ಸಭೆಗಳು base. ಇಂದು ಗ್ರಾಮ ಸಭೆಗಳು ಹೇಗೆ ನಡೆಯುತ್ತಿವೆ, ಆ ಸಭೆಗಳು ಯಾವ ರೀತಿಯಲ್ಲಿ ಪರಿಣಾಮಕಾರಿಯಾಗಿದೆ ಎಂದು ನಿಮಗೂ ಗೊತ್ತಿದೆ ಹಾಗೆಯೇ ಇಲ್ಲಿರುವವರೆಲ್ಲರಿಗೂ ಗೊತ್ತಿದೆ. ಕೆಲವು ಕಡೆ ಗ್ರಾಮ ಸಭೆಗಳೇ ನಡೆಯುವುದಿಲ್ಲ. ಗ್ರಾಮ ಸಭೆಗಳು ನಡೆದರೂ ಅಲ್ಲಿ ಒಂದು ರೀತಿಯ ಗೊಂದಲವಾಗಿ ಅಲ್ಲಿ ಏನು ನಡೆಯುತ್ತಿದೆ ಎನ್ನುವುದು ಗೊತ್ತಾಗುವುದಿಲ್ಲ. ಇಂಥ ಪರಿಸ್ಥಿತಿ ಗ್ರಾಮ ಸಭೆಗಳಲ್ಲಿದೆ, ಬಹುತೇಕ ಗ್ರಾಮ ಸಭೆಗಳು ನಡೆಯುತ್ತಿಲ್ಲ. ಇಂದು ಪ್ರತಿಯೊಂದಕ್ಕೂ ಗ್ರಾಮ ಸಭೆಗಳಾಗಬೇಕೆಂದು ನಿರ್ಣಯ ಮಾಡುವ ಸಂದರ್ಭದಲ್ಲಿ ನಾನು ಗ್ರಾಮ ಸಭೆಗಳು ಪರಿಣಾಮಕಾರಿಯಾಗಿ ನಡೆಯಬೇಕೆನ್ನುವವನು. ಎಷ್ಟೋ ಜನರನ್ನು Nodal ಅಧಿಕಾರಿಗಳೆಂದು ಮಾಡುತ್ತಾರೆ, ಯಾವ ಗ್ರಾಮ ಸಭೆಗೆ ನಾನು Nodal ಅಧಿಕಾರಿ ಎಂದು ಅವರಿಗೆ ಗೊತ್ತಿರುವುದಿಲ್ಲ. ನಾನು ಒಮ್ಮೆ Nodal ಅಧಿಕಾರಿಗಳ ಸಭೆ ಕರೆದಾಗ, ನಾನೊಬ್ಬ Nodal ಅಧಿಕಾರಿಯನ್ನು, ನೀವು ಯಾವ ಗ್ರಾಮ ಸಭೆಗೆ Nodal ಅಧಿಕಾರಿಯಾಗಿದ್ದೀರಿ, ಎಷ್ಟು ಸಾರಿ ಭೇಟಿ ಕೊಟ್ಟಿದ್ದೀರಿ, ಏನು ಮಾಡಿದಿರಿ ಎಂದು ಕೇಳಿದೆ. ಅದಕ್ಕೆ ಅವರು ನನಗೆ ಗೊತ್ತಿಲ್ಲ, ಪಂಚಾಯಿತಿಯ PDO ಯಾರು ಇದ್ದಾರೆಂದು ನನಗೆ ಗೊತ್ತಿಲ್ಲ ಎಂದರು. ನಾನು PDO ಗಳನ್ನು ಕರೆದು ಕೇಳಿದೆ, Nodal officer ಯಾರೆಂದು ನನಗೆ ಗೊತ್ತಿಲ್ಲ ಸರ್ ಎಂದು ಹೇಳುತ್ತಾರೆ. ಅಂದರೆ, ತಾಲ್ಲೂಕು EO office ದಿಂದ ಪತ್ರಗಳು ಹೋಗಿರುತ್ತವೆ. ನೀವು Nodal officer ಇದ್ದೀರಿ ಎಂದು

Nodal officer ಗೂ ಪತ್ರ ಹೋಗಿರುತ್ತದೆ ಮತ್ತು ಅದೇ ರೀತಿಯಾಗಿ ಇಂಥವರು Nodal officer ಇದ್ದಾರೆಂದು PDO ಗೂ ಕೂಡ ಪತ್ರ ಹೋಗಿರುತ್ತದೆ. ಆದರೆ, ಅದು ಹೆಚ್ಚು ಪರಿಣಾಮಕಾರಿಯಾಗಿ Nodal officer ಗಳು ಅವರ ಜವಾಬ್ದಾರಿಯನ್ನು ನಿರ್ವಹಣೆ ಮಾಡತಕ್ಕಂಥದ್ದಕ್ಕೆ ಮತ್ತು ಅಲ್ಲಿನ ಗ್ರಾಮ ಪಂಚಾಯಿತಿಯ PDO ಗಳು ಕೂಡ ಅದನ್ನು ಸರಿಯಾಗಿ ಸಮರ್ಪಕವಾಗಿ ಮಾಡುತ್ತಿಲ್ಲ ಎನ್ನುವ ಮಾಹಿತಿಯನ್ನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ.

ಸರ್ಕಾರಿ ಅಧಿಕಾರಿಗಳ ಶ್ರೇಣಿಗಳ ಬಗ್ಗೆ ಮಾಹಿತಿ ಕೊಟ್ಟಿದ್ದಾರೆ. ಇದರಲ್ಲಿ 1401 ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಹುದ್ದೆಗಳು ಖಾಲಿ ಇವೆ ಎಂದು ಹೇಳಿದ್ದಾರೆ. ಇದು ಇನ್ನೂ ಜಾಸ್ತಿಯಾಗಿದೆ ಎಂದು ನಾನು ತಿಳಿದುಕೊಳ್ಳುತ್ತೇನೆ. ಒಬ್ಬೊಬ್ಬ ಪಿಡಿಓ ಗೆ ಎರಡು–ಮೂರು ಗ್ರಾಮ ಪಂಚಾಯಿತಿಗಳ ಚಾರ್ಜ್ ಕೊಟ್ಟಿರುತ್ತೀರಿ. ಈ ಪಂಚಾಯತಿಯಲ್ಲಿ ಕೇಳಿದರೆ ಆ ಪಂಚಾಯಿತಿಯಲ್ಲಿದ್ದೇನೆಂದು ಮತ್ತು ಆ ಪಂಚಾಯಿತಿಯಲ್ಲಿ ಕೇಳಿದರೆ ಈ ಪಂಚಾಯಿತಿಯಲ್ಲಿದ್ದೆ ಎಂದು ಹೇಳುತ್ತಾನೆ. ಆದರೆ, ಆತ ಎರಡೂ ಕಡೆ ಸಹ ಇರುವುದಿಲ್ಲ. ಗ್ರಾಮ ಪಂಚಾಯಿತಿಯ ಇಂಥ ಒಂದು ಪರಿಸ್ಥಿತಿಯಲ್ಲಿ ಇವತ್ತು ಎನ್‌ಆರ್‌ಇಜಿಎಸ್ ಕೆಲಸ ಇರಬಹುದು, ಕುಡಿಯುವ ನೀರಿನ ಕೆಲಸ ಅಥವಾ ಮನೆಗಳನ್ನು ಆಯ್ಕೆ ಮಾಡತಕ್ಕಂಥದ್ದು ಇರಬಹುದು ಮತ್ತೆ ಬೇರೆ ಬೇರೆ ಯೋಜನೆಗಳಿಗೆ ಸಂಬಂಧಪಟ್ಟಂತೆ ಗ್ರಾಮ ಸಭೆ ಮತ್ತು ಗ್ರಾಮ ಪಂಚಾಯಿತಿಯಲ್ಲಿ ಸರ್ಕಾರದ ಯೋಜನೆಗಳಿಗೆ ಫಲಾನುಭವಿಗಳನ್ನು ಆಯ್ಕೆ ಮಾಡತಕ್ಕಂಥ ಜವಾಬ್ದಾರಿ ಇರುತ್ತದೆ. ಆದರೆ, ಈ ರೀತಿಯಾದ ಒಂದು ಅರಾಜಕತೆಗೆ ಈಡಾಗತಕ್ಕಂಥ ಪರಿಸ್ಥಿತಿ ಬಹಳ ಜಾಸ್ತಿ ಇದೆ. ಏಕೆಂದರೆ, ಪಿಡಿಓ ಗಳು ಎನ್‌ಆರ್‌ಇಜಿಎಸ್ ಕೆಲಸ ನೋಡಬೇಕು. ಎನ್‌ಆರ್‌ಇಜಿಎಸ್‌ನ ಆಕ್ಟ್ ಪ್ರಕಾರ ಒಂದು ಕೆಲಸ ಮಾಡಿಸುವುದಕ್ಕೆ ಬೆಳಿಗ್ಗೆಯಿಂದ ಸಾಯಂಕಾಲದವರೆಗೆ ಆತ ಅಲ್ಲಿಯೇ ಕುಳಿತುಕೊಂಡಿರಬೇಕು. ಅಲ್ಲಿಗೆ ಬಂದವರಿಗೆಲ್ಲ ಲೆಕ್ಕಪತ್ರವನ್ನು ಕೊಡಬೇಕು ಮತ್ತೆ ಎಲ್ಲಿ ಕೆಲಸ ನಡೆಯುತ್ತಿದೆಯೋ ಅಲ್ಲಿಯೇ ಅವರ muster roll ಗಳೆಲ್ಲವನ್ನೂ ಇಟ್ಟುಕೊಂಡು ಯಾರಾದರು ಕೇಳಿದರೆ ಅವರಿಗೆ

ಕೊಡಬೇಕು. ಒಂದೊಂದು ಪಂಚಾಯಿತಿಯಲ್ಲಿ ಸುಮಾರು 15 ಹಳ್ಳಿಗಳಿದ್ದು ಏಳೆಂಟು ಕಡೆ ಕೆಲಸ ನಡೆಯುತ್ತಿದ್ದರೆ ಆತ ಏಳೆಂಟು ಕಡೆ ಹೇಗೆ ಇರುವುದಕ್ಕೆ ಸಾಧ್ಯವಾಗುತ್ತದೆ? ಪ್ರಾಕ್ಟಿಕಲ್ ಆಗಿ ಮಾಡುವುದಕ್ಕೆ ಸಾಧ್ಯವಿರುವಂಥವುಗಳ ಬಗ್ಗೆ ಕಾನೂನು ಮಾಡಿದರೆ ಅಂಥ ಕಾನೂನುಗಳಿಗೆ ಬೆಲೆ ಇರುತ್ತದೇ ಹೊರತು ಜಾರಿ ಮಾಡುವುದಕ್ಕೆ ಅವಕಾಶ ಇಲ್ಲದೇ ಇರುವಂಥವುಗಳ ಬಗ್ಗೆ ಕಾನೂನು ನಿಯಮ ಏನೇ ಮಾಡಿದರೂ ಕೂಡ ಅದಕ್ಕೆ ಬೆಲೆ ಇರುವುದಿಲ್ಲ. ಆದ್ದರಿಂದ, ಅಂಥವುಗಳನ್ನು ಮಾಡಬಾರದೆಂದು ಹೇಳುತ್ತೇನೆ. ಯಾವುದನ್ನು ಮಾಡುವುದಕ್ಕೆ ಸಾಧ್ಯವಿದೆಯೋ ಅಂಥವುಗಳನ್ನು ಹೇಳಬೇಕೇ ಹೊರತು, ಮಾಡುವುದಕ್ಕೆ ಸಾಧ್ಯವಿಲ್ಲದೆ ಇರತಕ್ಕಂಥವುಗಳ ಮೇಲೆ ಒತ್ತಾಯ ಮಾಡಬಾರದು. ಪಿಡಿಓ ಇವತ್ತು ಎನ್‌ಆರ್‌ಇಜಿಎಸ್ ಕೆಲಸ ನೋಡಬೇಕು ಮತ್ತೆ ಮನೆಗಳ ಜಿಪಿಎಸ್ ಕೆಲಸ ಮಾಡಬೇಕು. ಹಾಗೆಯೇ ನಿರ್ಮಲ ಭಾರತ ಅಭಿಯಾನದಲ್ಲಿ ಶೌಚಾಲಯಗಳ ನಿರ್ಮಾಣದ ಕೆಲಸ ನೋಡಬೇಕು ಮತ್ತೆ water supply maintenance ಮತ್ತು ಇ–ಸ್ವತ್ತು ಬಗ್ಗೆ ನೋಡಬೇಕು. Food card and BPL card ನ verification and distribution ಅನ್ನು ನೋಡಬೇಕು. ಇದು ಅಲ್ಲದೇ ಮರಳು ಸಾಗಾಣಿಕೆ ಮಾಡುವಂಥ ಸಂದರ್ಭದಲ್ಲಿ ಚೆಕ್‌ಪೋಸ್ಟ್ ಕಾಯಬೇಕು ಹಾಗೆಯೇ ಇದರ ಜೊತೆಗೆ ವಿಡಿಯೋ ಕಾನ್‌ಫೆರೆನ್ಸ್ ಮಾಡಬೇಕು ಮತ್ತೆ ಗ್ರಾಮ ಪಂಚಾಯಿತಿ ಸಭೆಗೆ ಹೋಗಬೇಕು ಹಾಗೆಯೇ ತನಿಖೆಗೆ ಮತ್ತು ಕೋರ್ಟ್ ಕೇಸ್‌ಗೆ ಹೋಗಬೇಕಾಗುತ್ತದೆ. ಇದರ ಜೊತೆಗೆ ಎನ್‌ಆರ್‌ಇಜಿಎಸ್ ಕೆಲಸವನ್ನು ಸಾರ್ವಜನಿಕರ ಪರಿಶೀಲನೆಗೆ ಒಪ್ಪಿಸಬೇಕು. ಕಛೇರಿ ತೆರೆದು ಕುಳಿತುಕೊಂಡು ಯಾರು ಬಂದು ಕೇಳಿದರೂ ಎನ್‌ಆರ್‌ಇಜಿಎಸ್ ನ ಆಕ್ಟ್ ಪ್ರಕಾರ ಅದಕ್ಕೆ ಉತ್ತರ ಕೊಡಬೇಕು. ಆದ್ದರಿಂದ, ಪಿಡಿಓಗೆ ಹೆಚ್ಚಿನ ಒತ್ತಡ ಇದೆ ಎಂದು ಹೇಳುವುದಕ್ಕೆ ಬಯಸುತ್ತೇನೆ. ಈ ರೀತಿಯಾದ ಒತ್ತಡ ಇರುವಂಥ ಸಂದರ್ಭದಲ್ಲಿ ಅವರ ಕಡೆಯಿಂದ ಉತ್ತಮವಾದ ಕೆಲಸವನ್ನು ನಿರೀಕ್ಷೆ ಮಾಡುವುದಕ್ಕೆ ಸಾಧ್ಯವಿಲ್ಲ. ಯಾವುದೇ ಒಂದು ಕೆಲಸ over-burden ಆದರೆ, quality ಕೆಲಸ suffer ಆಗುತ್ತದೆ. ಈ ಒಂದು ದೃಷ್ಟಿಯಲ್ಲಿ ಈ ಬಗ್ಗೆ ಸರ್ಕಾರಕ್ಕೆ ನಾನು ಸಲಹೆ

ಮಾಡುವುದೇನೆಂದರೆ, ಪ್ರತಿಯೊಂದು ಗ್ರಾಮ ಪಂಚಾಯಿತಿಯಲ್ಲಿ ಆ ಒಂದು ಹುದ್ದೆಯನ್ನು ಖಾಲಿ ಇಡಬಾರದು. ಬೇರೆಯವನ್ನು ಇನ್‌ಚಾರ್ಜ್ ಹಾಕತಕ್ಕಂಥ ವ್ಯವಸ್ಥೆ ಮಾಡಬಾರದು. ಆ ಹುದ್ದೆಗಳನ್ನು ಭರ್ತಿ ಮಾಡಿ ಅವರು ಪರಿಣಾಮಕಾರಿಯಾಗಿ ಪಂಚಾಯಿತಿ ಕೆಲಸಗಳು ಸುಸೂತ್ರವಾಗಿ ನಡೆಯುವಂಥ ಒಂದು ವ್ಯವಸ್ಥೆ ಆಗಬೇಕು. ಗ್ರಾಮ ಪಂಚಾಯಿತಿಗಳಲ್ಲಿ 8 ಸಾವಿರಕ್ಕಿಂತ ಜಾಸ್ತಿ ಇದ್ದರೆ 10, 12 ಲಕ್ಷ ರೂಪಾಯಿ ಕೊಡತಕ್ಕಂಥದ್ದನ್ನು ಮಾಡಿದ್ದೀರಿ. ಇದರಲ್ಲಿ 60% electricity chargesಗೆ ಹೋಗುತ್ತದೆ. ಈ 60% ಹಣವನ್ನು ಇಲ್ಲಿಯೇ ಹಿಡಿದುಕೊಳ್ಳುತ್ತಾರೆ. ಈ ಹಣ ಪಂಚಾಯಿತಿ ಅಕೌಂಟ್‌ಗೆ ಹೋಗುವುದಿಲ್ಲ. ಉಳಿದ 40% ಹಣವನ್ನು ಯಾವ ಅಕೌಂಟ್‌ಗೆ ಜಮಾ ಮಾಡುತ್ತಾರೆಂದರೆ staff salary head ಗೆ ಜಮಾ ಮಾಡುತ್ತಾರೆ. ಮಾನ್ಯ ರವಿರವರು ಹೇಳಿದ ಹಾಗೆ ವರ್ಷಕ್ಕೆ ಒಂದು ಸಾರಿ ಮಾತ್ರ ಟ್ಯೂಬ್‌ಲೈಟ್ ಮತ್ತು ಬಲ್ಬ್‌ಗಳನ್ನು ಬದಲಾವಣೆ ಮಾಡುತ್ತಾರೆ. ಆ ವರ್ಷದಲ್ಲಿ ಯಾವ ದಿವಸ ಎಂದರೆ ಜಾತ್ರೆ ಸಮಯದಲ್ಲಿ ನೆಂಟರು ಊರಿಗೆ ಬರುತ್ತಾರೆ, ಜಾತ್ರೆಗೆ ಬರುತ್ತಾರೆ? ಅವರ ಮುಂದೆ ಅವಮಾನ ಆಗಬಾರದೆಂದು ಜನರು ಒತ್ತಾಯ ಮಾಡಿ ಆ ಸಂದರ್ಭದಲ್ಲಿ ಹಾಕಿಸಿಕೊಳ್ಳುತ್ತೇವೆ. ಅಷ್ಟು ಬಿಟ್ಟರೆ ಗ್ರಾಮ ಪಂಚಾಯಿತಿಗಳಿಗೆ ಅವರದೇ ಆದಂಥ ಸಂಪನ್ಮೂಲದಿಂದ ಅಭಿವೃದ್ಧಿ ಕೆಲಸ ಮಾಡುವುದಕ್ಕೆ ತೊಂದರೆ ಇರತಕ್ಕಂಥ ಸಂದರ್ಭದಲ್ಲಿ ಆ ಪಂಚಾಯಿತಿಗಳಲ್ಲಿ ಜನರಿಗೆ ಅನುಕೂಲವನ್ನು ನಿರೀಕ್ಷೆ ಮಾಡುವುದಕ್ಕೆ ಸಾಧ್ಯ ಆಗದೇ ಇರತಕ್ಕಂಥ ಪರಿಸ್ಥಿತಿ ಇರುತ್ತದೆ. ಆದ್ದರಿಂದ, ಈ ಸಂದರ್ಭದಲ್ಲಿ ನಾನು ಒತ್ತಾಯ ಮಾಡುವುದೇನೆಂದರೆ, ಈ electricity charges ಅನ್ನ ಸರ್ಕಾರವೇ bear ಮಾಡಬೇಕಾಗುತ್ತದೆ. ಉದಾಹರಣೆಗೆ ನಮ್ಮ ತುಮಕೂರು ಜಿಲ್ಲೆಗೆ ಸೀಮಿತವಾಗಿ ಹೇಳುವುದಾರೆ, ಎಲ್ಲಾ ಪಂಚಾಯಿತಿಗಳಿಗೆ ಸಂಬಂಧಪಟ್ಟಂತೆ ಲೆಕ್ಕ ಹಾಕಿದರೆ ಒಟ್ಟು 265 ಕೋಟಿ ರೂಪಾಯಿ ಆಗುತ್ತದೆ. ಆದರೆ, electricity charges ನಮ್ಮ ಜಿಲ್ಲೆಗೆ 300 ಕೋಟಿ ರೂಪಾಯಿ ಬರುತ್ತದೆ. ಆದ್ದರಿಂದ, electricity chargesನ ಹಣವನ್ನು ಸರ್ಕಾರದವರು ಭರಿಸತಕ್ಕಂತಹ ಕೆಲಸ ಮಾಡಿದರೆ ಆ ಹಣವನ್ನು ಅಭಿವೃದ್ಧಿ ಕೆಲಸಕ್ಕೆ ಪಂಚಾಯಿತಿಯವರು ಉಪಯೋಗಿಸುವುದಕ್ಕೆ

ಸಾಧ್ಯವಾಗುತ್ತದೆ ಎಂಬುದು ನನ್ನ ಭಾವನೆ. ಹಾಗೆಯೇ ಪಂಚಾಯಿತಿಯಲ್ಲಿ power consumption ಆಡಿಟ್ ಆಗುತ್ತಿಲ್ಲ. ಉದಾಹರಣೆಗೆ ಹೇಳುವುದಾದರೆ, ಎರಡು ಬೋರ್‌ವೆಲ್‌ಗಳನ್ನು ಹಾಕಿಸಿದ್ದು, ಅವುಗಳು ಡ್ರೈ ಆಗಿರುತ್ತವೆ. ಆನಂತರ ಇನ್ನೊಂದು ಬೋರ್‌ವೆಲ್ ಹಾಕಿ ಅದಕ್ಕೆ ಏನಾದರೂ ಪವರ್ ಕನೆಕ್ಷನ್ ತೆಗೆದುಕೊಂಡರೆ ಆ ಪಂಚಾಯಿತಿಯಲ್ಲಿ ಅದನ್ನು ಕ್ಯಾನ್ಸಲ್ ಮಾಡಿಸಿರುವುದಿಲ್ಲ ಮತ್ತೆ ಶಿಫ್ಟಿಂಗ್ ಸಹ ಮಾಡಿರುವುದಿಲ್ಲ. ಬೆಸ್ಕಾಂ ನವರು ಅದಕ್ಕೆ ಮತ್ತು ಇದಕ್ಕೂ ಸಹ ಬಿಲ್ ಮಾಡುತ್ತಾರೆ. ಆದ್ದರಿಂದ, ಅಲ್ಲಿ ಪವರ್ ಆಡಿಟ್ ಆಗದೇ ಗ್ರಾಮ ಪಂಚಾಯಿತಿಗಳ ಮೇಲೆ ಬಿಲ್‌ನ ಹೆಚ್ಚಿನ ಹೊರೆ ಬೆಸ್ಕಾಂನಿಂದ ಆಗುತ್ತದೆ. ಅದನ್ನು ತಪ್ಪಿಸತಕ್ಕಂಥದ್ದಕ್ಕೆ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಪಂಚಾಯಿತಿಯಲ್ಲಿ ನೀರಿನ ಸರಬರಾಜಿಗೆ ನಾವು ನೂರಾರು ಕೋಟಿ ರೂಪಾಯಿಗಳ ಬೇಡಿಕೆಯನ್ನು ಇಡುತ್ತೇವೆ, ಹಣ ಕೂಡ ದೊರಕುತ್ತದೆ. ಜಿಲ್ಲಾ ಪಂಚಾಯತ್‌ನ ಇಂಜಿನಿಯರಿಂಗ್ ಇಲಾಖೆಯವರು ಪಂಚಾಯಿತಿಯಲ್ಲಿ ಒಂದು ಬೋರ್‌ವೆಲ್‌ಅನ್ನು ಹಾಕುತ್ತಾರೆ. ಅದು completion ಆದ ಮೇಲೆ ಪಂಚಾಯಿತಿವರೆಗೆ hand over ಮಾಡುತ್ತಾರೆ. ಆದರೆ, ಪಂಚಾಯಿತಿಯಲ್ಲಿ ಹಳೇ ಬೋರ್‌ವೆಲ್‌ಗೆ ಹಾಕಿದ್ದಂಥ ಮೋಟಾರ್, ಪೈಪ್ಸ್, ಸ್ಟಾರ್ಟರ್‌ಗಳ ಬಗ್ಗೆ ಒಂದೂ ಕಡೆ ಕೂಡ ಲೆಕ್ಕ ಇಲ್ಲ. ಫೇಲ್ ಆಗಿರುವ ಬೋರ್‌ವೆಲ್‌ನಲ್ಲಿರತಕ್ಕಂಥ ಸಾಮಗ್ರಿಗಳನ್ನು ಗುಜರಿ ಅಂಗಡಿಗೆ ಹಾಕಿದರೆ ಸುಮಾರು 5,000 ರೂಪಾಯಿ ಬರುತ್ತದೆಂದು ಮಾನ್ಯ ತಮ್ಮಣ್ಣನವರು ಹೇಳಿದ್ದಾರೆ. ಪ್ರತಿ ವರ್ಷ ಒಂದು ಜಿಲ್ಲೆಯಲ್ಲಿ 1000, 500 ಬೋರ್‌ವೆಲ್ ಕೊರೆಸಿದ್ದೇವೆ, ಒಂದು ಕ್ಷೇತ್ರದಲ್ಲಿ 150 ಬೋರ್‌ವೆಲ್‌ಗಳನ್ನು ಕೊರೆಸಿದ್ದೇವೆಂದು ಹೇಳಬಹುದು. ಹೊಸ ಬೋರ್‌ವೆಲ್‌ಗಳನ್ನು ನಾವೇನು ಹೊಸ ಗ್ರಾಮಗಳಿಗೇನೂ ಕೊರೆಸುವುದಿಲ್ಲ. ಇರತಕ್ಕಂತಹ ಹಳೆಯ ವ್ಯವಸ್ಥೆಯಲ್ಲಿ ಏನು ಫೇಲ್ಯೂರ್ ಆಗಿರುತ್ತವೆಯೋ ಅದರ replacement ಅನ್ನು ಮಾತ್ರ ಮಾಡಿರುತ್ತೇವೆ. ಆ replacement ಮಾಡತಕ್ಕಂಥ ಸಂದರ್ಭದಲ್ಲಿ ಹಳೆಯ ಸಾಮಗ್ರಿಗಳನ್ನು ಯಾವ ಗ್ರಾಮ ಪಂಚಾಯಿತಿಗಳಲ್ಲಿ ಕೂಡ ಅದರ ಬಗ್ಗೆ ಲೆಕ್ಕ ಇಡತಕ್ಕಂಥದ್ದಾಗಲಿ ಅಥವಾ ಅದನ್ನು ಮರು

ಮಾರಾಟ ಮಾಡಿ ಹಣ ಜಮಾ ಮಾಡತಕ್ಕಂಥ ಕೆಲಸ ಆಗುತ್ತಿಲ್ಲ. ಆದರೆ, ಈ ಕೆಲಸ ಆಗಬೇಕಾಗುತ್ತದೆ. ಅಂದರೆ, ಪ್ರತಿಯೊಂದು ಗ್ರಾಮ ಪಂಚಾಯಿತಿಯಲ್ಲಿ ಕೂಡ ಅಲ್ಲಿ ಏನೇನು ಸಾಮಗ್ರಿಗಳು ಇರುತ್ತವೆಯೋ ಅದರ ಬಗ್ಗೆ ಹಾಗೂ ಅದರ ಜೊತೆಗೆ ಪಂಚಾಯಿತಿಗೆ ಸೇರಿರುವ property ಬಗ್ಗೆ ಕೂಡ ಒಂದು inventory ಮಾಡತಕ್ಕಂಥದ್ದು ಸೂಕ್ತವಾದಂಥದ್ದು. ಆದ್ದರಿಂದ, ಇದರ ಬಗ್ಗೆ ಸರ್ಕಾರ ಅತೀ ತುರ್ತಾಗಿ ಕ್ರಮ ಕೈಗೊಳ್ಳಬೇಕೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಪಂಚಾಯಿತಿಯಲ್ಲಿ ಪ್ರತಿ ವರ್ಷ ಲೋಕಲ್ ಆಡಿಟ್‌ನವರು ಆಡಿಟ್ ಮಾಡುತ್ತಾರೆ. Misappropriation ಆಗಿದೆ ಎಂದು ಲೋಕಲ್ ಆಡಿಟ್‌ನವರು ಆಡಿಟ್ ವರದಿಯಲ್ಲಿ ನಮೂದು ಮಾಡಿರುತ್ತಾರೆ. ಆಡಿಟ್ ರಿಪೋರ್ಟ್‌ನಲ್ಲಿ ಈ ರೀತಿಯಾಗಿದೆ ಎಂದು ಇದುವರೆಗೆ ರಾಜ್ಯದಲ್ಲಿರುವ ಒಂದೇ ಒಂದು ಗ್ರಾಮ ಪಂಚಾಯಿತಿಯಲ್ಲಿನ ಒಬ್ಬ ಅಧಿಕಾರಿ ಮೇಲೆ ಕ್ರಮ ತೆಗೆದುಕೊಂಡಿರುವ ಒಂದು ನಿರ್ದಶನ ಇದುವರೆಗೂ ಇಲ್ಲ. ಅಂದರೆ, ಯಾವುದೇ ಒಂದು ಗ್ರಾಮ ಪಂಚಾಯಿತಿಯಲ್ಲಿ ಹಣ ದುರುಪಯೋಗ ಆಗಿತಕ್ಕಂತಹ ಸಂಗತಿ ಆಡಿಟ್‌ನಲ್ಲಿ ನಮೂದು ಆಗಿಲ್ಲವೆಂಬ ಭಾವನೆ ಬರುತ್ತದೆ. ಆದ್ದರಿಂದ, ಆಡಿಟ್ ವರದಿಯ ಮೇಲೆ ರಿವ್ಯೂ ಮಾಡತಕ್ಕಂಥದು ಅತ್ಯವಶ್ಯಕ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ ಹಾಗೆಯೇ ಗ್ರಾಮ ಪಂಚಾಯಿತಿಯಲ್ಲಿನ ಎನ್‌ಆರ್‌ಜಿಇಎಸ್ ಕಾರ್ಯಕ್ರಮಗಳ ಬಗ್ಗೆ ನಾನು ಬೇರೆ ಸಂದರ್ಭದಲ್ಲಿ ಹೇಳುತ್ತೇನೆ. ಆದರೆ, ಪ್ರತಿಯೊಂದು ಕೆಲಸಕ್ಕೂ ಕೂಡ ಗ್ರಾಮಸಭೆ ಮತ್ತು ಗ್ರಾಮ ಪಂಚಾಯಿತಿ ಸಭೆಗಳು ಕರಾರುವಕ್ಕಾಗಿ ನಡೆಯತಕ್ಕಂಥದ್ದಕ್ಕೂ ಕೂಡ ಕ್ರಮ ವಹಿಸಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೆನೆ. ಗ್ರಾಮೀಣ ಭಾಗದಲ್ಲಿರುವ ರಸ್ತೆಗಳ ಬಗ್ಗೆ ನಾನು ಈಗಾಗಲೇ ಹೇಳಿದ ಹಾಗೆ ಗ್ರಾಮೀಣ ರಸ್ತೆಗಳು 1,55,546 ಕಿ.ಮೀ. ಇದೆ ಎಂದು ಅವರು ಕೊಟ್ಟಿರುವ ವರದಿಯಲ್ಲಿದೆ. ಇದರಲ್ಲಿ ಡಾಂಬರ್ ರಸ್ತೆ 52,184 ಕಿ.ಮೀ., ಜಲ್ಲಿ ರಸ್ತೆ 21,495 ಕಿ.ಮೀ. ಇದೆ ಎಂದು ಹೇಳಿದ್ದಾರೆ. ಇದು ಇನ್ನೂ ಹೆಚ್ಚು ಇರಬಹುದೇ ಹೊರತು ಕಡಿಮೆ ಆಗುವುದಕ್ಕೆ ಸಾಧ್ಯವಿಲ್ಲ. 75,867 ಕಿ.ಮೀ. ಮಣ್ಣಿನ ರಸ್ತೆಗಳು ಇವೆ ಎಂದು

ಗುರುತಿಸಿದ್ದಾರೆ. ಈ ರಸ್ತೆಗಳನ್ನು ಯಾವಾಗ ಅಭಿವೃದ್ಧಿಪಡಿಸಿ ಅಲ್ಲಿನ ಜನರಿಗೆ ಅನುಕೂಲ ಮಾಡಿಕೊಡುತ್ತಾರೆಂಬ ಬಗ್ಗೆ ಒಂದು comprehensive report ಆಗಲಿ ಅಥವಾ ಇಷ್ಟು ವರ್ಷಕ್ಕೆ ಇಷ್ಟೆಲ್ಲ ಮಾಡುತ್ತೇವೆಂಬ ಒಂದು road map ಅನ್ನು ಕೊಡತಕ್ಕಂಥ ಒಂದು ಕಾರ್ಯಕ್ರಮವನ್ನು ಮಾಡತಕ್ಕದ್ದು ಅತ್ಯವಶ್ಯಕವೆಂದು ಹೇಳುವುದಕ್ಕೆ ಬಯಸುತ್ತೇನೆ. ಇದರ ಜೊತೆಯಲ್ಲಿ ನಬಾರ್ಡ್ ವತಿಯಿಂದ RIDF ಯೋಜನೆಯಲ್ಲಿ ಬಹಳಷ್ಟು ಕೆಲಸಗಳನ್ನು ಮಾಡಿದ್ದಾರೆ. RIDF ಕೆಲಸಗಳಲ್ಲಿ ಒಂದು ಹಂತದವರೆಗೆ ಕೂಡ maintenance ಸೇರುತ್ತಿರಲಿಲ್ಲ. ಈಗಾಗಲೇ RIDF –1 ರಿಂದ ಮಾಡಿದಂತಹ ರಸ್ತೆಗಳು ಇವತ್ತಿನದಿವಸ ಅವೆಲ್ಲ ಹಾಳಾಗುವಂಥ ಪರಿಸ್ಥಿತಿಗೆ ಬಂದಿವೆ. ಈಗ ಆ ರಸ್ತೆಗಳ maintenance ಗೆ ಯಾರೂ ಹಣ ಒದಗಿಸುತ್ತಿಲ್ಲ. ಇತ್ತೀಚಿನ RIDF works ಗೆ ಎಸ್ಟಿಮೇಟ್‌ನಲ್ಲಿ 5 ವರ್ಷಗಳ ವರೆಗೆ ನಿರ್ವಹಣೆ ಮಾಡಬೇಕೆಂಬ clause ಅಥವಾ in-built ಇರುತ್ತದೆ. ಆ ಪ್ರಕಾರ ಅದನ್ನು estimate ನಲ್ಲಿ ಮಾಡುತ್ತಾರೆ. ಆದರೆ ಹಳೆಯ ರಸ್ತೆಗಳಿಗೆ ಆ ಒಂದು ಪದ್ಧತಿ ಇರಲಿಲ್ಲ. ಈಗ ಆ ರಸ್ತೆಗಳೆಲ್ಲಾ ಹಾಳಾಗಿದೆ. ಈಗ ಆ ಎಲ್ಲಾ ರಸ್ತೆಗಳಿಗೂ ಕೂಡ ಮತ್ತೆ re-chip carpet ಮಾಡದೇ ಇದ್ದರೆ ಪೂರ್ಣವಾಗಿ ಹಾಳಾಗಿ ಹೋಗುತ್ತವೆ. ಮತ್ತೆ ಹೆಚ್ಚಿನ ಒಂದು ಹಣವನ್ನು ತೊಡಗಿಸತಕ್ಕಂಥ ಒಂದು ಸಂದರ್ಭ ಇರತಕ್ಕಂಥ ಹಿನ್ನೆಲೆಯಲ್ಲಿ ಈ ಒಂದು RIDF ನಲ್ಲಿ ಪ್ರಾರಂಭಿಕವಾಗಿ ತೆಗದುಕೊಂಡಿರುವಂಥ ರಸ್ತೆಗಳು ಏನಿದ್ದವು ಆ ರಸ್ತೆಗಳಿಗೆ ಮತ್ತೆ re-chip carpet ಮಾಡಬೇಕು. ನಬಾರ್ಡ್ ಮತ್ತು RIDF ಎರಡೂ ಒಂದೇ. RIDF fund ನಬಾರ್ಡ್ ನವರೇ funding ಮಾಡಿರತಕ್ಕಂಥದ್ದು.

ಶ್ರೀ ವೈ.ಎಸ್.ವಿ. ದತ್ತ:– ಮಾನ್ಯ ಉಪಾಧ್ಯಕ್ಷರೆ, RIDF ನಬಾರ್ಡ್‌ದಿಂದಲೇ ಬಂದಿರುವುದು. ಆದರೆ ನೀವು ಹೇಳಿರುವುದು ಕರೆಕ್ಟಾಗಿದೆ. ಹಿಂದೆ ಮಾಡಿದ ರಸ್ತೆಗಳಿಗೆ ಈ condition ಇದ್ದಿರಲಿಲ್ಲ. ಆದರೆ ಅವರು maintain ಮಾಡಬೇಕೆಂದು ಇರಲಿಲ್ಲ. ಹಾಗಾಗಿ ಈಗ ಒಂದು ವರ್ಷಕ್ಕೆ ಮತ್ತು ಎರಡು ವರ್ಷಕ್ಕೆ ರಸ್ತೆಗಳು ಹಾಳಾಗಿ ಹೋಗಿವೆ. ಈಗ ನಮಗೆ ಅರ್ಜೆಂಟ್ ಆಗಿ ದುಡ್ಡು ಬೇಕಾಗಿರುವುದು. ಮೊದಲು ತೆಗೆದುಕೊಂಡ RIDF ನಲ್ಲಿ

ಯಾವ ಶರತ್ತು ಇರಲಿಲ್ಲ. ಆ maintenance condition ಇದ್ದಿರಲಿಲ್ಲ. ಅವುಗಳಿಗೆ ಅರ್ಜೆಂಟ್ ಆಗಿ ಗುಂಡಿಗಳನ್ನು ಮುಚ್ಚುವುದಕ್ಕಾದರೂ ದುಡ್ಡು ಕೊಡಬೇಕಾಗಿದೆ. ಅದು ಬಹಳ ತಾಪತ್ರಯ ಆಗಿರುವುದು. RIDF ಹೋದ ವರ್ಷ ಕೊಡಲಿಲ್ಲ. ಒಂದು ರೂಪಾಯಿಯೂ ಬಂದಿಲ್ಲ.

ಶ್ರೀ ಕೆ.ಎನ್. ರಾಜಣ್ಣ:- ಎಲ್ಲಾ ರಸ್ತೆಗಳೂ ಈಗಾಗಲೇ ಪೂರ್ಣವಾಗಿ ಹಾಳಾಗಿ ಹೋಗಿವೆ. ಹೊಸದಾಗಿ ಮಾಡಬೇಕಾಗಿದೆ. ಆ ಒಂದು ರಸ್ತೆಗಳ ಬಗ್ಗೆ ಗಮನ ಹರಿಸಬೇಕು ಎನ್ನತಕ್ಕಂತಹ ವಿಚಾರ.

ಶ್ರೀ ವೈ.ಎಸ್.ವಿ. ದತ್ತ:- ಇನ್ನೊಂದು ವಿಷಯ. ಈಗ ರಸ್ತೆಗಳು ಹಾಳಾಗಿದೆ. ನಮಗೂ ಮತ್ತು ನಿಮಗೂ ಅದರ ಅನುಭವವಾಗಿದೆ. ನಮ್ಮ ಜನ ಏನು ಮಾಡುತ್ತಾರೆಂದರೆ, MLA fund ನಲ್ಲಿ ಎರಡು ಲಕ್ಷ ಹಾಕಿ, ಮೂರು ಲಕ್ಷ ರೂ.ಗಳನ್ನು ಹಾಕಿ ಎಂದು ಹೇಳುತ್ತಾರೆ. 'ರಾವಣಾಸುರನ ಹೊಟ್ಟೆಗೆ ಅರೆ ಕಾಸಿನ ಮೊಸರು'. ಎರಡು ಬಾಂಡ್ಲಿ ಜೆಲ್ಲಿ 10 ಮಂಕ್ರಿ ಮಣ್ಣು ಹಾಕಿಬಿಟ್ಟರೆ ದುಡ್ಡು close. ಒಂದು ರೀತಿಯಲ್ಲಿ 2 ಲಕ್ಷ ರೂ.ಗಳನ್ನು ಯಾವುದೋ ವರ್ಕರ್‌ಗೆ ಹಾಕಿಕೊಂಡು MLA ಭ್ರಷ್ಟಾಚಾರ ಮಾಡಿಬಿಟ್ಟ ಎಂದು ಅದು ಬೇರೆ ದೂರು. ಅದಕ್ಕೋಸ್ಕರ ದಯವಿಟ್ಟು ನೀವು ಅದಕ್ಕೊಂದು ಇಡಗಂಟಾಗಿ ಏನಾದರೂ ಒಂದು ವ್ಯವಸ್ಥೆಯನ್ನು ಮಾಡಬೇಕು. PWD ಯವರು ಮಾಡಿದಂತೆ ಮಾಡಬೇಕು.

ಶ್ರೀ ಕೆ.ಎನ್. ರಾಜಣ್ಣ:- ಮಾನ್ಯ ಉಪಾಧ್ಯಕ್ಷರೆ, ಗ್ರಾಮೀಣ ಮೂಲಭೂತ ಸೌಕರ್ಯಗಳು ಜೀವಿಕಾ, NRLM, ಸಂಜೀವಿನಿ, SGSY ಹೋಗಿ ಅದು NRLM ಆಯಿತು. NRLM ಮತ್ತೆ ಸಂಜೀವಿನಿ ಎಂದು ಆಯಿತು. ಇವೆಲ್ಲಾ ಕಾರ್ಯಕ್ರಮಗಳೂ ಕೂಡ ಬೇರೆ ಬೇರೆ. SGSY ನಲ್ಲಿ ಬೇರೆ ಬೇರೆ ತರಬೇತಿ, ಸಿಬ್ಬಂದಿಗಳ ತರಬೇತಿ ಇವೆಲ್ಲವನ್ನು ಮಾಡುತ್ತಿದ್ದಾರೆ. ಸ್ವಸಹಾಯ ಗುಂಪುಗಳ ತರಬೇತಿ, ಸಂಪನ್ಮೂಲ, ತಾಲ್ಲೂಕುಗಳ ಕಾರ್ಯತಂತ್ರ ಇವೆಲ್ಲಾ ಮಾಡುತ್ತಿದ್ದಾರೆ. ಸ್ವಸಹಾಯ ಗುಂಪುಗಳಿಗೆ ಯಾರ ಮೂಲಕ ಮಾಡುತ್ತಿದ್ದಾರೆ? ಅವರಿಗೆ ಟ್ರೇನಿಂಗ್ ಕೊಡುವುದು ಎಲ್ಲಾ ಮಾಡುತ್ತಾರೆ.

ಮಂಗಳಾ ಕಿಸಾನ್ ಸಶಸ್ತ್ರೀಕರಣ ಪರಿಯೋಜನೆ ಎನ್ನತಕ್ಕಂಥದ್ದು. ಇವೆಲ್ಲವೂ ಕೂಡ ಮೊದಲಿಗೆ Green Foundation ಸಂಸ್ಥೆ, Initiative for Development Foundation (IDF) ಸಂಸ್ಥೆ, ತುಮಕೂರು, ಇವರು ಕೊಟ್ಟಿರತಕ್ಕಂಥದ್ದರಲ್ಲಿ ಒಂದು ಪಟ್ಟಿಯೇ ಇದೆ. ಇವರೆಲ್ಲರೂ ಯಾವ ಊರಿನವರು, ಇವರು ಎಲ್ಲಿಯವರು, ಎಷ್ಟೆಷ್ಟು ಹಣ ಹಂಚಿದ್ದಾರೆ ಎನ್ನತಕ್ಕಂಥದ್ದು ಎನ್ನುವುದರ ಬಗ್ಗೆ ಸರ್ಕಾರ ಮಾಹಿತಿಯನ್ನು ಕೊಡಬೇಕಾಗುತ್ತದೆ. ಈಗ ನನ್ನ ಹತ್ತಿರ ಇರತಕ್ಕಂಥದ್ದು, ಮೊನ್ನೆ ಮೊನ್ನೆ ಕೂಡ ಯಾವುದೋ NGO ಗಳಿಗೆ ಕೇಂದ್ರ ಸರ್ಕಾರದ್ದು ಮತ್ತು ನಮ್ಮ ರಾಜ್ಯ ಸರ್ಕಾರದ್ದು ಷೇರು ಹಣ ಬಿಡುಗಡೆ ಮಾಡಿದ್ದಾರೆ. ಸುಮಾರು 147 ಕೋಟಿ ರೂ.ಗಳಷ್ಟು ಒಂದು ಸ್ಕೀಂ ಇದೆ. ಅದರಲ್ಲಿ ಈಗಾಗಲೇ ಸುಮಾರು 25 ಕೋಟಿ ರೂ.ಗಳಷ್ಟು ಮೇಲೆ ಹಣ ಬಿಡುಗಡೆ ಆಗಿದೆ ಎನ್ನತಕ್ಕದ್ದು ಇದೆ. ಈ NGO ಗಳ ಹೆಸರನ್ನು ಹಾಕುತ್ತಾರೆಯೇ ಹೊರತು ಅವರು ಯಾವ ಊರಿನವರು ಎಂದು ಹೇಳುವುದಿಲ್ಲ. ಐಕ್ಯ, ILFS, Captains, Sriraman, New Horizon, Techno Park, Vajees Laras, ಇವೆಲ್ಲ ಏತಕ್ಕೆಂದರೆ, ಬರಿ ತರಬೇತಿ ಮಾಡುವುದು, ಬೇರೆ ಬೇರೆ ಮಹಿಳೆಯರಿಗೆ ಸಶಸ್ತ್ರೀಕರಣ ಮಾಡುವುದು. ಇದರಲ್ಲಿ ಸುಮಾರು ಕೇಂದ್ರದ ಪಾಲು 27 ಕೋಟಿ ರೂ.ಗಳು ಕಳೆದ ವರ್ಷದಲ್ಲಿ ಈಗಾಗಲೇ ಆಗಿರುವುದು. ರಾಜ್ಯ ಸರ್ಕಾರದ್ದು 9.21 ಕೋಟಿ ರೂ.ಗಳು. ಈಗಾಗಲೇ ಕೇಂದ್ರ ಗ್ರಾಮೀಣ ಅಭಿವೃದ್ಧಿ ಮಂತ್ರಾಲಯದಿಂದ ಅನುಮೋದನೆಗೊಂಡಿರತಕ್ಕಂಥದ್ದು 7 ಅನುಷ್ಠಾನ ಸಂಸ್ಥೆಗಳ ಹೆಸರುಗಳನ್ನು ಹಾಕಿದ್ದಾರೆ. ಆದರೆ ಅವರಿಗೆ ಇನ್ನೂ ಕೇಂದ್ರ ಅನುದಾನ ನಿರೀಕ್ಷೆಯಲ್ಲಿದೆ ಎಂದು. ಇವರದ್ದು ಎಲ್ಲಾ ಏನು ಕೆಲಸ, ಇವರು ಏನು ಕೆಲಸ ಮಾಡುತ್ತಿದ್ದಾರೆ, ಏನು ಮಾಡುತ್ತಿಲ್ಲ ಮಾಡುವ ಕೆಲಸ ಸರಿ ಇದೆಯಾ, ಇಲ್ಲವಾ ಇದನ್ನು ನೋಡುವವರು ಯಾರು?

ಶ್ರೀ ವೈ.ಎಸ್.ವಿ. ದತ್ತ:– ನೋಡಬೇಕಾದದ್ದು ಇಲ್ಲ. ಅವರೇ ಒಂದು ರೀತಿಯಲ್ಲಿ ಎಲ್ಲರನ್ನೂ ಕಂಟ್ರೋಲ್ ಮಾಡುವವರು ಆಗಿ ಬಿಟ್ಟಿದ್ದಾರೆ. ಈಗ NGO ಗಳಷ್ಟು powerful ಯಾರೂ ಇಲ್ಲ.

ಶ್ರೀ ಕೆ.ಎನ್. ರಾಜಣ್ಣ:- ಮಾನ್ಯ ಉಪಾಧ್ಯಕ್ಷರೆ, ನಿನ್ನೆ ಮೊನ್ನೆ ನಾನು ಒಂದು ಮಾಹಿತಿಯನ್ನು ತಿಳಿದುಕೊಂಡೆ. ತುಮಕೂರಿನಲ್ಲಿ ಯಾರಿಗೋ ಒಂದಿಬ್ಬರಿಗೆ ಕೊಟ್ಟಿದ್ದಾರೆ. IDF ಯಾವುದೋ ಒಂದು ಅಡ್ರೆಸ್ ಇಟ್ಟುಕೊಂಡಿದ್ದಾರೆ. ಮಹಿಳಾ ಸಶಸ್ತ್ರೀಕರಣ ಪರಿಯೋಜನೆ ಎಂದು. 7.30 ಕೋಟಿ ರೂ. ಗಳನ್ನು ಅವರಿಗೆ ಕೊಡತಕ್ಕಂಥದ್ದು. ಬೆಳಗಾವಿ ಜಿಲ್ಲೆಯ ರಾಯಭಾಗನಲ್ಲಿ 7.30 ಕೋಟಿ ರೂ.ಗಳಲ್ಲಿ ತೆಗೆದುಕೊಂಡಿದ್ದಾರೆ. ನಾನು ಕೇಳತಕ್ಕಂಥದ್ದು ಹಿಂದೆ ಹನುಮಂತರಾವ್ ಕಮಿಟಿಯ ವರದಿಯಲ್ಲಿ NGO ಗಳಿಗೆ encourage ಮಾಡಬೇಕು ಎನ್ನತಕ್ಕಂಥದ್ದು ಇತ್ತು. ಈ NGO ಗಳ ಬಗ್ಗೆ ಮಾನ್ಯ ಗೋವಿಂದ ಎಂ. ಕಾರಜೋಳರವರಿಗೆ ಎಲ್ಲಾ ಗೊತ್ತಿರಬಹುದು. ಇವರು ಕೇಂದ್ರ ಸರ್ಕಾರದ ಹಣ ತೆಗೆದುಕೊಳ್ಳುತ್ತಾರೆ ಎನ್ನತಕ್ಕಂಥ ಭಾವನೆ ಅಲ್ಲ. ಅದರಲ್ಲಿ ರಾಜ್ಯ ಸರ್ಕಾರದ ಪಾಲು ಕೂಡ ಇದೆ. ಇವರು ಯಾವ ಉದ್ದೇಶಕ್ಕೋಸ್ಕರ ನಿಯೋಜನೆ ಮಾಡಿದ್ದಾರೆ? ಆ ಉದ್ದೇಶದಂತೆ ಇವರು ಕೆಲಸ ಮಾಡಿದ್ದಾರಾ ಅಥವಾ ಇಲ್ಲವಾ ಎನ್ನತಕ್ಕಂದ್ದು ನಮ್ಮ ರಾಜ್ಯ ಸರ್ಕಾರದಿಂದ ಯಾವುದೇ ರೀತಿಯ supervision ಆಗಲಿ, ಅವರ ಕೆಲಸದ ಬಗ್ಗೆ ನೋಡತಕ್ಕಂಥದ್ದು ಯಾವುದೂ ಇಲ್ಲ. ಆದ್ದರಿಂದ ಈ NGO ಗಳಿಗೆ ಮಹಿಳಾ ಕಿಸಾನ್ ಸಶಸ್ತ್ರೀಕರಣ ಪರಿಯೋಜನೆಯಲ್ಲಿ ಕೊಡತಕ್ಕಂಥ ಏನು ಹಣ ಇದೆ ಇದು ಸದುಪಯೋಗವಾಗುವ ರೀತಿಯಲ್ಲಿ ಸರ್ಕಾರ ಗಮನ ಹರಿಸಬೇಕು ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಸರ್ಕಾರದ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಇದಾದ ಮೇಲೆ Sustainability Grant ಬಗ್ಗೆ ನಾನು ನಮ್ಮ ಜಿಲ್ಲೆಗೆ ಸೀಮಿತವಾಗಿ ಹೇಳುವುದಾದರೆ ಬೇರೆ ಬೇರೆ ಜಿಲ್ಲೆಗಳಲ್ಲಿ ಕಾಮಗಾರಿಗಳ ಸಂಖ್ಯೆ ಹೆಚ್ಚು ಇದೆ. ಆದರೆ ನಮ್ಮ ಜಿಲ್ಲೆಯಲ್ಲಿ ಒಂದೇ ಒಂದು ಕಾಮಗಾರಿ. 38 ಕಾಮಗಾರಿಗಳು ಇವೆ, ಸಾಧನೆ ಒಂದೇ ಒಂದು. ಪೂರ್ಣವಾಗಿ 74 ಕೋಟಿ ರೂ.ಗಳು ಆ ಒಂದು Sustainability Grant ಅನ್ನು ಪೂರ್ಣವಾಗಿ ಹಣವನ್ನು ವಿನಿಯೋಗ ಮಾಡುತ್ತಾರೆ. ಅದೂ ಕಾಮಗಾರಿ ಯಾವುದು ಎಂದು ಹೇಳಿದರೆ, ಕೆಲವೊಂದು ಅಂತರ್ಜಲವನ್ನು ಅಭಿವೃದ್ಧಿ ಪಡಿಸತಕ್ಕಂಥ ಕಾಮಗಾರಿಗಳು ಎಂದು ಹೇಳುತ್ತಾರೆ. ಆದರೆ

ಅಂತರ್ಜಲವನ್ನು ಅಭಿವೃದ್ಧಿ ಪಡಿಸತಕ್ಕಂಥ ಕಾಮಗಾರಿಗೆ ಬೇಕಿರತಕ್ಕಂಥ source ಹೇಮಾವತಿ ಎಂದು ಹೇಳಿ ತೋರಿಸುತ್ತಾರೆ. ಈಗ ನನ್ನ ಹತ್ತಿರ ಹೇಮಾವತಿ ನೀರಿನ allocation ಮಾಹಿತಿ ಇದೆ. ಇವರು ಹೇಮಾವತಿ ನೀರಿನ allocacation ಅನ್ನು ಮಾಡಿರತಕ್ಕಂಥವರು ಈಗಾಗಲೇ Cauvery water Tribunal ಮುಂದೆ ಕೂಡ ಅದನ್ನು file ಮಾಡಿದ್ದಾರೆ. ಅದರಲ್ಲಿ ಸ್ವಲ್ಪವೂ ಕೂಡ ನೀರಿನ provision ಮಾಡಿಲ್ಲ. ಆದರೆ source ಇಲ್ಲದೇ ಇವರು 74 ಕೋಟಿ ರೂ.ಗಳ ಹಣ ಅಲ್ಲಿ ಹಾಕಿ ಆ ಕಾಮಗಾರಿ ಮುಗಿಸುತ್ತೇವೆಂದು ಹೇಳಿದರೆ RDPR ನಲ್ಲಿ ಈ ರೀತಿಯ ಕೆಲಸಗಳು ನಡೆಯತಕ್ಕಂಥದ್ದು ಯಾವ ರೀತಿಯ ಒತ್ತಾಯದ ಮೇಲೆ ಇವರು ಮಾಡುತ್ತಾರೆ, ಯಾವ ಪುರುಷಾರ್ಥ ಇಟ್ಟುಕೊಂಡು ಮಾಡುತ್ತಾರೆ. ಏನು ಸಾಧನೆ ಮಾಡುತ್ತಾರೆ? 74 ಕೋಟಿ ರೂ.ಗಳ Sustaniability Grant ಅನ್ನು ನಮ್ಮ ತುಮಕೂರು ಜಿಲ್ಲೆಗೆ ಒಂದೇ ಕಾಮಗಾರಿಗಾಗಿ ಬಂದಿದೆ. ಹೇಮಾವತಿ ನದಿ ನೀರು ಎಂದು ಹೇಳುತ್ತಾರೆ. ಅದರಿಂದ ಒಂದೇ ಒಂದು ಡ್ರಾಪ್ ನೀರು ಕೂಡ allocation ಆಗಿಲ್ಲ. ಹೀಗೆ ಇರುವಾಗ ಆ ಒಂದು ಕಾಮಗಾರಿಯನ್ನು ಮಾಡತಕ್ಕಂಥದ್ದಕ್ಕೆ ವಿನಿಯೋಗ ಮಾಡತಕ್ಕಂಥ ಹಣ ಕೂಡ ಅದು ಸಂಪೂರ್ಣವಾಗಿ ವ್ಯರ್ಥ. ಇಂತಹ ಕಾಮಗಾರಿಗಳಿಗೆ ಯಾರ್‍ಯಾರು ಜವಾಬ್ದಾರಿ ಇರತಕ್ಕ ಅಧಿಕಾರಿಗಳು ಇರುತ್ತಾರೆ, ಆ ಅಧಿಕಾರಿಗಳ ಮೇಲೆ ಕ್ರಮವನ್ನು ತೆಗೆದುಕೊಳ್ಳಬೇಕು ಎನ್ನತಕ್ಕಂಥ ಒಂದು ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. NREGS ಕೆಲಸಗಳು ಇಲ್ಲದೇ ಇದ್ದರೆ ಗ್ರಾಮ ಪಂಚಾಯಿತಿಗಳಿಗೆ ಮೂರು ಕಾಸಿನ ಕೆಲಸ ಮಾಡತಕ್ಕಂಥ ಅವಕಾಶ ಇರಲಿಲ್ಲ. NREGS ಕೆಲಸಗಳ ಬಗ್ಗೆ ಕೇಂದ್ರ ಸರ್ಕಾರದ ಒಂದು guidelines ಇದೆ. ರಾಜ್ಯ ಸರ್ಕಾರ ಕೂಡ ಆ guidelinesಗೆ ಪೂರಕವಾಗಿ ಕೆಲಸ ಮಾಡಬೇಕು ಎನ್ನತಕ್ಕಂಥದ್ದು. ಆದರೆ ಯಾವ್ಯಾವನ್ನು ರಾಜ್ಯ ಸರ್ಕಾರಕ್ಕೆ ಮಾಡಲೇಬೇಕೆಂದು ಒತ್ತಡ ಇದೆ ಅದನ್ನು ಮಾಡುವುದೇ ಇಲ್ಲ. ಈ list of works ನಲ್ಲಿ ಕೇಂದ್ರ ಸರ್ಕಾರದ್ದು ಒಂದು circular ಇದೆ. ಇದರಲ್ಲಿ ಯಾವುದೇ ಕಾಮಗಾರಿಗಳನ್ನು ತೆಗೆದುಕೊಳ್ಳಬೇಕು ಎಂದು ಹೇಳಿದರೆ, ಮೊದಲನೆಯ ಹಂತದಲ್ಲಿ ಯಾವುದು, ಎರಡನೆಯ ಹಂತದಲ್ಲಿ ಯಾವುದು

ಎಂದು ತೋರಿಸುತ್ತಾರೆ. ಇವರು ಇದನ್ನು ಯಾವುದೂ follow ಮಾಡುವುದಿಲ್ಲ. NREGS ಕೆಲಸಗಳಲ್ಲಿಯೂ ಕೂಡ ಕೆಲವೊಮ್ಮೆ ಲೋಪ ಆಗ ಬಹುದಾ ಒಂದು ಉದಾಹರಣೆಯನ್ನು ತಮ್ಮ ಗಮನಕ್ಕೆ ತರಬೇಕೆಂದರೆ, ಈಗ muster roll ಮಾಡುತ್ತಾರಲ್ಲಾ, NMR ಎಂದು ಮಾಡುತ್ತಾರೆ. ಅದರಲ್ಲಿ ಕೆಲವೊಮ್ಮೆ ಲೋಪ ಆಗಿದೆ ಎನ್ನುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಲೋಪ ಆಗಿಲ್ಲವೆಂದು ನಾನು ಹೇಳುವುದಿಲ್ಲ. ಆದರೆ ಮಾನ್ಯ ಸಚಿವರಿಗೆ ತಮ್ಮ ಮೂಲಕ ಒತ್ತಾಯ ಮಾಡುವುದೇನೆಂದರೆ, ಎಲ್ಲಿ ಕೆಲಸ ಮಾಡದೇ ದುಡ್ಡು ತಿಂದಿರುತ್ತಾರೆ, ಎಲ್ಲಿ ಕೆಲಸ ಮಾಡದೇ ಹಣ ದುರುಪಯೋಗ ಆಗಿದೆ ಅಂತಹ ಕಡೆ ಕ್ರಮ ತೆಗೆದುಕೊಳ್ಳಿ. ನಾವು ಅದಕ್ಕೆ ಅಡ್ಡಿ ಮಾಡಿವುದಿಲ್ಲ. ಎಲ್ಲಿ ಕೆಲಸ ಆಗಿರುತ್ತದೆ, ಕೆಲವು procedural irregularities ಎಂದು ಹೇಳುತ್ತೇವೆ, ಆ ರೀತಿ ಇದೆ, ಅದನ್ನು ಇವರು ದೊಡ್ಡದು ಮಾಡಿಕೊಂಡು ಎಲ್ಲದಕ್ಕೂ ತಡೆ ಮಾಡುವಂತಹ ಪ್ರವೃತ್ತಿ ಈಗ ಏನು ಅಧಿಕಾರಿಗಳ ಮೂಲಕ ಆಗುತ್ತಿದೆ ಅದನ್ನು ತಡೆಯುವಂತಹ ಕೆಲಸ ಆಗಬೇಕು. ಕೆಲಸ ಆಗದೇ ದುಡ್ಡು ತೆಗೆದುಕೊಂಡಿದ್ದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಿ, ಅವರನ್ನು ಜೈಲಿಗೆ ಹಾಕಿ, ಏನಾದರೂ ಮಾಡಿ. ಕೆಲಸವೂ ಆಗಿದ್ದು, procedural irregularities ಇದ್ದರೆ, ಈಗ NMR ನಲ್ಲಿ ಒಬ್ಬ ಸಹಿ ಹಾಕಿರುತ್ತಾನೆ ಅಥವಾ ಹೆಬ್ಬೆಟ್ಟು ಹಾಕಿರುತ್ತಾನೆ ಎಂದು ಇಟ್ಟುಕೊಳ್ಳಿ. ಆದರೆ ಆ ದುಡ್ಡು ಅವನ accountಗೇ ಬ್ಯಾಂಕಿಗೆ ಹೋಗಿರುತ್ತದೆ. ಅದು ಬೇರೆ accountಗೆ ಏನೂ ಹೋಗಿರುವುದಿಲ್ಲ. ಆದರೆ ಅವನು ಬ್ಯಾಂಕ್‌ನಲ್ಲಿ ದುಡ್ಡನ್ನು ಡ್ರಾ ಮಾಡಿಕೊಂಡಿರುತ್ತಾನೆ. ಯಾರೋ ಒಬ್ಬರು ಎ.ಟಿ.ಎಂ. ಕಾರ್ಡ್ ಇಟ್ಟುಕೊಂಡಿರುತ್ತಾನೆ. ಅದರಿಂದ ದುಡ್ಡನ್ನು ಡ್ರಾ ಮಾಡಿಕೊಂಡಿರುತ್ತಾರೆ ಎಂದು ಸರ್ಕಾರ ಹೇಳಬಹುದು. ಅದು ಬೇರೆ ವಿಚಾರ. ಅದನ್ನು ತಪ್ಪಿಸುವುದಕ್ಕೆ ಏನು ಬೇಕಾದರೂ ಮಾಡಿ. ಆದರೆ NMR ನಲ್ಲಿ ಸಹಿ ಸರಿಯಿಲ್ಲ ಎನ್ನುವ ಒಂದೇ ಒಂದು ಕಾರಣಕ್ಕೋಸ್ಕರ ನೀವು ಅದನ್ನು ಅಪನಂಬಿಕೆ ಮಾಡುವಂತಹ ಪ್ರವೃತ್ತಿ ಸರಿಯಿಲ್ಲ. ಎರಡನೆಯದಾಗಿ, NREGS ಕೆಲಸಗಳಲ್ಲಿ ಹಣ ಪಾವತಿ ಮಾಡುವಂತಹ ವಿಚಾರದಲ್ಲಿ 15 ದಿವಸದಲ್ಲಿ ಪಾವತಿ ಮಾಡಬೇಕೆಂದು ಅದರಲ್ಲಿ ಇದೆ. 15 ದಿವಸದ ನಂತರ ಪಾವತಿ

ಮಾಡುವುದಕ್ಕೆ 0.5% ಹಾಕಿ ಕೊಡಬೇಕೆಂದು ಇದೆ. ನಮ್ಮ ಜಿಲ್ಲೆಗೆ ಸೀಮಿತವಾಗಿ ಹೇಳುವುದಾದರೆ, ಸುಮಾರು 40 ಕೋಟಿ ರೂ.ಗಳ ಹಣ ಬಾಕಿ ಇದೆ. ಅವರಿಗೆ 15 ದಿವಸದೊಳಗೆ ಪವತಿ ಮಾಡಬೇಕೆಂದು ನಾವೇ ಕಾಯಿದೆ ಮಾಡಿಕೊಂಡಿದ್ದೇವೆ. ನಮ್ಮ ಕಾಯಿದೆಯನ್ನು ನಾವೇ ಮೀರುವಂಥದ್ದು ಎಷ್ಟರಮಟ್ಟಿಗೆ ಸಮಂಜಸ ಎನ್ನುವುದನ್ನು ಹೇಳಬೇಕಾಗುತ್ತದೆ. ಏಕೆಂದರೆ NREGS ನಲ್ಲಿ ಕೆಲಸ ಮಾಡುವಂತಹ ಕೂಲಿಗಾರರಿಗೆ ನಾವು 15 ದಿವಸದಲ್ಲಿ ಪಾವತಿ ಮಾಡುತ್ತೇವೆಂದು ಹೇಳಿ, ಇವತ್ತು ನಾವು ಅವರಿಗೆ ವರ್ಷಾನುಗಟ್ಟಲೆ ಹಣ ಕೊಡದೇ ಇದ್ದರೆ, ಅದು ನಮ್ಮ ಸರ್ಕಾರಕ್ಕೆ ಅದರಲ್ಲೂ ಕೂಡ ಮಾನ್ಯ ಹೆಚ್.ಕೆ. ಪಾಟೀಲ್‌ರವರು ಇದರಲ್ಲಿ ಬದ್ಧತೆವುಳ್ಳವರು ಅವರಿಗೆ ಬಹಳ ಕೆಟ್ಟ ಹೆಸರು ಬರುತ್ತದೆ. ಅವರಿಗೆ ಕೆಟ್ಟ ಹೆಸರು ಬರದ ರೀತಿಯಲ್ಲಿ ತಾವು ಕ್ರಮವನ್ನು ತೆಗೆದುಕೊಳ್ಳಬೇಕು.

ಶ್ರೀ ವೈ.ಎಸ್.ವಿ. ದತ್ತ(ಕಡೂರು):- ಮಾನ್ಯ ರಾಜಣ್ಣನವರೆ, ಒಂದು ನಿಮಿಷ. NREGS ಗೆ ಸಂಬಂಧಪಟ್ಟಂತೆ ಮಾನ್ಯ ಸಚಿವರ ಗಮನಕ್ಕೆ ಒಂದು ವಿಷಯವನ್ನು ತರಲು ಇಷ್ಟಪಡುತ್ತೇನೆ. NREGSಗೆ ಮಾನ್ಯ ರಾಜಣ್ಣನವರು ಬಹಳ ಸ್ಪಷ್ಟವಾಗಿ ಒಂದು ಮಾತು ಹೇಳಿದರು. ಹಣ ನಮ್ಮ ಗ್ರಾಮ ಪಂಚಾಯಿತಿಗಳಿಗೆ ಇರುವುದೊಳಗೆ ಸಣ್ಣ ಸಣ್ಣ ಕೆಲಸಗಳು ನಮ್ಮ ಕಣ್ಣಿಗೆ ಕಾಣಿಸುವಂತೆ ನಡೆಯುತ್ತಿದ್ದರೆ ಅದು NREGS ನಲ್ಲಿ ಇಟ್ಟುಕೊಳ್ಳಿ, ಹಾಗಾಗಿ ಗ್ರಾಮೀಣಾಭಿವೃದ್ಧಿ ಇಲಾಖೆ ಹೆಚ್ಚು ಆಸೆ, ಭರವಸೆಗಳನ್ನು ಇಟ್ಟುಕೊಂಡಿರುವುದೇ ನರೇಗಾ ಸ್ಕೀಮ್‌ನಲ್ಲಿ. ಆದರೆ ನಮ್ಮ ರಾಜ್ಯಕ್ಕೆ, ಈ ಗ್ರಾಮೀಣಾಭಿವೃದ್ಧಿ ಕ್ಷೇತ್ರಕ್ಕೆ ನರೇಗಾಕ್ಕೆ ಕೇಂದ್ರ ಸರ್ಕಾರದಿಂದ funds ಬರುತ್ತದಲ್ಲ, ಅದು ಎಷ್ಟು ಬಂದಿದೆ ಎಂದು ಸುಮ್ಮನೆ ಒಂದು ಮಾಹಿತಿ ಹೇಳುತ್ತೇನೆ. ನೀವು ಕಳೆದ ಮೂರು ವರ್ಷಗಳಿಂದ ಕೇಂದ್ರ ಸರ್ಕಾರದಿಂದ ನಮ್ಮ ರಾಜ್ಯಕ್ಕೆ ನರೇಗಾ ಸ್ಕೀಮ್‌ನಲ್ಲಿ ಎಷ್ಟು ದುಡ್ಡು ಬಂದಿದೆ, ತಮಿಳುನಾಡಿನಲ್ಲಿ ಎಷ್ಟು ದುಡ್ಡು ಬಂದಿದೆ ಎಂದು ಒಂದು comparison ಮಾಡಿ. ಕನಿಷ್ಟ ನನ್ನಲ್ಲಿರುವ ಅಂಕಿ-ಅಂಶ, ಒಂದು ವರ್ಷ ನಮ್ಮ ರಾಜ್ಯಕ್ಕೆ 1,500 ಕೋಟಿ ರೂ.ಗಳು ಬಂದರೆ, ತಮಿಳುನಾಡಿನವರಿಗೆ 3,000 ಕೋಟಿ

ರೂ.ಗಳು ಬಂದಿದೆ. ಒಂದು ವರ್ಷ ನಮಗೆ 2,500 ಕೋಟಿ ರೂ.ಗಳು ಬಂದರೆ, ಇನ್ನೊಂದು ವರ್ಷ ಅವರಿಗೆ 7,000 ಕೊಟಿ ರೂ.ಗಳು ಬಂದಿದೆ. ಇತ್ತೀಚಿನ ಅಂಕಿ-ಅಂಶಗಳನ್ನು ಹೇಳುತ್ತೇನೆ. ಈಗ 2013-14ನೇ ಸಾಲಿನಲ್ಲಿ ನಮಗೆ 400 ಚಿಲ್ಲರೆ ಕೋಟಿ ರೂ.ಗಳು ಬಂದಿದೆ. ತಮಿಳುನಾಡಿನವರು 739 ಕೋಟಿ ರೂ.ಗಳನ್ನು ತೆಗೆದುಕೊಂಡಿದ್ದಾರೆ. ನಮ್ಮಲ್ಲಿ ಒಂದು ಕೋಟಿಯಷ್ಟು ಮಾನವ ಶಕ್ತಿ ಬಳಕೆ ಇದ್ದರೆ ಅಲ್ಲಿ 5 ಕೋಟಿಗಳಷ್ಟು ಮಾಡಿಕೊಂಡಿದ್ದಾರೆ ಎಂದು ಹೇಳುತ್ತಾರೆ. ನಾನು ಅಂಕಿ-ಅಂಶಗಳನ್ನು rough ಆಗಿ ಹೇಳಿದೆ. ಬೇಕಾದರೆ ಬೇರೆ ಸಂದರ್ಭದಲ್ಲಿ ನಿಖರವಾದ ಮಾಹಿತಿಯನ್ನು ಕೊಡಲು ತಯಾರಿದ್ದೇನೆ. ಅಂದರೆ ತಮಿಳುನಾಡಿನವರಿಗೆ ಆಗಿರುವಂತಹ ಪ್ರಯೊಜನ, ಅವರು ಅದನ್ನು ಕಾರ್ಯಗತಗೊಳಿಸಿರುವ ರೀತಿ ಅಲ್ಲಿ ಆಗಿರುವ advantages ಏನು, ನಮ್ಮಲ್ಲಿ ಏಕೆ ಇಷ್ಟು ಹಿನ್ನಡೆಯಾಗಿದೆ, ನಮ್ಮಲ್ಲಿ ಇರುವ ಕೊರತೆ, ನ್ಯೂನ್ಯತೆ ತೊಂದರೆ ಏನು, ಆ ದುಡ್ಡು ಕೊಡುವುದರಲ್ಲಿ ಕೇಂದ್ರ ಸರ್ಕಾರದವರು ನಮಗೆ ತಾರತಮ್ಯ ಮಾಡಿದ್ದಾರೆಯೇ, ಅವರು ಕೊಡುವುದಕ್ಕೆ ತಯಾರು ಇದ್ದರೂ ನಾವು ಬಳಸಿಕೊಳ್ಳುವುದಕ್ಕೆ ತಯಾರಿಲ್ಲವೆ, ಅದರ ಬಗ್ಗೆ ತಮ್ಮ ಉತ್ತರದಲ್ಲಿ ಮಾಹಿತಿಯನ್ನು ಹೇಳಬೇಕಾಗುತ್ತದೆ.

ಉಪಾಧ್ಯಕ್ಷರು:- ಮಾನ್ಯ ರಾಜಣ್ಣನವರೆ, ಇನ್ನೂ ಎಷ್ಟು ಹೊತ್ತು ಮಾತನಾಡುತ್ತೀರಿ?

ಶ್ರೀ ಕೆ.ಎನ್. ರಾಜಣ್ಣ:- ಮಾನ್ಯ ಉಪಾಧ್ಯಕ್ಷರೆ, ಇನ್ನೊಂದು ಐದು ನಿಮಿಷದಲ್ಲಿ ಮಾತನಾಡಿ ಮುಗಿಸುತ್ತೇನೆ. NREGS ನಲ್ಲಿ ಇನ್ನೊಂದು ವಿಶೇಷತೆ ಏನೆಂದರೆ, Electonoc Fund Management system ಎಂದು CEO ರವರ ಹೆಸರಿನಲ್ಲಿ ಖಾತೆ ತೆರೆಯುತ್ತಾರೆ. ಆಯಾಯ ಗ್ರಾಮ ಪಂಚಾಯಿತಿಯ PDO ಗಳು, Chairman ಗಳು Operate ಮಾಡುತ್ತಾರೆ. CEOರವರಿಗೆ ಎಷ್ಟು ಹಣ ಬಂದಿದೆ, ಯಾರು ಡ್ರಾ ಮಾಡುತ್ತಾರೆ ಎನ್ನುವುದು ಗೊತ್ತಾಗುವುದೇ ಇಲ್ಲ. ಇದು NREGSನಲ್ಲಿ ನಡೆಯುತ್ತಿರುವಂತಹ ಒಂದು ಅವಾಂತರ. Electronic Fund Management System ಎಂದು ಖಾತೆಯನ್ನು ತೆರೆದಿರುವಂಥದ್ದು CEO account ನಲ್ಲಿದೆ, ಅದನ್ನು operate

ಮಾಡತಕ್ಕಂಥವರು PDO ಮತ್ತು presidentಗಳು ಇರುತ್ತಾರೆ ಅವರನ್ನು ಕತ್ತಲಲ್ಲಿಟ್ಟು ಮಾಡಿದಂತಾಗುತ್ತದೆ. ಇದರ ಬಗ್ಗೆಯೂ ಎಚ್ಚರವಹಿಸಬೇಕು ಈಗಾಗಲೇ ಕಳೆದ ಬಜೆಟ್‌ನಲ್ಲಿ ನಮ್ಮ ಸರ್ಕಾರ ಚುನಾಯಿತ ಪ್ರತಿನಿಧಿಗಳಿಗೆ ನೀಡುತ್ತಿರುವ ಗೌರವಧನವನ್ನು ಇಮ್ಮಡಿಗೊಳಿಸಲಾಗುವುದು ಎಂದು ಘೋಷಣೆ ಮಾಡಿತ್ತು. Performance ನಲ್ಲಿಯೂ 3,000, 5000 ರೂ.ಗಳನ್ನು ಕೊಡುತ್ತಾರೆ. ಬಜೆಟ್‌ನಲ್ಲಿ ಇದನ್ನು ಓದಿದ ಮೇಲೆ ಇದರ ಮೇಲೆ ಏನು ಕ್ರಮ ಆಗುತ್ತದೆ ಎನ್ನುವುದು ಮುಖ್ಯವಾಗಿರುತ್ತದೆ. ಇಲಾಖೆಯವರು ಇದನ್ನು ಓದುವುದಿಲ್ಲವೇ, ನೋಡುವುದಿಲ್ಲವೇ, ಏನು ಕಥೆ ಎನ್ನುವುದು ಗೊತ್ತಾಗಬೇಕು. ಒಟ್ಟಾರೆ ಈ ಒಂದು ಇಲಾಖೆಗೆ 9,361 ಕೋಟಿ ರೂ.ಗಳು ಹೋಗುತ್ತದೆ. ಇದರಲ್ಲಿ ಬಹುತೇಕ salary component ಇರುತ್ತದೆಯೇ ಹೊರತು ಜಾಸ್ತಿ developmentಗೆ ಬಳಸುವುದಕ್ಕೆ ಅವಕಾಶ ಮಾಡಿಕೊಡಲಿಲ್ಲ. ಅದನ್ನು ಮಾಡಿಕೊಡಬೆಕು ಎನ್ನುವುದು ಒತ್ತಾಯ. ಅದರ ಜೊತೆಗೆ 12 ನೇ ತಾರೀಖು ಒಂದು circular issue ಮಾಡಿದ್ದಾರೆ. circular issue ಮಾಡಿರುವುದು ಏನು ಎನ್ನುವುದು ತಮ್ಮ ಗಮನಕ್ಕೂ ಬಂದಿದೆ ಎಂದು ತಿಳಿದುಕೊಂಡಿದ್ದೇನೆ. ಆ circular ನಲ್ಲಿ ಏನು ಹೇಳುತ್ತಾರೆ ಎಂದರೆ, scarcity ಯಲ್ಲಿ ಮೊದಲು ನೀವು drinking waterಗೆ ಒಂದು ಬೋರ್‌ವೆಲ್ ತೆಗೆದರೆ ಬೋರ್‌ವೆಲ್‌ನದ್ದೇ ಬೇರೆ component ಮಾಡುತ್ತಿದ್ದರು. ಮೋಟಾರು, electricity ಯದ್ದು ಅದೇ ಒಂದು component ಮಾಡುತ್ತಿದ್ದರು. ಹೀಗೆ 1–2 split up ಮಾಡಿ ಮಾಡುತ್ತಿದ್ದರು. ಈಗ ಅದನ್ನು ತುಂಡು ಮಾಡದೇ ಒಟ್ಟಿಗೇ ಟೆಂಡರ್ ಕರೆದು ಮಾಡಿ ಎಂದು ಒಂದು ಸುತ್ತೋಲೆಯನ್ನು ಕಳುಹಿಸಿದ್ದಾರೆ. ಸುತ್ತೋಲೆಯಲ್ಲಿಗುವಂತೆ ಜಾರಿ ಮಾಡಿ ಬೋರ್‌ವೆಲ್ ಪಾಯಿಂಟ್ ಎಲ್ಲೆಲ್ಲಿ identify ಮಾಡುತ್ತಾರೋ ಅಲ್ಲಿಯೇ ನೀರು ಸಿಗುತ್ತದೆ ಎಂದು ಗ್ಯಾರಂಟಿ ಇರುವುದಿಲ್ಲ. ಎಷ್ಟು ದೂರು ಪೈಪ್ ಬೇಕಾಗುತ್ತದೆ ಎಂದು ಅಳತೆ ಮಾಡಬೇಕಾಗತ್ತದೆ. ಎಲ್ಲಿ ನೀರು ಸಿಗುತ್ತದೆ, ನೀರು ಸಿಕ್ಕಿದ ಮೇಲೆಯೇ ತಾನೇ length ಎಷ್ಟು ಬರುತ್ತದೆ ಎಂದು ಗೊತ್ತಾಗುವುದು. ಅದೇ ರೀತಿ ಬೋರ್‌ವೆಲ್‌ನಲ್ಲಿ ಎಷ್ಟು depth ನಲ್ಲಿ ನೀರು ಸಿಗುತ್ತದೆ ಎಂದು ನೋಡಿಕೊಂಡು ತಾನೇ motor ಬಗ್ಗೆ decide

ಮಾಡಬೇಕಾಗುತ್ತದೆ. ಇವೆಲ್ಲಾ ಗಮನದಲ್ಲಿಟ್ಟುಕೊಂಡು ಇದ್ದಂತಹ ವ್ಯವಸ್ಥೆಯನ್ನೇ ಮುಂದುವರೆಸುವುದು ಸರಿಯಾದದ್ದು. ಈಗ ಕೊಟ್ಟಿರುವಂತಹ circular ನಿಂದ ಈ ಬೇಸಿಗೆಯಲ್ಲಿ ಕುಡಿಯುವ ನೀರಿನ ವ್ಯವಸ್ಥೆಯನ್ನು ಸಮರ್ಪಕವಾಗಿ ಮಾಡಲಿಕ್ಕೆ ಅನಾನುಕೂಲವಾಗುತ್ತದೆ ಎನ್ನುವುದನ್ನು ಸರ್ಕಾರದ ಗಮನಕ್ಕೆ ತಂದು, ಆ ಸುತ್ತೋಲೆಯನ್ನು ವಾಪಸ್ಸು ತೆಗೆದುಕೊಳ್ಳಬೇಕಾಗುತ್ತದೆ. ಮಾನ್ಯ ಸಚಿವರು ಅದಕ್ಕೆ ಹೇಳಬಹುದು, 1–100 ಅಡಿ ತೆಗೆದರೆ ಇಂತಿಷ್ಟು ದುಡ್ಡು, 100–200 ಅಡಿ ತೆಗೆದರೆ ಇಂತಿಷ್ಟು ದುಡ್ಡು ಎಂದು rate fix ಮಾಡಿ ಒಮ್ಮೆಲೇ ಟೆಂಡರ್ ಕರೆಯುವಂಥದ್ದು ಆಗಬಹುದು. ಆದರೆ ಇವೆಲ್ಲವೂ time consuming process ಆಗುತ್ತದೆ. ಆದ್ದರಿಂದ ಇದ್ದಂತಹ ವ್ಯವಸ್ಥೆಯನ್ನು ಮುಂದುವರೆಸಿಕೊಂಡು ಹೋಗುವುದಕ್ಕೆ ಸರ್ಕಾರ ಉತ್ತರ ಹೇಳುವಂತಹ ಸಂದರ್ಭದಲ್ಲಿ ಹೇಳಬೇಕು. ಜನರಿಗೆ ನೀರನ್ನು ಸಕಾಲಕ್ಕೆ ಕೊಡುವಂಥದ್ದು ನಮ್ಮ ಉದ್ದೇಶ ಇದೆ. ಆ ಉದ್ದೇಶವನ್ನು ಈಡೇರಿಸುವುದಕ್ಕೆ ಸರ್ಕಾರ ಕೂಡ ಉತ್ತೇಜನ ಕೊಡುವಂಥದ್ದು ಆಗಬೇಕು. ಎಲ್ಲಾದರೂ ದುರುಪಯೋಗವಾಗುವಂತಹ ಸಂದರ್ಭವಿದ್ದಾಗ ಕ್ರಮ ತೆಗೆದುಕೊಳ್ಳುವುದಕ್ಕೆ ನಮ್ಮದೇನೂ ಅಡ್ಡಿ ಇಲ್ಲ. ಕೊನೆಯದಾಗಿ TPS ಅಧ್ಯಕ್ಷರು ಇದ್ದಾರೆ, ಗ್ರಾಮ ಪಂಚಾಯಿತಿ ಅಧ್ಯಕ್ಷರು ಬೇಕು, ಬೇಡ. ನಿಜಕ್ಕೂ ಹೇಳಬೇಕು. ಅವರಿಗೆ ಗ್ರಾಮ ಪಂಚಾಯಿತಿಯಲ್ಲಿ ಚೆಕ್ issue ಮಾಡುವುದಕ್ಕೆ joint signature ಇದೆ. ಆದರೆ ತಾಲ್ಲೂಕು ಪಂಚಾಯಿತಿಯಲ್ಲಿ CEO ಒಬ್ಬರೇ ಇರುತ್ತಾರೆ. ಅಲ್ಲಿ ಈ joint signature ಪದ್ಧತಿಯನ್ನು ಸರ್ಕಾರದವರು ಜಾರಿಗೆ ಮಾಡಬೇಕೆಂಬ ಒತ್ತಾಯವನ್ನು ಸರ್ಕಾರದ ಗಮನಕ್ಕೆ ತರಲು ಬಯಸಿ ಈಗ NREGS ಯಲ್ಲಿ ನಿಂತಿರುವಂತಹ ಹಣವನ್ನು ಆದಷ್ಟು ಜಾಗ್ರತೆ ಬಟವಾಡೆ ಮಾಡುವುದಕ್ಕೆ ಸರ್ಕಾರ ಸೂಕ್ತವಾದಂತಹ ಕ್ರಮವನ್ನು ತೆಗೆದುಕೊಳ್ಳಬೇಕು. ಇಷ್ಟು ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು:– ಮಾನ್ಯ ಶ್ರೀಮತಿ ಶಾರದಾ ಪೂರ್ಯನಾಯ್ಕರವರು ಮಾತನಾಡುವುದು.

ಶ್ರೀ ವೈ.ಎಸ್.ವಿ. ದತ್ತಾ:– ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಶಾರದಾ ಪೂರ್ಯನಾಯ್ಕರವರು ಪ್ರಥಮ ಬಾರಿಗೆ ಶಾಸಕಿಯಾಗಿ ಆಯ್ಕೆಯಾಗಿದ್ದಾರೆ.

ಉಪಾಧ್ಯಕ್ಷರು:– ಮಾತನಾಡಲಿ.

ಶ್ರೀ ವೈ.ಎಸ್.ವಿ. ದತ್ತ:– ಅದಕ್ಕೇ ಹೇಳುತ್ತಿದ್ದೇನೆ. ಆದರೆ ಅವರು ಸುದೀರ್ಘ ಕಾಲ ಜಿಲ್ಲಾ ಪಂಚಾಯಿತಿ ಸದಸ್ಯೆಯಾಗಿ ಮತ್ತು ಜಿಲ್ಲಾ ಪಂಚಾಯಿತಿ ಅಧ್ಯಕ್ಷರಾಗಿ ಕೆಲಸ ಮಾಡಿದ್ದಾರೆ. ಈ ಇಲಾಖೆ ಮೇಲೆ ಅವರ ಅನುಭವ ಈ ಸದನಕ್ಕೆ ಬಹಳ ಮುಖ್ಯ ಎಂದು ನಾನು ಭಾವಿಸುತ್ತೇನೆ.

ಉಪಾಧ್ಯಕ್ಷರು:– ಮಾನ್ಯ ದತ್ತರವರೆ, ಮಧ್ಯೆ ನೀವು ಜಾಸ್ತಿ interfere ಆಗದೇ ಹೋದರೆ ಅವರಿಗೆ ಮಾತನಾಡಲು ಅನುಕೂಲವಾಗುತ್ತದೆ.

ಶ್ರೀಮತಿ ಶಾರದಾ ಪೂರ್ಯನಾಯ್ಕ್ (ಶಿವಮೊಗ್ಗ ಗ್ರಾಮೀಣ):– ಮಾನ್ಯ ಉಪಾಧ್ಯಕ್ಷರೆ, ನನಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದಕ್ಕಾಗಿ ತಮಗೆ ಧನ್ಯವಾದಗಳು. ಇವತ್ತಿನ ದಿವಸ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಸಂಬಂಧಿಸಿದಂತೆ ಎಲ್ಲಾ ಶಾಸಕರುಗಳು ಸಾಕಷ್ಟು ಮಾತನಾಡಿದ್ದಾರೆ. ನಾನು ಕೆಲವೊಂದು ವಿಚಾರಗಳನ್ನು ಸದನದ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಪ್ರಥಮವಾಗಿ ನಾನು ಹೇಳಬೇಕೆಂದರೆ 2011 ರ ಹಿಂದೆ ನಿವಾಸಿ ದೃಢೀಕರಣವನ್ನು ಗ್ರಾಮ ಪಂಚಾಯಿತಿಯವರೇ issue ಮಾಡುತ್ತಿದ್ದರು. ಇವತ್ತು ಅದನ್ನು ಕಂದಾಯ ಇಲಾಖೆಗೆ hand over ಮಾಡಿದ್ದಾರೆ. ಇವತ್ತಿನದಿವಸ ನಿವಾಸಿ ದೃಢೀಕರಣಪತ್ರಕ್ಕಾಗಿ ಎಲ್ಲರೂ ಪರದಾಡಬೇಕಾಗಿದೆ. ಸ್ಥಳೀಯವಾಗಿ ಖಾನೇಘು ಮಾರಿ ಇರುತ್ತದೆ. ನಮೂನೆ-11 ಅನ್ನು ತೆಗದುಕೊಳ್ಳುತ್ತಿದ್ದಾರೆ. ಉದ್ಯೋಗ ಖಾತ್ರಿಯಲ್ಲಿ ಉದ್ಯೋಗ ಚೀಟಿ ಇರುತ್ತದೆ. ಇಷ್ಟೆಲ್ಲಾ ಸಶಕ್ತವಾಗಿದ್ದರೂ ಸಹ ಆ ವ್ಯಕ್ತಿಗಳು ಕಂದಾಯ ಇಲಾಖೆಗೆ ತಮ್ಮ ಗ್ರಾಮದ ವಾಸದ ದೃಢೀಕರಣಕ್ಕಾಗಿ ಅಲೆದಾಡುತ್ತಿರುವುದು ಇದೆ. ದಯವಿಟ್ಟು ಅದನ್ನು ತಪ್ಪಿಸಬೇಕಾಗುತ್ತದೆ. ಈ ಹಿಂದೆ ಯಾವ ರೀತಿ ಪಂಚಾಯಿತಿಯವರು ಗ್ರಾಮ ದೃಢೀಕರಣ ಪತ್ರವನ್ನು issue ಮಾಡುತ್ತಿದ್ದರು, ಈ ರೀತಿ ಮಾಡುವುದರಿಂದ ಜನಗಳು ಅನವಶ್ಯಕವಾಗಿ

ಅಲೆದಾಡುವ ಪರಿಸ್ಥಿತಿಯನ್ನು ತಪ್ಪಿಸಿದಂತಾಗುತ್ತದೆ ಎಂದು ನನ್ನ ಅಭಿಪ್ರಾಯವಾಗಿದೆ. ಗ್ರಾಮ ಪಂಚಾಯಿತಿಗಳಲ್ಲಿ ದೊಡ್ಡ ಸಮಸ್ಯೆ ಎಂದರೆ, ಗ್ರಾಮಠಾಣಾ ಪ್ರದೇಶದಲ್ಲಿ ಇರುವ ಸ್ವತ್ತುಗಳ ಸೂಕ್ತ ದಾಖಲೆಗಳ ಲಭ್ಯತೆ ಇಲ್ಲ. ಇದರಿಂದಾಗಿ ಸಾಕಷ್ಟು ಜನರು ಗ್ರಾಮಪಂಚಾಯಿತಿಯ ಗ್ರಾಮ ಠಾಣಾ ಜಾಗಗಳನ್ನು ಅವರ ಅವಶ್ಯಕತೆಗಿಂತ ಜಾಸ್ತಿ ಜಾಗಗಳನ್ನು ಆಕ್ರಮಿಸಿಕೊಂಡಿದ್ದಾರೆ. ಬಹುಶಃ ಅವರಿಂದ ಆ ಜಾಗಗಳನ್ನು ಬಿಡಿಸುವುದಕ್ಕೂ ಸಹ ಪರದಾಡುವಂತಹ ಪರಿಸ್ಥಿತಿ ಇದೆ, ಇದಕ್ಕೆಲ್ಲವೂ ಕಾರಣವೆಂದರೆ ಬಹುಶಃ ಎಲ್ಲಕ್ಕೂ ಕಂದಾಯ ಇಲಾಖೆಗೆ depend ಆಗಬೇಕಾಗುತ್ತದೆ. ಕಂದಾಯ ಇಲಾಖೆಗೆ depend ಆಗಬೇಕೆಂದರೆ ಇವರಲ್ಲಿ Surveyor ಗಳು ಇರುವುದಿಲ್ಲ. ಗ್ರಾಮ ಠಾಣಾ ಜಾಗಗಳನ್ನು ಇದುವರೆಗೂ ನನ್ನ ಕ್ಷೇತ್ರದಲ್ಲಿ ಸರ್ವೇ ಮಾಡಿಕೊಡುವುದಕ್ಕೆ ಎಷ್ಟು ಪ್ರಕರಣಗಳು ಬಂದಿದೆ. ಅದರಲ್ಲಿ ಎಷ್ಟು ವಿಲೇವಾರಿ ಮಾಡಿದ್ದೀರಾ, ಎಂದು ನಾನು last time ಕಂದಾಯ ಇಲಾಖೆಯ ವಿಚಾರದಲ್ಲಿ ಒಂದು L.A.Question ಮಾಡಿದ್ದೆ. 13 ಪ್ರಕರಣಗಳು ಬಂದಿದೆ ಅದರಲ್ಲಿ ಎರಡು ಪ್ರಕರಣಗಳೂ ಸಹ ವಿಲೇವಾರಿ ಆಗಿರುವುದಿಲ್ಲ. ಅದೇ ವಿಚಾರವಾಗಿ ವೈಯಕ್ತಿಕವಾಗಿ ಗ್ರಾಮಠಾಣಾ ಅಂದರೆ ನನ್ನದು ಗ್ರಾಮಾಂತರ ಪ್ರದೇಶವಾಗಿದ್ದು ಇದು ನಗರಕ್ಕೆ ಹೊಂದಿಕೊಂಡಿದೆ. ಇಲ್ಲಿ ಲೇಔಟ್‌ಗಳಿಗಾಗಿ ಬಹಳಷ್ಟು ಜನರು ಆಸಕ್ತಿಯನ್ನು ಹೊಂದುತ್ತಿದ್ದಾರೆ. ಅಲ್ಲಿ lay-out formationಗೆ ಎಷ್ಟು private ಜನರದ್ದು ಬಂದಿದೆ ಎಂದರೆ 140 ಪ್ರಕರಣಗಳು ಬಂದಿವೆ. 140 ಪ್ರಕರಣಗಳೂ ಸಹ ವಿಲೇವಾರಿ ಆಗಿ ಹೋಗಿದೆ, ಅಂದರೆ ಆಸಕ್ತಿ ಯಾವುದರಲ್ಲಿದೆ? Service-oriented attitude ಬಹುಶಃ ಯಾರಲ್ಲಿಯೂ ಇಲ್ಲ. ಇದನ್ನು ತಪ್ಪಿಸಲು ತಾವು ಯಾವ ರೀತಿಯಾಗಿ ಯೋಚನೆ ಮಾಡಬೇಕೆಂದು ದಯವಿಟ್ಟು ಎಲ್ಲರೂ ಕುಳಿತುಕೊಂಡು ಯೋಚನೆ ಮಾಡಬೇಕಾಗುತ್ತದೆ. ಮಾನ್ಯ ಸಚಿವರಲ್ಲಿ ನನ್ನದೊಂದು ಸಲಹೆ, ಪ್ರತಿಯೊಂದು ತಾಲ್ಲೂಕು ಪಂಚಾಯಿತಿಗೆ ಕನಿಷ್ಠಪಕ್ಷ ಇಬ್ಬರು ಸರ್ವೇಯರ್‌ಗಳನ್ನು ಇಟ್ಟುಕೊಂಡರೆ ಅಲ್ಲಿ ತಕ್ಷಣ ಬರತಕ್ಕಂತಹ ಗ್ರಾಮ ಠಾಣಾದ ಸಮಸ್ಯೆಗಳು ಬಂದಲ್ಲಿ, ನನ್ನ ಸ್ವತ್ತು ನಿನ್ನ ಸ್ವತ್ತು ಎಂದು ತಗಾದೆಗಳು ಇರುತ್ತವೆ, ಆ

ಸಮಸ್ಯೆಗಳನ್ನು ಅಲ್ಲಿಯೇ ಬಗೆಹರಿಸುವಂತಹ ಒಂದು ಅವಕಾಶವನ್ನು ಕಲ್ಪಿಸಿಕೊಟ್ಟಂತೆ ಆಗುತ್ತದೆ. ಅದಕ್ಕಾಗಿ ತಾವು ತಾಲ್ಲೂಕು ಪಂಚಾಯಿತಿಗೆ ಕನಿಷ್ಠಪಕ್ಷ ಎರಡು E.O. ಗಳನ್ನು ಆದರೂ depute ಮಾಡುವುದು ಒಳ್ಳೆಯದು ಎಂದು ನನ್ನ ಅನಿಸಿಕೆಯಾಗಿದೆ. ಇದರ ಜೊತೆಗೆ ಸುಮಾರು ಆರು ತಿಂಗಳ ಹಿಂದೆ ಗ್ರಾಮ ಪಂಚಾಯಿತಿಗಳಲ್ಲಿ ತುಂಬಾ rush ಇತ್ತು, ಏಕೆಂದರೆ ಎಂದರೆ ಅವರುಗಳು ಉದ್ಯೋಗ ಖಾತ್ರಿ ಕೆಲಸವನ್ನು ಮಾಡುವುದಕ್ಕಾಗುತ್ತಿರಲಿಲ್ಲ. ಈ ಕಡೆಗೆ Ration Cardನದು survey ಮಾಡುವುದಕ್ಕಾಗುತ್ತಿರಲಿಲ್ಲ. ಆ ರೀತಿಯಾಗಿ ಒಂದು ಪರದಾಟ ಪ್ರಾರಂಭವಾಗಿತ್ತು. ಏಕೆಂದರೆ ಅಲ್ಲಿ ಒಂದು ಕಡೆ ವಿದ್ಯುತ್ತಿನ ಸಮಸ್ಯೆ ಇನ್ನೊಂದು ಕಡೆಯಲ್ಲಿ ಇಂಟರ್‌ನೆಟ್ ಸಮಸ್ಯೆ ಆ ಸಂದರ್ಭದಲ್ಲಿ ನಗರದಲ್ಲಿ ನೋಡಿದರೆ outsource ತೆಗೆದುಕೊಂಡು ನಗರದವರಿಗೇ ಒಂದು ಅವಕಾಶವನ್ನು ಕಲ್ಪಿಸಿಕೊಡುತ್ತಿರಬೇಕಾದರೆ ಗ್ರಾಮ ಪಂಚಾಯಿತಿಯವರಿಗೆ ಏತಕ್ಕಾಗಿ ಆ ಅವಕಾಶವನ್ನು ಕಲ್ಪಿಸಿಕೊಡಬಾರದು? ಈ ರೀತಿಯ ಸಮಸ್ಯೆಗಳು ಪದೇ ಪದೇ ಗ್ರಾಮ ಪಂಚಾಯಿತಿಯಲ್ಲಿ ಅವರದೇ ಆದ ಸಮಸ್ಯೆಗಳು ಅದು ಉದ್ಯೋಗ ಖಾತ್ರಿ ಯೋಜನೆ ಇರಬಹುದು, ಗ್ರಾಮ ಪಂಚಾಯಿತಿಗೆ ಸರ್ಕಾರದಿಂದ ಬರತಕ್ಕಂತಹ ಕಾರ್ಯಕ್ರಮಗಳ ಒಂದು ಅನುಷ್ಠಾನ ಇರಬಹುದು, ಅಲ್ಲಿ ಸಾಕಷ್ಟು ಸಮಸ್ಯೆಗಳು ಇರುವುದರಿಂದ ಈ ತರಹದ ಹೊರೆಗಳನ್ನು ಅವರ ಮೇಲೆ ಹಾಕುವುದು ಅಷ್ಟೊಂದು ಸಮಂಜಸವಲ್ಲ. ನಗರದವರಿಗೆ ಕೊಡತಕ್ಕಂತಹ ಪ್ರತಿನಿಧ್ಯತೆ ಗ್ರಾಮ ಪಂಚಾಯಿತಿಗಳಿಗೂ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಗ್ರಾಮ ಪಂಚಾಯಿತಿಯ ವಿದ್ಯುತ್ ಬಿಲ್ ತುಂಬಾ ದೊಡ್ಡ ಹೊರೆಯಾಗಿ ಕಂಡುಬರುತ್ತಿದೆ. ಅದಕ್ಕಾಗಿ ಒಂದು ಕಡೆಯಲ್ಲಿ ಶಾಶ್ವತವಾದ ಕುಡಿಯುವ ನೀರಿನ ಕಾರಣಕ್ಕೂ ಸಹ ಆಗುತ್ತಿಲ್ಲ. ಅದು ಭೂಮಿಯ ಒಳಗಡೆ ಇರುವಂತಹ ನೀರು ಕೆಲವೊಂದು ಕಡೆಯಲ್ಲಿ ತೆಗೆದಿರುತ್ತೇವೆ, ನಾವು ಬೋರ್‌ವೆಲ್ ತೆಗೆಸಿ ಒಂದೆರಡು ತಿಂಗಳಲ್ಲಿ ಬೋರ್‌ನಲ್ಲಿ ನೀರು ಬತ್ತಿ ಹೋಗಿರುತ್ತದೆ. ಪ್ರಕೃತಿಯ ವಿಷಯದಲ್ಲಿ ನಾವು ಏನೂ ಮಾಡುವುದಕ್ಕಾಗುವುದಿಲ್ಲ. ಈ ಬಗ್ಗೆ ಸಾಕಷ್ಟು ಪ್ರಯತ್ನಗಳು ಸರ್ಕಾರದ ಕಡೆಯಿಂದ ಎಲ್ಲರೂ ಮಾಡುತ್ತಲೇ ಇರುತ್ತಾರೆ. ಗ್ರಾಮೀಣ ಭಾಗದಲ್ಲಿ

ಬಿಲ್‌ಗಳು ಜಾಸ್ತಿ ಬರುವುದಕ್ಕೆ ಅದು ಸಹ ಒಂದು ಕಾರಣವಾಗಿದೆ. ಏಕೆಂದರೆ ಒಂದು ಬಿಟ್ಟು ಮೂರು ಸ್ಕೀಮ್‌ಗಳು implementation ಆಗಿಬಿಟ್ಟಿರುತ್ತದೆ. ಅದನ್ನು ಅವರುಗಳು maintain ಮಾಡುವುದಕ್ಕೆ tax collect ಮಾಡುವುದಕ್ಕೆ ಹೋದರೆ ಅಲ್ಲಿಯೂ ಸಹ ಅವರು public ಹತ್ತಿರ ಬೈಸಿಕೊಳ್ಳಬೇಕಾದ ಪರಿಸ್ಥಿತಿ ಇರುತ್ತದೆ. ನೀವು ಸರಿಯಾದ ನೀರಿನ ಸಮಸ್ಯೆಯನ್ನು ಬಗೆಹರಿಸುವುದಿಲ್ಲ, ಚರಂಡಿಗಳನ್ನು in timeನಲ್ಲಿ ಸರಿಯಾಗಿ ಮಾಡುವುದಿಲ್ಲ. ನಾವು ಏತಕ್ಕಾಗಿ ನಿಮಗೆ tax ಕಟ್ಟಬೇಕು ಎನ್ನುತ್ತಾರೆ? ಅದರಲ್ಲಿಯೂ ಸಹ ಅವರು ಸಾಕಷ್ಟು ಪ್ರಯತ್ನಗಳನ್ನು ಮಾಡುತ್ತಿದ್ದಾರೆ. ಆದರೂ ಸಹ ಅದು success ಆಗುತ್ತಿಲ್ಲ. ಬಹುಶಃ ಆ ನಿಟ್ಟಿನಲ್ಲಿ ಸರ್ಕಾರಗಳು ಏನು ಈ ಹಿಂದೆ 2004ರಲ್ಲಿ ಒಂದು ಸಾರಿ ಸಂಪೂರ್ಣವಾಗಿ zeroಗೆ ತಂದಿದ್ದರು. ಸರ್ಕಾರವೇ ವಿದ್ಯುತ್ ಬಿಲ್‌ನ ಬಗ್ಗೆ ಜವಾಬ್ದಾರಿಯನ್ನು ತೆಗೆದುಕೊಂಡಿತ್ತು. ಆ ನಿಟ್ಟಿನಲ್ಲಿ ಇನ್ನೊಂದು ಸಾರಿ ನಮ್ಮ ಗ್ರಾಮ ಪಂಚಾಯಿತಿಗೆ ಒಂದಿಷ್ಟು strengthening ಮಾಡುವ ಉದ್ದೇಶಕ್ಕಾಗಿ ತಾವು ಮತ್ತೊಂದು ಸಾರಿ ಅವಕಾಶವನ್ನು ಗ್ರಾಮ ಪಂಚಾಯಿತಿಗೆ ಮಾಡಿಕೊಡಬೇಕು. ಅದಲ್ಲದೆ ಗ್ರಾಮೀಣ ಭಾಗದ ರೈತರಿಗೆ ನೀಡುವಂತೆ ನಿರ್ದಿಷ್ಟ ಪ್ರಮಾಣದ ವಿದ್ಯುತ್ ಪೂರೈಕೆಯನ್ನು ಉಚಿತವಾಗಿ ಕೊಟ್ಟು ನಂತರದಲ್ಲಿ ಹೆಚ್ಚುವರಿಯಾಗಿ ಏನು ಬಳಸುತ್ತಾರೆ ಅದಕ್ಕೆ ಒಂದು ವಿನಾಯಿತಿ ದರದಲ್ಲಿ current charge fix ಮಾಡುವುದು ಒಳ್ಳೆಯದು. ಇದರಿಂದಾಗಿ ಗ್ರಾಮ ಪಂಚಾಯಿತಿಗಳಿಗೆ ಅಷ್ಟೊಂದು ಹೊರೆಯಾಗುವುದಿಲ್ಲ. ಅದನ್ನು ಅವರು ಕ್ರಮಬದ್ಧವಾಗಿ ಕಟ್ಟಿಕೊಂಡು ಹೋಗುತ್ತಾರೆಂದು ಹೇಳುತ್ತೇನೆ. ಈ ಹಿಂದೆ 2012ರಲ್ಲಿ ಸರ್ಕಾರದ ಪತ್ರದ ಮೇರೆಗೆ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಯವರು ಪೂರ್ವಾನುಮೋದನೆ ಪಡೆಯದೇ ಗ್ರಾಮ ಪಂಚಾಯಿತಿಗಳನ್ನು ನೇಮಕ ಮಾಡಿಕೊಳ್ಳುತ್ತಿದ್ದರು. ನಂತರದಲ್ಲಿ ಘಟನೋತ್ತರ ಮಂಜೂರಾತಿಗಾಗಿ ಸಿ.ಇ.ಓ.ಗೆ ಬರುತ್ತಿತ್ತು. ಆದರೆ ಅದು ಉಮಾದೇವಿಯ ಪ್ರಕರಣದ ಅಡಿಯಲ್ಲಿ ನಂತರದಲ್ಲಿ ಅದು held up ಆಗಿದೆ. ಈ ಹಿಂದೆ 2008ರಲ್ಲಿ ಏನು ಪೂರ್ವಾನುಮೋದನೆ ಪಡೆದುಕೊಳ್ಳದೆ ಅವರು ಘಟನೋತ್ತರ ಮಂಜೂರಾತಿಗೆ ಕಳುಹಿಸಿದ್ದರೆ ಅಂತಹದ್ದನ್ನು held up

ಮಾಡುವುದು ಬೇಡ. ಇದರಿಂದ ಸಾವಿರಾರು ಗ್ರಾಮ ಪಂಚಾಯಿತಿಯ ಸಿಬ್ಬಂದಿವರ್ಗದವರು ತೊಳಲಾಡುತ್ತಿದ್ದಾರೆ. ಅವರಿಗೆ ಬರುವಂತಹ ವೇತನಭತ್ಯೆಗಳು ಇರಬಹುದು, ಪ್ರಮೋಷನ್ಸ್ ಇರಬಹುದು ಅಲ್ಲಿ ಯಾವುದೂ ಸಹ ಆಗುತ್ತಿಲ್ಲ. ಹಾಗಾಗಿ ದಯವಿಟ್ಟು ಈ ಬಗ್ಗೆ ನನ್ನದೊಂದು request, ಇದೆ, ಗ್ರಾಮ ಪಂಚಾಯಿತಿಯ ಸಿಬ್ಬಂದಿಗೆ ಸಂಬಂಧಿಸಿದಂತೆ ಏನು ಘಟನೋತ್ತರ ಮಂಜೂರಾತಿಗೆ held up ಆಗಿದೆ? ಸರ್ಕಾರದ ಆ ಸಂದರ್ಭದಲ್ಲಿರತಕ್ಕ ಕಾನೂನಿನ ಚೌಕಟ್ಟಿನೊಳಗಡೆಯೇ ಸಿಬ್ಬಂದಿ ವರ್ಗವದವರನ್ನು ನೇಮಕ ಮಾಡಿಕೊಂಡಿದ್ದಾರೆ, ನಾವು ಗ್ರಾಮ ಪಂಚಾಯಿತಿಯೇ supreme body ಎಂದು ಹೇಳಿದಾಗ ಅವರಲ್ಲಿರುವಂತಹ ಅಧಿಕಾರವನ್ನು ಕಿತ್ತುಕೊಂಡಂತೆ ಆಗುತ್ತದೆ. ಅದಕ್ಕಾಗಿ ಘಟನೋತ್ತರ ಮಂಜೂರಾತಿಗೆ ಪುನಃ ಅವಕಾಶ ಮಾಡಿಕೊಡಬೇಕೆಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಸರ್ಕಾರವು ಗ್ರಾಮ ಪಂಚಾಯಿತಿಯ ಮಟ್ಟದಲ್ಲಿ ಅನುಷ್ಠಾನಗೊಳಿಸುತ್ತಿರುವ ವೈಯಕ್ತಿಕ ಸೌಲಭ್ಯಗಳ ಯೋಜನೆಗೆ ಒಂದು ಅಥವಾ ಹೆಚ್ಚು ಮೂಲಗಳ ಅನುದಾನದ ಹೊಂದಾಣಿಕೆಯನ್ನು ಮಾಡಿಕೊಂಡು ಅನುಷ್ಠಾನ ಮಾಡುತ್ತಾ ಬಂದಿದ್ದಾರೆ. ಉದಾಹರಣೆಗೆ 2005 ಅಕ್ಟೋಬರ್ 2 ರಂದು ಮಹಾತ್ಮಾ ಗಾಂಧೀಜಿಯವರ ನೆನಪಿಗೋಸ್ಕರ ಸಂಪೂರ್ಣ ಸ್ವಚ್ಛತಾ ಆಂದೋಲನ ಕಾರ್ಯಕ್ರಮ ನಮ್ಮ ದೇಶದಲ್ಲಿಯೇ ಪ್ರಾರಂಭವಾಯಿತು. ಆ ನಂತರದಲ್ಲಿ 2012ರಿಂದ ನಿರ್ಮಲ ಭಾರತ ಅಭಿಯಾನ ಎಂದು ಪುನರ್ ನಾಮಕರಣ ಮಾಡಿಕೊಂಡು ಇವತ್ತಿನದಿವಸ implement ಮಾಡುತ್ತಿದ್ದಾರೆ. ಅದರಲ್ಲಿ ಸಮಸ್ಯೆ ಏನಾಗುತ್ತಿದೆ ಎಂದರೆ, ಇಲ್ಲಿ ಯಾವುದಾದರೂ ಒಂದು ಮೂಲದಿಂದ ಅನುದಾನವು in time ನಲ್ಲಿ ಬರದೇ ಇದ್ದರೆ NREGಯಲ್ಲಿ 4700 ರೂಪಾಯಿಗಳನ್ನು ಕೊಡುತ್ತೀರಿ. ಅದರಲ್ಲಿ ಫಲಾನುಭವಿಗಳ ಪಾಲು 800 ರೂಪಾಯಿಗಳು ಇರುತ್ತದೆ. 1500 ರೂಪಾಯಿಗಳು ರಾಜ್ಯ ಸರ್ಕಾರದ್ದು ಇರುತ್ತದೆ. ಈ ರೀತಿಯಾಗಿ matching grantsಗಳು ಇರುತ್ತವೆ. ಒಂದು ಮೂಲದಿಂದಲೂ ಸರಿಯಾಗಿ ಅನುದಾನ ಬರದೇ ಇದ್ದಲ್ಲಿ ಸಂಪೂರ್ಣವಾಗಿ ಸ್ಕೀಮ್ ಸಾಫಲ್ಯತೆಯನ್ನು ಕಾಣುವುದಿಲ್ಲ.

ಅದಕ್ಕಾಗಿ ನಾನು ಹೇಳುವುದೇನೆಂದರೆ, ಈ ರೀತಿ ಆಗುವುದರಿಂದ ಅನುದಾನವು ಸದ್ಬಳಕೆಯಾಗುವುದಿಲ್ಲ. ಪ್ರತಿ ಘಟಕದ ವೆಚ್ಚ ಮೊತ್ತವು ಏಕ ಕಾಲದಲ್ಲಿ ಎಲ್ಲಾ ಮೂಲಗಳಿಂದಲೂ ಬಿಡುಗಡೆ ಮಾಡುವುದು ಅಥವಾ ಕ್ರೋಢಿಕರಿಸಿ ಬಂದ ಮೂಲದಿಂದ ಬಿಡುಗಡೆ ಮಾಡುವುದು ಸೂಕ್ತ ಎಂದು ನನ್ನ ಅನಿಸಿಕೆಯಾಗಿದೆ. ಕಳೆದ ವಿಧಾನ ಸಭೆಯಲ್ಲಿ ಮಾನ್ಯ ಸಚಿವರ ಗಮನವನ್ನು ನಾನು ಸೆಳೆದಿದ್ದೆ. ನಮ್ಮ ಗ್ರಾಮ, ನಮ್ಮ ರಸ್ತೆ ಈ ಸ್ಕೀಮ್‌ನ ವಿಚಾರವಾಗಿ ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ 20 ಕಿ.ಮೀ. ಹಾಗೂ ಸುವರ್ಣ ಗ್ರಾಮ ವಿಕಾಸ ಯೋಜನೆ ಒಂದು ವಿಧಾನಸಭಾ ಕ್ಷೇತ್ರಕ್ಕೆ 5 ಎಂದು ಹೇಳಿದ್ದರು. ಆ ದಿನ ನಾನು ಮಾನ್ಯ ಸಚಿವರ ಗಮನಕ್ಕೆ ತೆಗೆದುಕೊಂಡು ಬಂದಿದ್ದೆ. ಆದರೂ ಸಹ ನಮ್ಮಲ್ಲಿ 20 ಕಿ.ಮೀ. ಕೇಳುತ್ತಿದ್ದಾರೆ. ಇದಕ್ಕಾಗಿ ತಾವು ಒಂದು ಮಾನದಂಡವನ್ನು fix ಮಾಡಿಕೊಳ್ಳಿ. ಕನಿಷ್ಠ ಪಕ್ಷ ಒಂದು ಜಿಲ್ಲಾ ಪಂಚಾಯಿತಿಗೆ ತಾವು ಎಷ್ಟು ಗ್ರಾಮಗಳನ್ನು develop ಮಾಡುತ್ತೀರಿ? ಎಷ್ಟು ಕಿ.ಮೀ. ರಸ್ತೆಯನ್ನು develop ಮಾಡುತ್ತೀರಾ ಎಂದು ಒಂದು plan ಇಟ್ಟುಕೊಳ್ಳಬೇಕು. ಏಕೆಂದರೆ ನಾವು ಗ್ರಾಮೀಣ ಭಾಗದಿಂದ ಬಂದವರಾಗಿದ್ದೇವೆ. ನಮ್ಮ ಕ್ಷೇತ್ರಕ್ಕೆ 6 ಜಿಲ್ಲಾ ಪಂಚಾಯಿತಿಯ ಕ್ಷೇತ್ರ ಬರುತ್ತದೆ. ನಮ್ಮ ಕ್ಷೇತ್ರದ್ದು ಸಹ 20 ಕಿ.ಮೀ. develop ಮಾಡುವುದು 2–3 ಜಿಲ್ಲಾ ಪಂಚಾಯಿತಿಗೆ ಅವರಿಗೂ 20 ಕಿ.ಮೀ. develop ಮಾಡುವುದೆಂದರೆ ಬಹುಶಃ ಅನುದಾನದ ಸಮತೋಲನವನ್ನು ಸರಿಯಾಗಿ ಕಾಪಾಡುವುದಕ್ಕಾಗುತ್ತಿಲ್ಲ ಎಂದು ಅನಿಸುತ್ತದೆ. ಈ ಬಗ್ಗೆ ಮಾನ್ಯ ಸಚಿವರಲ್ಲಿ request ಮಾಡಿಕೊಳ್ಳುತ್ತೇನೆ. ನಿಮ್ಮಲ್ಲಿ ಒಂದು ಬದ್ಧತೆ ಇದೆ, ಈ ಬಗ್ಗೆ ತಾವು ಒಂದು ಮಾನದಂಡವನ್ನು fix ಮಾಡಿಕೊಂಡು ಹೆಚ್ಚಿನ ಗ್ರಾಮಾಂತರ ಕಡೆಗೆ ಹೆಚ್ಚು ಒತ್ತು ಕೊಡಲಿ ಇದಕ್ಕಾಗಿ ಒಂದು criteria fix ಮಾಡಿಕೊಳ್ಳಲಿ, ಒಂದು ಜಿಲ್ಲಾ ಪಂಚಾಯಿತಿಗೆ ಇಷ್ಟು ಕೊಡುವುದು. 10 ಕಿ.ಮೀ. develop ಮಾಡುವುದು ಅಥವಾ 20 ಕಿ.ಮೀ. ಇರುವ ಜಿಲ್ಲಾ ಪಂಚಾಯಿತಿಗೆ ಏನು ಕೊಡುತ್ತೀರೋ ಎಂಬ ಬಗ್ಗೆ ತೀರ್ಮಾನ ತೆಗೆದುಕೊಳ್ಳುವುದು ಸೂಕ್ತ ಎಂದು ನನ್ನ ಅನಿಸಿಕೆಯಾಗಿದೆ. ಇದರ ಜೊತೆಗೆ SJSY ಮತ್ತು NRML Schemeನ ಬಗ್ಗೆ

SJSY ಯೋಜನೆಯ ಆದಾಯೋತ್ಪನ್ನ ಆಸ್ತಿಯನ್ನು ಸೃಜಿಸುವುದಕ್ಕೆ ಬಂದಿದೆ. ಅದರ ಅಡಿಯಲ್ಲಿ ಸಾಕಷ್ಟು ಸ್ವಸಹಾಯ ಸಂಘಗಳು, ಮಹಿಳಾ ಸಂಘಗಳು ಇರಬಹುದು, ಯುವಕರ ಸಂಘಗಳು ಇರಬಹುದು. ಅದರ ಲಾಭವನ್ನು ಪಡೆದು ಬಡತನದ ರೇಖೆಗಿಂತ ಅವರನ್ನು ಮೇಲಕ್ಕೆತ್ತುವ ಬಗ್ಗೆ ಉದ್ದೇಶದಿಂದ ಇದು ಬಂದಿದೆ. ಅದನ್ನು ಇವತ್ತು ಪುನರ್ ನಾಮಕರಣ ಮಾಡಿ NRML ಎಂದು ಮಾಡಿದ್ದಾರೆ. ಇದರಲ್ಲಿ SJSYನ ಎಲ್ಲಾ ಕಾರ್ಯಕ್ರಮಗಳು ಕೈಗೆತ್ತಿಕೊಂಡಿದ್ದಾರೆ. ಆದಾಯೋತ್ಪನ್ನ ಸೃಜಿಸುವಂತಹ ಹಾಲು ಉತ್ಪಾದಕರ ಸಹಕಾರ ಸಂಘಗಳ ಕಟ್ಟಡಕ್ಕೆ ಇದರಲ್ಲಿ ಅನುದಾನವನ್ನು reserve ಮಾಡಿಕೊಂಡಿರುವುದಿಲ್ಲ. ದಯವಿಟ್ಟು ಈ ಹಿಂದೆ SGSYನಲ್ಲಿ ಏನು ತೆಗೆದುಕೊಳ್ಳುತ್ತಿದ್ದಿರೋ ಅದೇ ತರಹ NRMLನಲ್ಲಿ ಹಾಲು ಉತ್ಪಾದಕರ ಸಹಕಾರ ಸಂಘದ ಕಟ್ಟಡಕ್ಕೆ ಅವಕಾಶವನ್ನು ಕಲ್ಪಿಸಿಕೊಡಬೇಕೆಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ನಮ್ಮ ಕ್ಷೇತ್ರದಲ್ಲಿ ಗ್ರಾಮ ಪಂಚಾಯಿತಿಯಲ್ಲಿ ನಿವೇಶನರಹಿತರಿಗೆ ಈ ಹಿಂದೆ ಕಂದಾಯ ಇಲಾಖೆಯ ತಹಶೀಲ್ದಾರ್‌ರವರು ಸೇರಿಕೊಂಡು ಮತ್ತು ಗ್ರಾಮ ಪಂಚಾಯಿತಿಯವರು ಸೇರಿಕೊಂಡು ಹಕ್ಕುಪತ್ರಗಳನ್ನು ವಿತರಣೆ ಮಾಡಿ ಅಲ್ಲಿ lay-outಗಳು ಸುಮಾರು 20 ವರ್ಷಗಳ ಹಿಂದೆಯೇ formation ಆಗಿದೆ. ಇದರಲ್ಲಿ ಕಂದಾಯ ಇಲಾಖೆಯವರ ತಪ್ಪೋ ಅಥವಾ ಮಾಹಿತಿಯು ಗ್ರಾಮ ಪಂಚಾಯಿತಿಯಿಂದ ಅವರಿಗೆ ದೊರಕದೇ ಇಂಡೀಕರಣ ಆಗಿಹೋಗಿದೆ. ಆ ತರಹದ ಸಮಸ್ಯೆಯನ್ನು ಗ್ರಾಮ ಪಂಚಾಯಿತಿಯವರು ಸಂಬಂಧಪಟ್ಟ ಮೇಲಾಧಿಕಾರಿಗಳೆಲ್ಲರೂ ಸರ್ಕಾರದ ಗಮನಕ್ಕೆ ತಂದಿರುತ್ತಾರೆ. ಅದೆಲ್ಲವನ್ನೂ ಸರಳೀಕರಣಗೊಳಿಸಿಕೊಂಡು ಈ ಹಿಂದೆ ಇಂಡೀಕರಣದಲ್ಲಿ ಏನು ತಪ್ಪಾಗಿದೆ ಅದನ್ನು ಸರಿಮಾಡಿಕೊಡಬೇಕೆಂದು ಈ ಮೂಲಕ ಕೇಳಿಕೊಳ್ಳುತ್ತಾ ಇವತ್ತಿನ ದಿವಸ ಈ ಗ್ರಾಮೀಣಾಭಿವೃದ್ಧಿಯ ವಿಚಾರದಲ್ಲಿ ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿರತಕ್ಕಂತಹ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಮೇಲುಕೋಟೆ):- ಸನ್ಮಾನ್ಯ ಸಭಾಧ್ಯಕ್ಷರೆ, ಗ್ರಾಮೀಣಾಭೀವೃದ್ಧಿ ಮತ್ತು ಪಂಚಾಯತ್ ರಾಜ್ ವ್ಯವಸ್ಥೆ ಬಗ್ಗೆ ಸುಮಾರು 8,000 ಕೋಟಿ ರೂಪಾಯಿಗಳಷ್ಟು ಹಣವಿತ್ತು. ಸುಮಾರು 65 ವರ್ಷಗಳಾಗಿವೆ, ಸದನದಲ್ಲಿ ಜಾಸ್ತಿ ಮಾತನಾಡಲಿಕ್ಕೆ ನೋಡಿಕೊಂಡು ಬರೋಣವೆಂದು ನಿನ್ನೆ ಹತ್ತು ಹಳ್ಳಿಗಳಿಗೆ ಹೋಗಿದ್ದೆನು. ಯಾರಿಗೋಸ್ಕರ ನಾವು ಇಲ್ಲಿಗೆ ಬಂದಿದ್ದೇವೆ ಎನ್ನಿಸುತ್ತದೆ. ಮಾತನಾಡಲಿಕ್ಕೆ ಬಂದಿದ್ದೇವೋ ಇಲ್ಲ ನಮ್ಮ ಹಳ್ಳಿಗಳಿಗೆ ಏನಾದರೂ ಮೂಲಭೂತ ಸೌಕರ್ಯಗಳನ್ನು ಕೊಡಿಸಿ ಅರ್ಜಿಯನ್ನು ಕೊಡದಿರುವಂತೆ ನೋಡಿಕೊಳ್ಳುವುದಕ್ಕೆ ಸಾಧ್ಯವೇ ಎನ್ನುವುದು ನನ್ನ ಆಸೆ. ಸನ್ಮಾನ್ಯ ಸಭಾಧ್ಯಕ್ಷರೆ, ಕರ್ನಾಟಕ ಸರ್ಕಾರದ ಬೊಕ್ಕಸಕ್ಕೆ ನಾವು ಕೊಡುವ ಹಣ 5 ವರ್ಷಕ್ಕೆ 7 ಲಕ್ಷ ಕೋಟಿ ರೂಪಾಯಿಗಳನ್ನು ತಲಾವಾರು ಹಂಚಿಕೊಂಡರೆ 1.50 ಲಕ್ಷ ರೂಪಾಯಿಗಳು ಬರುತ್ತದೆ. ಈಗ ನಾನು ಕ್ಯಾತನಹಳ್ಳಿ ಗ್ರಾಮ ಪಂಚಾಯಿತಿಯಿಂದ ಬಂದಿದ್ದೇನೆ. ನಮ್ಮ ಪಂಚಾಯಿತಿಯಿಂದ 105 ಕೋಟಿ ರೂಪಾಯಿಗಳ ತೆರಿಗೆಯನ್ನು ಕೊಡುತ್ತೇವೆ. ನಮಗೇನೂ ಬೇಕಿಲ್ಲ. ನಮಗೆ ಹಣ ಕೊಡಿ ಎಂದು ಕೇಳುತ್ತಿಲ್ಲ. 10 ಕೋಟಿ ರೂಪಾಯಿಗಳ ಒಂದು ಬಜೆಟ್ ಅನ್ನು ಮಂಡಿಸಿ ಕೊಡಿ ಸಾಕು ಎಂದು ಕೇಳುತ್ತಿದ್ದೇವೆ. ನಾವೇನು ಮಾಡುತ್ತಿದ್ದೇವೆಂದು ನಮಗೆ ಅರ್ಥವಾಗುತ್ತಿಲ್ಲ. ಉದ್ಯೋಗ ಭರವಸೆ ಯೋಜನೆ, ಗ್ರಾಮ ಪಂಚಾಯಿತಿ ರಸ್ತೆ, ತಾಲ್ಲೂಕು ಪಂಚಾಯಿತಿ ರಸ್ತೆ, ಜಿಲ್ಲಾ ಪಂಚಾಯಿತಿ ರಸ್ತೆ, ಜಿಲ್ಲಾ ಪಂಚಾಯಿತಿ ರಸ್ತೆ, ನಮ್ಮ ಊರು, ನಮ್ಮ ಹಳ್ಳಿ, ಗ್ರಾಮ, ಪ್ರಧಾನ ಮಂತ್ರಿ ರೋಜ್‌ಗಾರ್ ಯೋಜನೆ ರಸ್ತೆ, KADA roads, Irrigation Track Roads, MLA ಕೊಟ್ಟಂಥ 2.00 ಕೋಟಿ ರೂಪಾಯಿಗಳಲ್ಲಿ ಸ್ವಲ್ಪ road, NABARD ಯಾವುದು, ಎಷ್ಟೆಷ್ಟು ಹಣ, ಯಾರ್ಯಾರಿಗೆ ಹೋಗುತ್ತದೆ? ಏನಾಗಿದೆ? ಏಕೆ ನಮ್ಮ ಹಳ್ಳಿಗಳು ಅಭಿವೃದ್ಧಿಯಾಗಿಲ್ಲ? 91,000 ಜನ ಪಂಚಾಯಿತಿ Members. 1050 ಜನ ಜಿಲ್ಲಾ ಪಂಚಾಯತ್, 3,300 ಚಿಲ್ಲರೆ ತಾಲ್ಲೂಕು ಪಂಚಾಯಿತಿ, 224 ಜನ ಎಂ.ಎಲ್.ಎ.ಗಳು, 75 ಜನ ವಿಧಾನ ಪರಿಷತ್ತಿನ ಎಂ.ಎಲ್.ಸಿ.ಗಳು, ಇನ್ನು ನಾಮಕರಣ ಇವೆಲ್ಲಾ ಸೇರಿದರೆ ಒಂದು ಹಳ್ಳಿಗೆ 3 ಜನ ಬರುತ್ತೇವೆ. 29,600

ಹಳ್ಳಿಗಳು, 5,629 ಪಂಚಾಯಿತಿಗೆ ಹಂಚಿಕೊಂಡರೆ ಒಂದು ಹಳ್ಳಿಗೆ ನಾವು ರಾಜಕಾರಣದಿಂದ ಗೆದ್ದಿರುವವರು ಸುಮಾರು ಮೂರು ಜನ ಬರುತ್ತೇವೆ. ಸರ್, 120 ಟಿಎಂಸಿ ನೀರನ್ನು ಕುಡಿಯಲಿಕ್ಕೆ ನಾವು ಕೊಡಲಿಕ್ಕಾಗಿಲ್ಲ. ಶ್ರೀ ರಮೇಶ್‌ಕುಮಾರ್‌ರವರು 29 ಇಲಾಖೆಗಳನ್ನು ಒಂದು ಕಡೆ ತಂದು ಗ್ರಾಮ ಪಂಚಾಯಿತಿಯ ಛೇರ್ಮನ್‌ರವರನ್ನೇ ಮುಖ್ಯಮಂತ್ರಿಯನ್ನಾಗಿ ಮಾಡುತ್ತೇನೆ. ಆರ್ಥಿಕ ವಿಕೇಂದ್ರೀಕರಣದ ಮೂಲಕ ಗಾಂಧಿ ಕಲ್ಪನೆ ಗ್ರಾಮ ಸ್ವರಾಜ್ಯದ ಆಲೋಚನೆಯನ್ನು ಮಾಡುತ್ತೇವೆಂದು ಹೇಳಿದ್ದಾರೆ. ಅವರು ಯಾವ ತರಹ ಮಾಡುತ್ತಾರೆಂದು ನನಗೆ ಗೊತ್ತಾಗಿಲ್ಲ. ಮೂರು ತಿಂಗಳಾದರೂ ಮೋರಿ ನೀರು ಮುಂದಕ್ಕೆ ಹೋಗಿಲ್ಲ. ಆಮೇಲೆ ಎಲ್ಲದಕ್ಕೂ ಯಾರಾದರೂ ಹೋಗಲಿ, ಗ್ರಾಮ ಪಂಚಾಯಿತಿಯ ಸುದ್ದಿಯನ್ನು ಮಾತನಾಡುವುದಿಲ್ಲ. ಜಿಲ್ಲಾ ಪಂಚಾಯಿತಿಯ ಸುದ್ದಿಯನ್ನು ಮಾತನಾಡುವುದಿಲ್ಲ. ತಾಲ್ಲೂಕು ಇರಬಹುದು ಎಲ್ಲಾ MLA. ನಿಮಗೆ ಓಟು ಹಾಕಿದ್ದೇವೆ, ಈ ಮೋರಿ ಏಕೆ ಹೀಗಾಗಿದೆ? ಕಂಬಗಳಲ್ಲಿ light ಇಲ್ಲ, bulb ಏಕೆ ನೀವು ಹಾಕಿಸಿಲ್ಲ? ಸರ್, ನನಗೆ ಅರ್ಥವಾಗುತ್ತಿಲ್ಲ. ಯಾರಾದರೂ ಪಾಂಡವಪುರಕ್ಕೆ ಬಂದರೆ PDO ಗಳು ಮುಂದೆ ಹೋಗುತ್ತಿರುತ್ತಾರೆ, Chairman ಹಿಂದೆ ಬರುತ್ತಿರುತ್ತಾರೆ. ಪಂಚಾಯಿತಿ ಛೇರ್ಮನ್ ಹಿಂದೆ ಬರುತ್ತಿರುತ್ತಾರೆ ಎಂದರೆ ಇದರ ಅರ್ಥ ಏನೆಂದು ನನಗೆ ಗೊತ್ತಾಗುತ್ತಿಲ್ಲ. ಯಾವ ಆರೋಗ್ಯಕರವಾದ ಪಂಚಾಯಿತಿಯನ್ನು ಮಾಡುತ್ತಾರೆ? ಇಡೀ ಊರು ಪಂಚಾಯಿತಿಗೋಸ್ಕರ ಹೊಡೆದಾಡಿ ಚುನಾವಣೆ ಮಾಡಿ, ಕಾಸೆಲ್ಲಾ ಖರ್ಚು ಮಾಡಿ ಯಾರಿಗೋಸ್ಕರ Member ಆಗುತ್ತಾರೆ? ಆದ್ದರಿಂದ ನಾವು ಆಲೋಚನೆ ಮಾಡಬೇಕು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ವ್ಯವಸ್ಥೆಯಲ್ಲಿ ಒಂದು ಕಟ್ಟುನಿಟ್ಟಾದ ಹೊಸ ಆಲೋಚನೆ, ಒಂದು ಗುರಿ ಇರಬೇಕು, ಕರ್ನಾಟಕದಲ್ಲಿ ನಾವು ನಾಲ್ಕು ವರ್ಷಗಳಲ್ಲಿ ಕನಿಷ್ಠ 50 ಭಾಗ ಇವತ್ತು ಇರತಕ್ಕಂಥ ಗ್ರಾಮಗಳ ಸುಧಾರಣೆ ಮತ್ತು ಆರ್ಥಿಕ ಭದ್ರತೆ ಮೂಲಕ ಮೂಲಭೂತ ಸೌಕರ್ಯಗಳನ್ನು ಕೊಡಿ, ನಮಗೆ ಇನ್ನೇನೂ ಕೊಡಬೇಡಿ. ಚಿನ್ನ, ವಜ್ರಗಳು ಬೇಡ. Road ಗಳು ಆಗಬೇಕು. ಗುಣಾತ್ಮಕವಾದ ಮೋರಿಗಳು clean ಆಗಿ ಆಗಬೇಕು. ವಿದ್ಯುದೀಕರಣ, ಒಂದು ಅಂಗನವಾಡಿ,

ಒಂದು ಸ್ಕೂಲ್, ಸ್ಕೂಲ್ ರಿಪೇರಿ ಮಾಡಲಿಕ್ಕೆ ಪಂಚಾಯಿತಿಗೆ ಏಕೆ ಅಧಿಕಾರವನ್ನು ಕೊಡಬಾರದು? ಏಕೆ ಪಂಚಾಯಿತಿ ಅಂಗನವಾಡಿಯನ್ನು ಕಟ್ಟಿಸಬಾರದು? ಆಮೇಲೆ ಕೇವಲ Act ಮಾಡಿ, ಮಾಡಿ, Act ಮತ್ತು fact. ಈ ದೇಶದಲ್ಲಿ ಬೆಳಿಗ್ಗೆಯಿಂದ ಸಂಜೆವರೆಗೆ ಕಾನೂನು ಕಾನೂನು, ಕಾನೂನು.

ಶ್ರೀ ಬಸವರಾಜ ರಾಯರೆಡ್ಡಿ:- ನಮ್ಮ ದೇಶದಲ್ಲಿ 26000 ಕಾನೂನುಗಳಿವೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:- 26000 ಕಾನೂನುಗಳಿವೆ, ಯಾವ ಕಾನೂನು ಇದೆ, ಏನಿದೆ ಎಂದು ನನಗಂತೂ ಗೊತ್ತಾಗುತ್ತಿಲ್ಲ. ಬರೀ Act ಒಂದೊಂದಕ್ಕೂ ಬರೀ Act, ಅದು ನನಗಂತೂ ಅರ್ಥವಾಗುತ್ತಿಲ್ಲ. ಇಷ್ಟೊಂದು ಅರ್ಜಿಗಳನ್ನು ಸ್ವೀಕಾರ ಮಾಡುವಂಥ ಹಳ್ಳಿಗಳನ್ನು ನಾವು ಏಕೆ ಕಟ್ಟಿದ್ದೇವೆಂದು ಅರ್ಥವಾಗುತ್ತಿಲ್ಲ. ಗ್ರಾಮ ಸ್ವರಾಜ್ಯದ ಕಲ್ಪನೆ ಎಲ್ಲಿದೆ? ಯಾವ ತರಹ ಇದೆ? ಯಾವ ಕಾರಣಕ್ಕೋಸ್ಕರ ನಾವು ಇದನ್ನು ಆಲೋಚನೆ ಮಾಡುತ್ತಿದ್ದೇವೆ ಎಂದು ನನಗೆ ಗೊತ್ತಾಗುತ್ತಿಲ್ಲ. ತಮ್ಮಲ್ಲಿ ನಾನು ವಿನಂತಿ ಮಾಡುತ್ತೇನೆ. ದಯವಿಟ್ಟು ಕುಡಿಯುವ ನೀರನ್ನು ಮೂರು ಭಾಗ ಮಾಡಿ, ಎ-ಎಂದರೆ ಸಮಸ್ಯೆ ಇಲ್ಲದಿರುವ ನೀರು ಯಾವುದು? ಬಿ-ಕಡಿಮೆ ಇರತಕ್ಕಂಥದ್ದು ಮತ್ತು ಸಿ-fluoride ಅಂಶ ಇದ್ದು ಆರೋಗ್ಯಕರವಾದ ನೀರನ್ನು ಕೊಡದೇ ಇರುವುದಕ್ಕೆ ಕಾರಣ. ಎರಡನೆಯದಾಗಿ ಒಂದು report ತರಿಸಿಕೊಳ್ಳಬೇಕೆಂದು ತಮ್ಮಲ್ಲಿ ನಾನು ವಿನಂತಿಸುತ್ತೇನೆ. ಪ್ರತಿ ತಾಲ್ಲೂಕಿನಲ್ಲಿಯೂ ಒಟ್ಟು ಅಂತರ್ಜಲ ಎಷ್ಟಿದೆ? ಆ ತಾಲ್ಲೂಕಿಗೆ ಎಷ್ಟು ನೀರು shortage ಇದೆ? ಪಂಚಾಯಿತಿ level ನಲ್ಲಿ ಅಂತರ್ಜಲ ರಕ್ಷಣೆ ಮಾಡುವುದಕ್ಕೆ ಆಲೋಚನೆ ಏಕೆ ಮಾಡಿಲ್ಲ? Underground water recharge is the priority sector. ನಾವು ಏಕೆ ಮಾಡಲಿಕ್ಕಾಗುತ್ತಿಲ್ಲ? ಒಂದು ಉದಾಹರಣೆಗೆ ಹೇಳುತ್ತೇನೆ, ಈಗ ಉದ್ಯೋಗ ಭರವಸೆ ಯೋಜನೆಯಲ್ಲಿ ಮತ್ತು ಜಲ ಅಭಿವೃದ್ಧಿ ಯೋಜನೆಯಲ್ಲಿ bunding start ಆಗಿದೆ. ನಿಜ ಹೇಳುತ್ತೇನೆ, ಒಂದು ಎಕರೆಗೆ ನೀವೇನಾದರೂ ಕೂಪರ್ ಹೊಡೆದು ದೊಡ್ಡ ನೇಗಿಲಲ್ಲಿ ಅಡ್ಡಪಡ್ಡ ಹೊಡೆದು ನೀರನ್ನು ಸಂಗ್ರಹ ಮಾಡಿದರೆ ಒಂದು ಕುಂಟೆಗೆ ಮೂರರಿಂದ ನಾಲ್ಕು ಲಕ್ಷ

ಲೀಟರ್ ನೀರು ಸಂಗ್ರಹ ಮಾಡಬಹುದು, ಆದರೆ ಖರ್ಚು ಎಷ್ಟಾಗುತ್ತದೆಂದರೆ 300-00 ರೂಪಾಯಿಗಳು ಖರ್ಚಾಗುತ್ತದೆ ಅಷ್ಟೇ. ಇದನ್ನು sample ಆಗಿ ನೀವು ಪ್ರಯೋಗಾತ್ಮಕವಾದ ಆಲೋಚನೆ ಮಾಡಬೇಕು. ಸರ್, ಬೋರ್ ಕೊರೆದು ಇಡೀ ಹಳ್ಳಿಗಳ ಭೂಮಿಯನ್ನೆಲ್ಲಾ ತೂತು ಮಾಡಿಟ್ಟಿದ್ದೇವೆ. ಎಲ್ಲಿದೆ ನೀರು? ಅಂಕಿ ಅಂಶಗಳನ್ನು ತರಿಸಿ. 900 ಟಿಎಂಸಿ ನಿರು ಬೇಕು. 900 ಟಿಎಂಸಿ ನೀರಿನಲ್ಲಿ ನಮಗೆ 550 ಟಿಎಂಸಿ ನೀರು ಮಾತ್ರ ಸಿಗುತ್ತಿದೆ. ಇನ್ನೂ 350 ಟಿಎಂಸಿ ನೀರು short ಇದೆ. ಭೂಮಿಯನ್ನೆಲ್ಲಾ ತೂತು ಮಾಡಿ, ನೀರು ಸಿಗುತ್ತದೆಂದು ಹೇಳಿ ಕೊರೆದು ಬಿಸಾಕಿದ್ದೇವೆ. ದಯವಿಟ್ಟು ನೀವು ಆಲೋಚನೆ ಮಾಡಬೆಕು. ನಾಲ್ಕು ವರ್ಷಗಳಲ್ಲಿ ಸಮಗ್ರ 29600 ಹಳ್ಳಿಗಳಿಗೆ ಶುದ್ಧವಾದ ನೀರನ್ನು ಕೊಡುತ್ತೇವೆಂದು you take a decision. ಯಾವುದಾದರೂ ಒಂದು ಕಾರ್ಯಕ್ರಮ ಮಾಡಬೇಕು. ತಾವು ತಮ್ಮ ತಂದೆಯವರೆಲ್ಲಾ ಬಹಳ ದೊಡ್ಡ movement ನಲ್ಲಿ ಬಂದವರು. ಏನಾದರೂ ಒಂದು ಬದಲಾವಣೆ ಮಾಡಬೇಕು. ಇಲ್ಲದೇ ಹೋದರೆ ಎಲ್ಲರೂ ಒಂದೊಂದು ಹಳ್ಳಿಗೆ ಹೋಗಿ ನೋಡೋಣ, ಏಕೆ ಹೀಗಾಗಿದೆ? ಏನು ಮಾಡಬಹುದು ಎಂದು ನೋಡೋಣ. 65 ವರ್ಷಗಳಿಂದ ನೂರು-ನೂರು ಹಳ್ಳಿಗಳನ್ನು ದತ್ತು ತೆಗೆದುಕೊಂಡಿದ್ದರೆ ಇಷ್ಟು ಹೊತ್ತು ಮುಗಿದು ಹೋಗುತ್ತಿತ್ತು. ದಯವಿಟ್ಟು ನೀವು ಸುವರ್ಣ ಗ್ರಾಮ, ಐದ್ಯೆದು, ಮೂರು ಗ್ರಾಮಗಳನ್ನು ಏಕೆ ತೆಗೆದುಕೊಳ್ಳುತ್ತೀರಿ? ನಮ್ಮ ಹಣ ನಮಗೆ ಕೊಡಿ ಸರ್, ಏನು ಹಳ್ಳಿಯಿಂದ ಸರ್ಕಾರಕ್ಕೆ ಆದಾಯ ಬಂದಿಲ್ಲವೇ? ಕಬ್ಬಿನಿಂದ ಬರುವ ಆಲ್ಕೋಹಾಲ್ tax ಹಣ 5 ವರ್ಷಕ್ಕೆ, 70,000 ಕೋಟಿ ರೂಪಾಯಿಗಳನ್ನು ಕೊಡುತ್ತೇವೆ. ಅದನ್ನು ಹಂಚಿಕೊಂಡರೆ 12.00 ಕೋಟಿ ರೂಪಾಯಿಗಳಾಗುತ್ತದೆ. ಡಾಲರ್ಸ್ ಕಾಲೋನಿ, ಸದಾಶಿವನಗರದಲ್ಲಿರುವವರು ಒಬ್ಬರೂ ಏಕೆ ಒಂದು ಅರ್ಜಿಯನ್ನು ಕೊಡುವುದಿಲ್ಲ? ಅವರಿಗೆ ಯಾವಾಗಲೂ ಅಷ್ಟೊಂದು ಶುದ್ಧವಾದ ಗಾಳಿ, ಬೆಳಕು, drainage, ಮೋರಿ, ಗುಡಿಸುವವರು, ಮರ ಗಿಡಗಳು, ಸುಂದರವಾದ, ಆಹ್ಲಾದಕರವಾದ ವಾತಾವರಣ ಎಲ್ಲಾ ಸೃಷ್ಟಿಯಾಗುತ್ತದೆ. ಅವರಿಗೂ ಸಹ ಒಂದೇ ಓಟು ಅಲ್ಲವೇ? ನಮಗೂ ಒಂದೇ ಓಟು. ನಾವು ಅರ್ಜಿಯನ್ನು

ಕೊಟ್ಟು ಕೊಟ್ಟು ಸಾಕಾಯಿತು. ಈ ದೇಶದಲ್ಲಿ ಬ್ರಿಟಿಷ್‌ನವರ ಗುಲಾಮಗಿರಿ, ಗಾಂಧಿಯವರ ಗ್ರಾಮ ಸ್ವರಾಜ್ಯದ ಕಲ್ಪನೆ. ಗಾಂಧೀಜಿ ಏನು ಹೇಳುತ್ತಿದ್ದರು ಎಂದರೆ "ಏಕ್ ಏಕ್ ಗಾಂವ್ ಏಕ್ ಏಕ್ ಸರ್ಕಾರ್ ಹೋನಾ ಹೈ", ಕ್ಯಾ ಹೋಗಯಾ? ಅಭೀ ಸರ್ಕಸ್ ಹೋರಹಾ ಹೈ, ಪೂರಾ ಗಾಂವ್ ಮೆ ಅಭೀ ಸರ್ಕಸ್ ಚಲ್ ರಹಾ ಹೈ. ಕಿಸ್ ಕಾ ಪಾಸ್ ಪೂಚನಾ? ಕಿಸ್ ಕಾ ಪಾಸ್ ಬೋಲ್‌ನಾ ಹೈ? 91000 ಜನ ಪಂಚಾಯಿತಿ Members. ಯಾರಿಗಾಗಿ ಈ ಚುನಾವಣೆ ಎಂದು ನನಗೆ ಅರ್ಥವಾಗುತ್ತಿಲ್ಲ. Underground water recharge ಒಂದು ವರ್ಷಕ್ಕೆ ಮೂರು ಸಾವಿರ ಗಿಡವನ್ನು ಬೆಳೆಸಿ ಸಾಮಾಜಿಕ ಅರಣ್ಯವನ್ನಾಗಿ ಮಾಡುವುದಕ್ಕೆ ಒತ್ತು ಕೊಡುವಂಥ ಕೆಲಸವನ್ನು ಮಾಡುವುದಕ್ಕೆ ಪಂಚಾಯಿತಿಗೆ ಕೊಡಿ. ದೇಶೀಯ ತಳಿಗಳನ್ನು ರಕ್ಷಣೆ ಮಾಡುವಂಥದ್ದನ್ನು ಪಂಚಾಯತ್ ರಾಜ್ ವ್ಯವಸ್ಥೆಗೆ ಕೊಡಿ, ಸರ್.

ಆಶ್ರಯ ಮನೆಯನ್ನೂ ಪಂಚಾಯಿತಿಗೆ ಕೊಡಿ. ಕೊನೆಗೆ ಒಂದು ಮನೆ ಬಿದ್ದು ಹೋದರೆ ಪಂಚಾಯಿತಿಯವರಿಗೆ 5 ಸಾವಿರ ಕೊಡುವುದಕ್ಕೆ ಅಧಿಕಾರವಿಲ್ಲ. ಯಾವ ಪಂಚಾಯಿತಿ, ಸರ್ ಅದು? ಅರ್ಥವಾಗುತ್ತಿಲ್ಲ. ಬಡವನ ಮನೆ ಬಿದ್ದು ಹೋದರೆ 25 ಸಾವಿರ ರೂಪಾಯಿಗಳನ್ನು ಪಂಚಾಯಿತಿಗೆ ಕೊಡುವ ಸಾಮರ್ಥ್ಯವಿಲ್ಲ. ಬಡವರನ್ನು, ದಲಿತರನ್ನು ಹೇಗೆ ರಕ್ಷಣೆ ಮಾಡುತ್ತೀರಿ, ನಾವು ಎಲ್ಲಿ ರಕ್ಷಣೆ ಮಾಡುತ್ತೀದ್ದೇವೆ? ಕಚ್ಚಾ ಮನೆಯನ್ನು ಕೊಡುವ ಸಾಮರ್ಥ್ಯ ಪಂಚಾಯಿತಿಗೆ ಎಲ್ಲಿದೆ? ಒಬ್ಬ ಬಡವನ ಮನೆ ಬಿದ್ದು ಹೋದರೆ 25 ಸಾವಿರ ರೂಪಾಯಿಗಳನ್ನು ಕೊಟ್ಟು ಮನೆ ಕಟ್ಟಿಕೊಳ್ಳಪ್ಪ ಎಂದು ಹೇಳುವ ಸಾಮರ್ಥ್ಯ ಪಂಚಾಯಿತಿಗೆ ಎಲ್ಲಿದೆ? ನಾವು ಎಲ್ಲಿಗೆ ಹೋಗಿದ್ದೇವೆ ಎಂದರೆ ಎಲ್ಲಾ ಮನೆಗಳನ್ನು ಕಟ್ಟುವುದಕ್ಕೆ ಈಗ ನಾವು ಕಂಪ್ಯೂಟರ್‌ಗೆ ಹೊರಟು ಹೋಗಿದ್ದೇವೆ. ಈಗ ಇನ್ನು ಮೇಲೆ ಎಲ್ಲಾ ಕಂಪ್ಯೂಟರ್. ಮಕ್ಕಳು ಹುಟ್ಟಿಸುವುದು ಒಂದು ಬಿಟ್ಟರೆ ಇನ್ನು ಬಾಕಿಯದ್ದು ಎಲ್ಲಾ ಕಂಪ್ಯೂಟರ್. ಏ ದೂಸರಾ ವಿಚಾರ್ ಹೈ. ಅಭೀ ಇದರ್ ಸೆ ಬಾತ್ ಕರ್‌ನೆಕೋ ಮುಶ್ಕಿಲ್ ಹೈ.

ಒಬ್ಬ ಮಾನ್ಯ ಸದಸ್ಯರು:- ವೋ ಭಿ ಹೋ ರಹಾಹೈ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:– ವೋ ಭಿ ಹೋ ರಹಾಹೈ. ಹಮ್‌ಕೋ ಮಾಲೂಮ್ ಹೈ. ವೋ ವಿಚಾರ್ ಅಭೀ ಯಹಾ ಸೆ ಬಾತ್ ಕರ್‌ನೆಕೋ ಮುಶ್ಕಿಲ್ ಹೈನಾ? ಅದರಿಂದ ತಾವು ಏನು ಹೇಳುತ್ತಿದ್ದೀರಿ ಎಂದರೆ ಅದೂ ಆಗಬಹುದು. ಆದರೆ, ಇದು ಮಾತ್ರ machine ಹೇಳುತ್ತೆ, "ಮೊದಲನೇ ಬಿಲ್‌ಅನ್ನು ಕೊಡಲು ಒಪ್ಪಿದ್ದೇನೆ, ಎರಡನೇ ಬಿಲ್‌ಅನ್ನು ಕೊಡಲೂ ಒಪ್ಪಿದ್ದೇನೆ, ಮೂರನೇ ಬಿಲ್‌ಅನ್ನು ಕೊಡಲು ಅಗತ್ಯಕ್ಕಿಂತ ಹೆಚ್ಚು ಅಗಲವಾಗಿ ಕಟ್ಟಿದ್ದೀರಿ, 5 ಲಕ್ಷಕ್ಕಿಂತ ಹೆಚ್ಚಿನ ಮೊತ್ತವಾಗುತ್ತದೆ, ಆದ್ದರಿಂದ ನಾನು ನಿನಗೆ ಮೂರನೇ ಬಿಲ್‌ಅನ್ನು ಕೊಡಲು ಬರುವುದಿಲ್ಲ." 24 ಸಾವಿರ ಮನೆಗಳು ಹಾಗೆಯೇ ಬ್ಲಾಕ್ ಆಗಿವೆ. ಸರ್, ಮೊದಲು ಕೊಡುತ್ತಿದ್ದೀರಲ್ಲಾ ಏನಾಗಿತ್ತು? ನಾನು ಏನು ಹೇಳುತ್ತಿದ್ದೇನೆ ಎಂದರೆ, ಎಷ್ಟು ಭ್ರಷ್ಟಾಚಾರ, ಎಷ್ಟು ಅನುಮಾನ ಶುರುವಾಗುತ್ತಾ ಹೋಗುತ್ತದೋ ಅಷ್ಟು ಕಾನೂನು ಜಾಸ್ತಿಯಾಗುತ್ತಾ ಹೋಗುತ್ತದೆ. ಇದನ್ನು ಯಾವ ರೀತಿ ಮಾಡಬೇಕು? ಮಹಿಳೆಯರಿಗೆ ತರಬೇತಿ ಕೊಡತಕ್ಕಂತಹ ಕೆಲಸವನ್ನೂ ಸಹ ಪಂಚಾಯಿತಿಯಲ್ಲಿ ಮಾಡಬಹುದು. ಪಂಚಾಯಿತಿಯಲ್ಲಿ ಹೆಚ್ಚು ಉದ್ಯೋಗವನ್ನೂ ಸಹ ಸೃಷ್ಟಿ ಮಾಡಬಹುದು. ಏಕೆ ಮಾಡುವುದಕ್ಕಾಗುವುದಿಲ್ಲ? CFTRI ಎನ್ನುವ ಒಂದು ಸಂಸ್ಥೆಯನ್ನು ಪಂಚಾಯಿತಿಗೆ ಸೇರಿಸಿಕೊಂಡರೆ ನಾನಾ ಉದ್ಯೋಗಗಳನ್ನು ಸೃಷ್ಟಿ ಮಾಡಬಹುದು? ಏಕೆ ಮಾಡುವುದಕ್ಕಾಗುವುದಿಲ್ಲ? ಹಳ್ಳಿಯನ್ನೇ ಸರ್ಕಾರ ಮಾಡಿ. ಏಕೆ ಮಾಡುವುದಕ್ಕಾಗುವುದಿಲ್ಲ? ಮಾನ್ಯ ಅಧ್ಯಕ್ಷರೆ, ನಾವು ಶಾಸಕರಾಗಿ ಮೂಲಭೂತ ಸೌಕರ್ಯಗಳನ್ನು 65 ವರ್ಷಗಳಿಂದ ಕೊಡದೇ, ಅದು ಬಿ.ಜೆ.ಪಿ.ಯೋ, ಜೆ.ಡಿ.(ಎಸ್) ಇರಬಹುದು ಅಥವಾ ರೈತ ಸಂಘವಿರಬಹುದು, ಕಾಂಗ್ರೆಸ್‌ಇರಬಹುದು ಅದು ಬೇರೆ ಪ್ರಶ್ನೆ. ನಮಗೆ Political will ಇರಬೇಕು. ಯಾವ ತರಹ, ಏಕೆ ಮತ್ತೆ? ಅದರಿಂದ ಸರ್ಕಾರ ಪಂಚಾಯಿತಿಯನ್ನು ಮಾಡುವುದಕ್ಕೆ ಅತ್ಯಂತ ಗಂಭೀರವಾಗಿ ಆಲೋಚನೆ ಮಾಡಬೇಕು. ಮಾನ್ಯ ರಮೇಶ್ ಕುಮಾರ್‌ರವರು ತಾವು ಯಾವ ತರಹ ಮಾಡುತ್ತೀರೋ ಗೊತ್ತಿಲ್ಲ. ಆರ್ಥಿಕ ವಿಕೇಂದ್ರೀಕರಣವೆಂದರೆ, ಅಧಿಕಾರ ಕೊಟ್ಟು ಸುಮ್ಮನೆ ಕುಳ್ಳಿರಿಸಿಬಿಡುವುದಲ್ಲ. ಆ ಪಂಚಾಯಿತಿಯನ್ನು ಸಂಪೂರ್ಣ

ಆರ್ಥಿಕವಾಗಿ ಸುಭದ್ರ ಮಾಡಬೇಕು. ನಮ್ಮ ಊರಿನಲ್ಲಿ ಒಬ್ಬ ಸಿಕ್ಕಿದ್ದ. ನಿನ್ನ ಹೆಸರು ಏನು ಎಂದು ಕೇಳಿದೆ. ಕುಬೇರ ಎಂದು ಹೇಳಿದ. ಏನಾಗಬೇಕು ಎಂದರೆ ನಾಷ್ಟಕ್ಕೆ 5 ರೂಪಾಯಿಗಳು ಇದ್ದರೆ ಕೊಡಿಯಣ್ಣ ಅಂದ. ಎಲ್ಲಾ ಇಲಾಖೆಗಳನ್ನು ಪಂಚಾಯಿತಿಯಲ್ಲಿ ತಂದು ಕೂರಿಸಿ, ಅದಕ್ಕೊಬ್ಬರು ಛೇರ್ಮನ್ ಮಾಡಿ. . . ನಮ್ಮ ಊರಿನಲ್ಲಿ ನಾಟಕದಲ್ಲಿ ಹಾಗೆಯೇ ಆಗುವುದು. ದುರ್ಯೋಧನನ ಪಾರ್ಟ್ ಮಾಡಿ ಬೆಳಿಗ್ಗೆ ಹೊತ್ತು ಬಟ್ಟೆ ಬಿಚ್ಚಿ ಹಾಕಿ ಮನೆಗೆ ಹೋಗುತ್ತಾನೆ . . .

ಶ್ರೀ ಕೆ.ಆರ್. ರಮೇಶ್ ಕುಮಾರ್:– ಮಾನ್ಯ ಅಧ್ಯಕ್ಷರೆ, ಇವರು ಬಹಳ ಜಾಣರು. ಅಲ್ಲಿ ಏನೇನೆಲ್ಲಾ ಬರೆಯಬೇಕು ಅದನ್ನೆಲ್ಲಾ ನಮ್ಮ ಕೈಯಲ್ಲಿಯೇ ಬರೆಸಿದ್ದಾರೆ. ಸುಮ್ಮನೆ ಇಲ್ಲಿ ಬಂದು ಹೇಳುವುದು. ಮಾಡುವವರು ಇವರು. ನನ್ನದೇನೂ ಇಲ್ಲ. ನಮ್ಮನ್ನೆಲ್ಲಾ ಕಂಡರೆ ಭಯ ಜಾಸ್ತಿ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:– ಇಲ್ಲ. ಹಾಗೆ ಹೇಳುವುದಕ್ಕಾಗುವುದಿಲ್ಲ. ಏನಾದರೂ ರಮೇಶ್ ಕುಮಾರ್‌ರವರ ಮೇಲೆಯೇ. ಹಾಗೆ ಆಗುವುದಿಲ್ಲ. ಏನೇ ಆದರೂ ನಿಮ್ಮ ಮೇಲೆಯೇ? ಪಂಚಾಯಿತಿ ಚೆನ್ನಾಗಿ ಬೆಳೆಯಿತು. ರಮೇಶ್ ಕುಮಾರ್‌ಗೆ ಜಯವಾಗಲಿ. ಪಂಚಾಯಿತಿ ಕೆಟ್ಟಿತು, ರಮೇಶ್‌ಕುಮಾರ್‌ಗೆ ಏನೆನ್ನಬೇಕು? (ಗೊಂದಲ) ನಿಮ್ಮ ಹೆಸರು ಹೇಳಿದೆನಾ? ದತ್ತ ಎಂದು ಹೇಳಿದೆನೇ? ನೀವು ಏಕೆ ಗಾಬರಿ ಮಾಡಿಕೊಂಡಿರಿ? ಅದರಿಂದ ಆಲೋಚನೆ ಮಾಡಬೇಕು. ಏಕೆಂದರೆ, ಬಹಳ ದೀರ್ಘವಾಗಿ ಚರ್ಚೆ ಮಾಡಿ. ಆರ್ಥಿಕವಾಗಿ ಕನಿಷ್ಠ ನನಗೆ ಏನು ಅನಿಸುತ್ತದೆ ಎಂದರೆ, ನಿಮಗೆ ಏನು ಅನಿಸುತ್ತದೆ ಗೊತ್ತಿಲ್ಲ. ನೀವೆಲ್ಲಾ ಸೀನಿಯರ್ಸ್ ಇದ್ದೀರಿ. ಬಹಳ ಆಡಳಿತ ಮಾಡಿದ್ದೀರಿ. ಒಂದು ಪಂಚಾಯಿತಿಗೆ ಕನಿಷ್ಠ ಐದು ವರ್ಷಕ್ಕೆ 8 ಕೋಟಿ ರೂಪಾಯಿಗಳ ಹಣ. ಅದಕ್ಕೆ ಐದು ವರ್ಷಕ್ಕೆ ಅನುಷ್ಠಾನಕ್ಕೆ ತರುವುದಕ್ಕೆ economical plan ಆಗಬೇಕು. ಈಗ ₹ 15 ಲಕ್ಷ ಕೊಡುತ್ತೀರಿ. ₹ 15 ಲಕ್ಷಗಳಲ್ಲಿ ₹ 6 ಲಕ್ಷ current charge. ಅಲ್ಲಿ 5 ಲಕ್ಷ collect ಮಾಡಿದ್ದೀರಿ. 8+5=13 ಲಕ್ಷ ರೂಪಾಯಿಗಳು. 13 ಲಕ್ಷ ರೂಪಾಯಿಗಳು, 20 ಜನ members. ಅದನ್ನು ಹೇಗೆ ಹಂಚಿಕೊಳ್ಳುವುದು, ಅದು ಎಷ್ಟು ವರ್ಷ? 5–5

ಸಾವಿರ, 6–6 ಸಾವಿರ, 8–8 ಸಾವಿರ ಆಯಿತು. ದಯವಿಟ್ಟು ಅದು ಆಗಬಾರದು. ಒಂದು ಪ್ಲ್ಯಾನ್ ಇರಬೇಕು. ಆಮೇಲೆ ತಾವೆಲ್ಲಾ ಸೀನಿಯರ್ಸ್ ಸುವರ್ಣ ಗ್ರಾಮ ಯೋಜನೆ ಅನುಷ್ಠಾನಕ್ಕೆ ತಂದಿದ್ದೀರಿ. ಬರೀ ದೊಡ್ಡ ಗ್ರಾಮಗಳನ್ನು ಮಾತ್ರ ಅನುಷ್ಠಾನಕ್ಕೆ ತಂದಿದ್ದೀರಿ. ಚಿಕ್ಕ ಗ್ರಾಮಗಳಿಗೆ ಒಂದಕ್ಕೂ ಕೈಹಾಕಿಲ್ಲ ಏಕೆ?

ಶ್ರೀ ಎಂ.ಟಿ. ಕೃಷ್ಣ:– ಸರ್ಕಾರ fix ಮಾಡಿದ್ದು.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:– ಅರೆ, ಏಕೆ ಹಾಗೆ fix ಮಾಡಿದ್ದೀರಿ? ಒಂದು ಪಂಚಾಯಿತಿಯಲ್ಲಿ ಒಂದು ಗ್ರಾಮ ದೊಡ್ಡ ಗ್ರಾಮವಾದರೆ ಇನ್ನು ಏಳು ಗ್ರಾಮಗಳು ಚಿಕ್ಕ ಗ್ರಾಮಗಳು. ಚಿಕ್ಕ ಗ್ರಾಮಗಳಿಗೆ ಆರ್ಥಿಕವಾಗಿ ಏಕೆ ಕೊಡಬಾರದು? 25–30 ಲಕ್ಷ ರೂಪಾಯಿಗಳಲ್ಲಿ ಇಡೀ ಹಳ್ಳಿ ಅಭಿವೃದ್ಧಿಯಾಗುವುದನ್ನು ಒಂದೂವರೆ ಕೋಟಿ–ಎರಡು ಕೋಟಿ ರೂಪಾಯಿಗಳನ್ನು ಕೊಟ್ಟು ಒಂದು ಹಳ್ಳಿ ಅಭಿವೃದ್ಧಿ ಮಾಡುತ್ತೀರಿ ₹ 30–35 ಲಕ್ಷ ಕೊಟ್ಟು ಹಳ್ಳಿಗಳನ್ನು ಏಕೆ ಅಭಿವೃದ್ಧಿ ಮಾಡಬಾರದು? ಸಣ್ಣ ಗ್ರಾಮವನ್ನು ತಿರಸ್ಕರಿಸುವಂತಹ ಆರ್ಥಿಕ ಅಭದ್ರತೆ ಏಕೆ ಸೃಷ್ಟಿಯಾಗಿದೆ? ನನಗೆ ಅರ್ಥವಾಗುತ್ತಿಲ್ಲ. 95 ಕೆ.ಜಿ. ತೂಕ ಇರುವವನಿಗೂ ಒಂದೇ ಬಸ್ ಚಾರ್ಜ್, 35 ಕೆ.ಜಿ. ತೂಕ ಇರುವವನಿಗೂ ಒಂದೇ ಬಸ್ ಚಾರ್ಜ್. ಏನು ತೂಕದ ಮೇಲೆ ಬಸ್ ಚಾರ್ಜ್ ತೆಗೆದುಕೊಳ್ಳುತ್ತಾರಾ ತಮ್ಮಣ್ಣನವರೇ? ಸಣ್ಣ ಗ್ರಾಮಕ್ಕೆ ಕೊಟ್ಟಿಲ್ಲ. ಆದರೆ, ದೊಡ್ಡ ಗ್ರಾಮಕ್ಕೆ ಕೊಟ್ಟಿರುವುದು ನಾನು ನೋಡಿದ್ದೇನಲ್ಲಾ?

ಒಬ್ಬ ಮಾನ್ಯ ಸದಸ್ಯರು:– ಇಲ್ಲ ಕೊಟ್ಟಿದ್ದಾರೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:– Joint ಮಾಡಿ ಯಾವುದೋ ಒಂದೊಂದು ಕೊಟ್ಟಿದ್ದಾರೆ. Specific ಆಗಿ 15 ಹಳ್ಳಿಗಳಿಗೆ ನಾವು ಕೊಟ್ಟಿದ್ದೇವೆ ಎಂದು ಎಲ್ಲಿ ಹೇಳಿದ್ದೀರಿ?

ಶ್ರೀ ಡಿ.ಸಿ. ತಮ್ಮಣ್ಣ:– ಹಿಂದೆ ಕ್ಷೇತ್ರವಾರು ಹಣ ನಿಗದಿ ಮಾಡಿದ್ದರು. ಅದರ ಮೇಲೆ 5 ಹಳ್ಳಿನಾದರೂ ಕೊಡಬಹುದು. 10 ಹಳ್ಳಿಗಾದರೂ ಕೊಡಬಹುದು. ಹಿಂದೆ ಹಾಗೆ ಕೊಟ್ಟಿದೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:- ಇಲ್ಲ. ಎಲ್ಲೋ ಒಂದೊಂದು ಕೊಟ್ಟಿದ್ದಾರೆ.

ಶ್ರೀ ಸಿ.ಟಿ. ರವಿ:- ಅದು populationwise grant. ನೀವು ಎಷ್ಟು ಕೊಡುತ್ತೀರೋ ಅಷ್ಟು ಕೊಡುತ್ತಾರೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:- ನೀವು ಬೇಕಾದರೆ ವರದಿ ತರಿಸಿಕೊಂಡು ನೋಡಿ. 98%. ಏಕೆಂದರೆ, ದೊಡ್ಡ ಗ್ರಾಮಗಳ ರಾಜಕಾರಣ ಬೇರೆ.

ಶ್ರೀ ಡಿ.ಸಿ. ತಮ್ಮಣ್ಣ:- Elect ಮಾಡುವಂತಹ ಗ್ರಾಮಗಳಿಗೆ ಯಾವುದಾದರೂ ಕೊಡಬಹುದು.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:- ಅಲ್ಲಿ ರಾಜಕಾರಣವೂ ಇದೆ ಸರ್. ಈಗ ನೀವು ಅಷ್ಟೇ. ನಾವು ದೊಡ್ಡ ಗ್ರಾಮದಲ್ಲಿಯೇ ಛೇರ್‌ಮನ್ ಆಗಬೇಕು ಎನ್ನುವುದಿಲ್ಲವೇ?

ಶ್ರೀ ಡಿ.ಸಿ. ತಮ್ಮಣ್ಣ:- ಪರವಾಗಿಲ್ಲ ಸಣ್ಣ ಗ್ರಾಮಕ್ಕೆ ಕೊಡಲಿ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:- ದೊಡ್ಡ ಗ್ರಾಮದಲ್ಲಿಯೇ ಛೇರ್‌ಮನ್ ಆಗಬೇಕು. ಅಲ್ಲಿ ಇರುವ 36 ವೋಟುಗಳು. ಅವನಿಗೆ ಹೇಗೆ ಛೇರ್ಮನ್‌ಗಿರಿ ಕೊಡುವುದಕ್ಕಾಗುತ್ತದೆ ಅನ್ನುವುದಿಲ್ಲವೇನ್ರಿ? ಅದು ಹಾಗೆಯೇ ಆಗಿರುವುದು. ಅದರಿಂದ ಇದನ್ನು ಬಹಳ ಗಂಭೀರವಾಗಿ ಆಲೋಚನೆ ಮಾಡಬೇಕು. ಇನ್ನೊಂದು ಮಹಾರಾಷ್ಟ್ರದಲ್ಲಿ ಬಹಳ ದೊಡ್ಡ ಚರ್ಚೆಯಾಯಿತು. ರಮೇಶ್ ಕುಮಾರ್‌ರವರು ಮಾತನಾಡಿದರು. ಅಪರಾಧವಿಲ್ಲದ ಹಳ್ಳಿಗಳನ್ನು 'ಕಂತಮುಕ್ತ್ ಗಾವ್' ಗ್ರಾಮ ಪಂಚಾಯಿತಿಯ people's court, ಇದರ ಬಗ್ಗೆ ಬಹಳ ದೊಡ್ಡ ಆಲೋಚನೆಯಿತ್ತು. ಏಕೆ ಕೈಬಿಟ್ಟಿರಿ? ಕಾಂಗ್ರೆಸ್‌ನವರು ಏಕೆ ಹಾಗೆ ಕೈಬಿಡುತ್ತೀರಿ? ಅದು ಯಾವುದೋ ಒಂದು ಮದುವೆಗೆ ಒಂದು ಕಾನೂನು ತರುತ್ತೇವೆ ಎಂದಿರಿ, ಅದನ್ನು ಬಿಟ್ಟೇ ಬಿಟ್ಟಿರಿ. ಆಮೇಲೆ ಆ ಮೂಡನಂಬಿಕೆಗೆ ಒಂದು ಕಾನೂನು ತರುತ್ತೇನೆ ಎಂದಿರಿ. ಅದನ್ನೂ ಬಿಟ್ಟುಬಿಟ್ರಿ. ಮಾನ್ಯ ರವಿಯವರೇ, ಅಸ್ಪೃಶ್ಯತೆ ಬಗ್ಗೆ ಮಾತನಾಡುತ್ತಿದ್ದೀರಿ. ದೇವಸ್ಥಾನಗಳಲ್ಲಿ

ಅಸ್ಪೃಶ್ಯತೆ ಹೋಗಬೇಕಾದರೆ ಏನು ಮಾಡಬೇಕು ಗೊತ್ತಾ? ದೇವರಿಗೆ ಗುಡಿ ಕಟ್ಟಬಾರದು, open ಆಗಿ ಬಿಟ್ಟುಬಿಡಬೇಕು. ಗೊಮ್ಮಟೇಶ್ವರನನ್ನು ನೋಡುವುದಕ್ಕೆ ನಮಗೆ ಯಾವ ತಾಪತ್ರಯ? ಯಾವ ಜಾತಿಯವನಾಗಲಿ ಒಮ್ಮೆಗೇ ನೋಡಿರಪ್ಪ, ಯಾರೂ ಮುಟ್ಟುವ ಆಗಿಲ್ಲ, ಯಾರೂ ಮಾತನಾಡುವ ಆಗಿಲ್ಲ.

ಶ್ರೀ ಸಿ.ಟಿ. ರವಿ:– ಗೊಮ್ಮಟೇಶ್ವರನ ತರನೇ ಹೋಗಬೇಕಾಗಿಲ್ಲ, ಸರ್.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:– ಬೇರೆ ದೇವರುಗಳಿಗೆ ಬಟ್ಟೆ ಇಟ್ಟು ನಿಲ್ಲಿಸಿ ಬೇಡ ಅನ್ನುವುದಿಲ್ಲ. ಮುಕ್ತವಾಗಿ ಬಿಟ್ಟುಬಿಡಬೇಕು. ಸುಮ್ಮನೆ ದೇವರಿಗೆ ಗುಡಿ ಕಟ್ಟಿ, ಒಳಗೆ ಹಾಕಿ, ಬಗ್ಗಿ ನೋಡುವವನಿಗೂ ದೇವರು, ಪೂಜೆ ಮಾಡುವವನಿಗೂ ದೇವರು. ಯಾವ ಹಣೆಬರಹವಪ್ಪ? ದೇವರಿಗೆ ಸ್ವಾತಂತ್ರ್ಯ ಕೊಡದೇ ಕೂಡಿ ಹಾಕಿಕೊಂಡು ಕುಳಿತಿದ್ದೇವೆ ಎಂದರೆ, ನಮಗಿಂತ ಇನ್ನು ಯಾರಿರುತ್ತಾರೆ? ನನಗೆ ಗೊತ್ತಿಲ್ಲಪ್ಪ. ದೇವರನ್ನು ನಾವು ಸೆರೆಮನೆಗೆ ಹಾಕಿ ಬಗ್ಗಿ ನೋಡುವುದು, ಸುಮ್ಮನೆ open ಆಗಿ ಬಿಟ್ಟುಬಿಡಿ. ಎಲ್ಲಾ ಜಾತಿಯವರೂ ಒಮ್ಮೆಲೇ ನೋಡಲಿ. ದೇವರು ಏನು ಬೇಜಾರು ಮಾಡಿಕೊಳ್ಳುತ್ತದಾ? ಎಲ್ಲಿಂದಲಾದರೂ ನೋಡಲಿ. ಹೋಗಲಿ ದೇವರ ಮೇಲಿರುವ ಒಡವೆ ಕಳ್ಳತನವಾಗುತ್ತದೆ. ಮೊನ್ನೆ ಮೇಲುಕೋಟೆಯಲ್ಲಿ ಒಬ್ಬ 15 ಲಕ್ಷ ರೂಪಾಯಿಗಳ ಒಡವೆ ಒಮ್ಮೆಗೇ ತೆಗೆದುಕೊಂಡು ಹೋದ. ದೇವರನ್ನು ಸೆರೆಮನೆಯಲ್ಲಿಟ್ಟು, ಅದಕ್ಕೋಸ್ಕರ ಆ ಜಾತಿ, ಈ ಜಾತಿ ಏಕೆ?

ಶ್ರೀ ಹೆಚ್.ಕೆ. ಕುಮಾರಸ್ವಾಮಿ:– ಮಾನ್ಯ ಪುಟ್ಟಣ್ಣಯ್ಯನವರೆ, ಈ ದೇವರ ವಿಗ್ರಹ open ಆಗಿ ಇಟ್ಟರೆ ಏನಾಗಬಹುದು ಎಂದು ಈ ವಾರದ ಪತ್ರಿಕೆಗಳಲ್ಲೆಲ್ಲಾ ನೀವು ಓದಿರಬೇಕು. ನಮ್ಮ ಅನಂತಮೂರ್ತಿಯವರ ಪ್ರತಿಕ್ರಿಯೆ ಹಾಗೂ ಬೇರೆ ಕಡೆಗಳಲ್ಲಿ ನೀವು ಓದಿರಬೇಕು. ವಿಗ್ರಹಗಳನ್ನು open ಆಗಿ ಇಟ್ಟರೆ ಏನಾಗುತ್ತದೆ ಎಂಬುದು ತಮ್ಮ ಗಮನದಲ್ಲಿರಬೇಕು.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:- ದೇವರನ್ನು ನಾನು open ಆಗಿ ಇಡಿ ಎನ್ನುವ ಉದ್ದೇಶವೇನೆಂದರೆ, ಜಾತಿಯ ಕ್ರೌರ್ಯ, ಸಮಾಜ ದೇವಸ್ಥಾನದೊಳಗೂ ಬಿಡದೇ ಇರತಕ್ಕಂತಹ ಪರಿಸ್ಥಿತಿ ಸೃಷ್ಟಿಯಾಗಿದೆಯೆಲ್ಲಾ, ಅದು ನಾಶವಾಗಬೇಕು ಎನ್ನುವುದು ಅಷ್ಟೇ. ದೇವರ concept ಎಂದರೆ, ದೇವರು ನಮ್ಮೆಲ್ಲರಿಗಿಂತಲೂ ದೊಡ್ಡವನು. ಸಮಾನತೆಯನ್ನು ಒಪ್ಪಿಕೊಂಡಿರುವವರು. ಬಹಳ ದೊಡ್ಡ ಶಕ್ತಿ. ಏಕೆ ದೇವರ ಮುಂದೆ ಅಷ್ಟೊಂದು ಜಾತಿ ಪ್ರದರ್ಶನ? ಅದು ಏನೋ ಒಂದು dialogue ಹೇಳುತ್ತಾರೆ.

> 'ಜಗದಲ್ಲಿ ದೇವನು ಇರುವುದು ನಿಜವಾದಲ್ಲಿ ಅದು ಐಶ್ವರ್ಯವಂತರ ಮನೆಗಳಲ್ಲಿ ಮಾತ್ರ. ಅವರಾದರೂ ವೇಧ-ಘೋಷ-ಘಂಟಾನಾದಗಳಲ್ಲಿ ಮುಳುಗಿಸುವರು. ಪಕ್ವಾನ್ನ ಪಾಯಸವನ್ನು ಎಡೆ ಮಡಗುವಲ್ಲಿ ಜೊಲ್ಲು ಸುರಿಸುತ್ತಾ ಕುಳಿತಿರುವುದು ಆ ದೇವ. ಇವನು ದೇವನೇ? ಇದು ದೇವಾಲಯವೇ? ಅಲ್ಲ ಸ್ಮಶಾಣಾಲಯ. ಸತ್ತ ಹೆಣಕ್ಕೊಂದು ಗುಡ್ಡ ಕಟ್ಟಿ ಮುದ್ದಾದ ಫಲ-ಪುಷ್ಪಗಳಿಂದ ಅಲಂಕರಿಸಿದ ಸ್ಮಶಾಣಾಲಯ. ಶಾಸ್ತ್ರೀಯ ಪುರಾಣಿಕರು ತಮ್ಮ ಭಕ್ಷ ಭೋಜ್ಯಗಳನ್ನು ಒದಗಿಸಲು ಕಟ್ಟಿದ ಕಲ್ಪಿತ ಕಥೆಯಿದು. ದೇವರೇ, ರೈತರ ಆತ್ಮಹತ್ಯೆ ನಿಲ್ಲಿಸಲು ನಿನ್ನ ಕೈಯಲ್ಲಿ ಸಾಧ್ಯವಾಗುತ್ತಿಲ್ಲ.'

ದೇವರು ಎಲ್ಲಿದೆ? ದೇವರು ದೊಡ್ಡ ಶಕ್ತಿ, ನಾನು ಒಪ್ಪಿಕೊಳ್ಳುತ್ತೇನೆ. ನಾನು ನೋಡಿಲ್ಲ. ಆದರೆ ಜಾತಿಯ ಕ್ರೌರ್ಯ ಸಮಾಜದಲ್ಲಿ ದೇವರ ಮುಂದೆ ಹೋಗುವುದಕ್ಕೆ ಬಿಡದೇ ಇರತಕ್ಕಂತಹ ಪರಿಸ್ಥಿತಿ ಸೃಷ್ಟಿಯಾಗಿ ಹಳ್ಳಿಯಲ್ಲಿ ಘರ್ಷಣೆ ಸೃಷ್ಟಿಯಾಗಿದೆ. ಇದಕ್ಕೆ ಕಾರಣವೇನು? ನಮ್ಮೂರಲ್ಲಿ ಒಬ್ಬ ಗುಡಿ ಕಟ್ಟುವವರೆಗೆ ಅವನೇ ಕೆಲಸ ಮಾಡಿದ್ದ.

ವಿಶ್ವಕರ್ಮ ಜನಾಂಗದವರು, ಪರಿಶಿಷ್ಟ ಜಾತಿಯವರು, ಹಿಂದುಳಿದವರು, ಒಕ್ಕಲಿಗರು ಎಲ್ಲರೂ ಸೇರಿಕೊಂಡು ದೇವಾಲಯವನ್ನು ಕಟ್ಟಿದ ನಂತರ ಒಳಗೆ ಹೋಗುವುದು. ಪೂಜೆ ಮಾಡುವವರು ಮಾತ್ರ ಅಲ್ಲೇ ಇರುವುದು ಒಂದು ದಿವಸ ಯಾರೋ ಒಬ್ಬ ವ್ಯಕ್ತಿ ಗೊತ್ತಿಲ್ಲದೆ ಗುರ್ಭಗುಡಿಯ ಒಳಗೆ ಹೋಗಿ ದೇವರನ್ನು ಮುಟ್ಟಿದ್ದಾನೆಂದು 25,000 ರೂಪಾಯಿಗಳನ್ನು ಕಟ್ಟಿಸಿ ಪುಣ್ಯಾವಾಚನ ಮಾಡಿಸಿದರು, ಅಲ್ಲಿಯವರೆಗೆ ದೇವರು ಪವಿತ್ರವಾಗಲಿಲ್ಲವೇ? ಯಾವ ಸಮಾನತೆ ವಿಚಾರದ ಮೇಲೆ ಚರ್ಚೆ ಮಾಡುತ್ತೀರಿ? ದೇವರನ್ನು ಟೀಕೆ ಮಾಡುವುದಾಗಲಿ ಮತ್ತೊಂದು ಎಂದು ಅಲ್ಲ. ಗೌರವವನ್ನು ಹೆಚ್ಚು ಮಾಡುವಂತಹ ಧಾರ್ಮಿಕ ಆಲೋಚನೆಗಳ ಬಗ್ಗೆ ಚರ್ಚೆಯಾಗಬೇಕೆಂದೇ ಹೊರತು ಬೇರೆ ಇನ್ನೇನೂ ಅಲ್ಲ. ಕಾಂಗ್ರೆಸ್ಸಿನವರು ಅಷ್ಟೇ ಎಲ್ಲದಕ್ಕೂ ಹೆದರುತ್ತೀರಲ್ಲ ಏಕೆ? ಜಾತ್ಯತೀತ ಎಂದು ಹೇಳುತ್ತಿರಿ, ಮದುವೆ ಕಾನೂನನ್ನು ಏಕೆ ಜಾರಿಗೆ ತರಲಿಲ್ಲ? ಮಾಡಬೇಕು. ಧಾರ್ಮಿಕ ಆಚರಣೆ ಅಜ್ಞಾನ ಮತ್ತು ಮೌಢ್ಯತೆ ಬಗ್ಗೆ ಹೇಳಬೇಕು. ಏಕೆ ಹೇಳುತ್ತಿಲ್ಲ? ಎಂಜಲ ಎಲೆ ಮೇಲೆ ಉರುಳಾಡುವ ಅಜ್ಞಾನ, ಮೌಢ್ಯತೆ ಬಗ್ಗೆ ಏಕೆ ಮಾತನಾಡುವುದಕ್ಕೆ ಆಗುತ್ತಿಲ್ಲ? ಆದ್ದರಿಂದ, ಈಗ ಗ್ರಾಮಕ್ಕೆ ಹೋಗೋಣ ನಮ್ಮ ಹಳ್ಳಿಯಲ್ಲಿ ಹೆಚ್ಚು ಮೂಢ ನಂಬಿಕೆ, ಹೆಚ್ಚು ಅನಾನೂಕೂಲವಾಗಿರುವಂತಹ ಹಳ್ಳಿಗಳು ನಮ್ಮ ಮೂಢನಂಬಿಕೆಯಿಂದ ಬಹಳ ದೊಡ್ಡ ಅನಾಹುತಗಳನ್ನು ಹಳ್ಳಿಯಲ್ಲಿ ಅನುಭವಿಸಿ, ಬಹಳ ಕಷ್ಟವನ್ನು ಅನುಭವಿಸುವಂತಹ ಪರಿಸ್ಥಿತಿ ಸೃಷ್ಟಿಯಾಗಿದೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ:– ಪುಟ್ಟಣ್ಣಯ್ಯರವರೆ, ನಿಮ್ಮ ಪ್ರಕಾರ ಹೋದರೆ ನಮ್ಮ ಸನಾತನ ಧರ್ಮ ಏನು ಮಾಡುವುದು? ತ್ರೇತಾಯುಗದಲ್ಲಿ ನಡೆದ ಕಥೆಯನ್ನೇನು ಮಾಡುವುದು? ದ್ವಾಪರಯುಗದಲ್ಲಿ ನಡೆದಂತಹ ಕಥೆಯನ್ನೇನು ಮಾಡುವುದು? ನೋಡಿದ್ದಾರೆ, ಕೇಳಿದ್ದಾರೆ. ಇಲ್ಲವಾದರೆ ಮಹಾತ್ಮ ಗಾಂಧೀಜಿಯವರೇ ಇಲ್ಲವೆಂದು ನಮ್ಮ ಮಕ್ಕಳು ಹೇಳಿದರೆ ಏನು ಮಾಡುವುದಕ್ಕಾಗುತ್ತದೆ? ಇನ್ನು ಸ್ವಲ್ಪ ದಿವಸಗಳು ಹೋದರೆ ಮಹಾತ್ಮ ಗಾಂಧೀಜಿಯವರೇ ಇಲ್ಲವೆನ್ನುತ್ತಾರೆ. ಹಾಗಾದರೆ ನಿಮ್ಮ ಆದರ್ಶಗಳೇನು?

ನೀವು ಮಹಾಭಾರತ ಮತ್ತು ರಾಮಾಯಣದ ಆದರ್ಶಗಳ ಮೇಲೆ ನಿಂತಿಲ್ಲವೇ?

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:- ನಾನು ಯಾರನ್ನೂ ಟೀಕೆ ಮಾಡುತ್ತಿಲ್ಲ. ನಾನೊಬ್ಬ ರೈತನ ಮಗನಾಗಿ ನನಗೆ ಗೊತ್ತಿರುವ ಧರ್ಮ ಒಂದೇ, ನಾನೋಬ್ಬನೇ ಬದುಕಬೇಕೆಂಬುದು ಅಧರ್ಮ, ನಾವೆಲ್ಲರೂ ಬದುಕಬೇಕೆಂಬುದು ಧರ್ಮ. ಇವೆರಡನ್ನೂ ಬಿಟ್ಟರೆ ಇನ್ನಾವ ಧರ್ಮವೂ ಇಲ್ಲ. ನಾನು ಮತ್ತು ನಾವು ಇದನ್ನು ಬಿಟ್ಟರೆ ಧರ್ಮದಲ್ಲಿ ಇನ್ನೇನಿದೆ? ಧರ್ಮವನ್ನು ನಾವೇ ಬರೆದಿರುವುದು. ಯಾರೂ ಪ್ರಿಂಟ್ ಮಾಡಿಲ್ಲ. ಮನುಷ್ಯನೇ ಬರೆದಿರುವುದು. ಆದರೆ ಯಾವುದೇ ಧರ್ಮದಲ್ಲಿ ನಾನೊಬ್ಬನೇ ಬದುಕಬೇಕೆಂಬುದು ಅಧರ್ಮ, ನಾವೆಲ್ಲರೂ ಬದುಕಬೇಕೆಂಬುದು ಧರ್ಮ. ಇದಕ್ಕಿಂತ ದೊಡ್ಡ ಧರ್ಮ ಯಾವುದಿದೆ? ಆದರೆ ನಿಮ್ಮ ಧರ್ಮದಲ್ಲಿ difference ಇದೆ major irrigation ಗೆ rate ಜಾಸ್ತಿ, minor irrigation ಗೆ rate ಇಲ್ಲ. ಇದೇ ತಪ್ಪಾಗಿರುವುದು.

ಶ್ರಿ ಬಿ.ಬಿ. ನಿಂಗಯ್ಯ:- ಮಾನ್ಯ ಅಧ್ಯಕ್ಷರೆ, ಪುಟ್ಟಣ್ಣಯ್ಯನವರು ಬಹಳ ಗಂಭೀರವಾದ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಮಹಾಕವಿ ಪಂಪ "ಮಾನವ ಕುಲಂ ತಾನೊಂದೇ ಒಲಂ', ಎಂದು ಹೇಳಿದ್ದಾನೆ. ಅದನ್ನೇ ಉದ್ಧರಿಸಿ ರಾಷ್ಟ್ರಕವಿ ಕುವೆಂಪುರವರು "ವಿಶ್ವಮಾನವರಾಗಿ" ಎಂದು ಹೇಳಿದರು. ಎಲ್ಲಾ ಮಹಾತ್ಮರು ಇಂತಹ ಉದಾತ್ತವಾದ ವಿಚಾರಗಳನ್ನೇ ಹೇಳಿಕೊಂಡು ಬಂದಿದ್ದಾರೆ. ಈ ಸಮಾಜದಲ್ಲೇನು ವೈರುಧ್ಯಗಳಿವೆ, ವರ್ಣ ವ್ಯವಸ್ಥೆಗಳಿದೆ ಅದರ ಬಗ್ಗೆ ಬಹಳಷ್ಟು ಉಲ್ಲೇಖಗಳಿವೆ. ಹಾಗಾಗಿ ನಾನು ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ಮಾನ್ಯ ಸದಸ್ಯರು ಹೇಳುವಂತಹದ್ದು ಮನುಷ್ಯರನ್ನು ಮನುಷ್ಯ ಪ್ರೀತಿಸುವುದು ಧರ್ಮವಾಗಬೇಕು.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:- ಈ ವಿಷಯವನ್ನು ನಾನೇಕೆ ಪ್ರಸ್ತಾಪ ಮಾಡಿದ್ದೆನೆಂದರೆ, ರವಿಯವರು ಚೆನ್ನಾಗಿ ಮಾತನಾಡಿದರು, ಆ ವಿಷಯಕ್ಕೋಸ್ಕರ ಹೇಳಿದ್ದೇನೆಯೇ ಹೊರತು ಬೇರೆ ಯಾವ ಕಾರಣಕ್ಕೂ ಅಲ್ಲ.

ನಾವು ಆರೋಗ್ಯಕರವಾದ ಆಲೋಚನೆಗಳು, ಚರ್ಚೆ, university ಯಿಂದ ಹಿಡಿದು ಇವತ್ತು ಯುವಶಕ್ತಿ ಮುಂದೆ ಚರ್ಚೆಯಾಗಬೇಕಾಗಿದೆ. ಸಾಂಸ್ಕೃತಿಕ, ಶೈಕ್ಷಣಿಕ ವಿಷಯಗಳ ಬಗ್ಗೆ ಆಲೋಚನೆಗಳನ್ನು ಮಾಡದಿದ್ದರೆ ನಾವು ನಾಲ್ಕು ಗೋಡೆಗಳ ಮಧ್ಯೆ ಮಾತನಾಡಿ ಮನೆಯನ್ನು ಸೇರಿಸಿಕೊಳ್ಳುತ್ತೇವೆ ಅಷ್ಟೇ.

ಶ್ರೀ ಹೆಚ್.ಕೆ. ಪಾಟೀಲ್:– ರವಿಯವರು ಪ್ರಶ್ನೆ ಕೇಳುತ್ತಾರೆಂದು ನಾನು ತಿಳಿದಿದ್ದೆ. ಅವರು ಉತ್ತರ ಹೇಳಿದರು. ಆದರೆ ನೀವು ಬರಿ ಪ್ರಶ್ನೆಯನ್ನೇ ಕೇಳುತ್ತಾ ಹೋಗುತ್ತಿದ್ದೀರಿ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:– ಹಾಗೇನಿಲ್ಲ. ಸದನದಲ್ಲಿ ಎಲ್ಲಾ ವಿಷಯಗಳ ಬಗ್ಗೆ ಬೆಳಕು ಚೆಲ್ಲಬೇಕು. ಇನ್ನೂ ಸಾವಿರ ವರ್ಷಗಳು ಹೋದರೂ ಗ್ರಾಮೀಣಾಭಿವೃದ್ಧಿಯನ್ನು ಹತ್ತು ವರ್ಷಗಳೊಳಗೆ ಸಂಪೂರ್ಣ ಬದಲಾವಣೆ ಮಾಡುತ್ತೇವೆಂದು ಹೇಳುವವರು ಯಾರಿದ್ದಾರೆ? 65 ವರ್ಷಗಳಿಂದ ಅದೆ ರಸ್ತೆ, ಅದೇ ಹಳ್ಳ, ಅದೇ ಮೋರಿ. ಏನೋ ಕ್ರಾಂತಿಕಾರವಾಗಿ, ಪಕ್ಷಾತೀತವಾಗಿ ನಾವೆಲ್ಲರೂ ಆಡಳಿತ ಮಾಡಿದ್ದೇವೆ, ಏನಾದರೂ ಒಂದು ಬದಲಾವಣೆ ಆಗಿದೆಯೇ?

ಶ್ರೀ ಡಿ.ಎನ್. ಜೀವರಾಜ್:– ಪುಟ್ಟಣ್ಣಯ್ಯನವರೆ, ಹಳ್ಳಿಗಳಿಗೆ ಏನೂ ತಲುಪುತ್ತಿಲ್ಲವೆಂದು ತಾವು ಬಹಳ ವಿಸ್ತಾರವಾಗಿ ಹೇಳುತ್ತಿದ್ದೀರಿ. ಇದರಲ್ಲಿ ಬಹಳ ಸತ್ಯವಿದೆ. ಒಟ್ಟಾರೆಯಾದ reservation ಕುಡ ನಮ್ಮೂರಿನ ಕಾಲೋನಿಯವರಿಗೆ ತಲುಪುತ್ತಿಲ್ಲ. ಅದು ಯಾರಿಗೆ ತಲುಪುತ್ತಿದೆಯೆಂದರೆ ಯಾವತ್ತೋ reservation ತೆಗೆದುಕೊಂಡಿರುವ ಸದಾಶಿವನಗರದವರಿಗೆ, ಡಾಲರ್ಸ್ ಕಾಲೋನಿಯವರಿಗೆ ತಲುಪುತ್ತಿದೆ. ಅದಕ್ಕೆ ನಾವೇನು ಮಾಡಬೇಕೆಂದರೆ, ಒಮ್ಮೆ ಸರ್ಕಾರಿ ಕೆಲಸ ಕೊಟ್ಟ ನಂತರ, ಒಮ್ಮೆ ಸವಲತ್ತನ್ನು ತೆಗೆದುಕೊಂಡ ನಂತರ, ಉದಾಹರಣೆಗೆ ಬೇರೆ ಯಾರ ಮೇಲಾದರೂ ಹೇಳಿದರೆ ನನಗೆ ಕಷ್ಟವಾಗುತ್ತದೆ ಅದಕ್ಕೆ ನಿಂಗಯ್ಯರವರ ಮೇಲೆ ಹೇಳುತ್ತೇನೆ. ನಿಂಗಯ್ಯಅವರಿಗೆ reservation ಕೊಡುವುದಕ್ಕಾಗುತ್ತದೆಯೇ? ಇವರು ನನ್ನ ಸ್ನೇಹಿತರೆಂಬ ಕಾರಣಕ್ಕೆ ನಾನು ಹೇಳಿದ್ದು. ಅದು ಯಾರಿಗೆ ತಲುಪಬೇಕು?

ನಿಂಗಯ್ಯಅವರನ್ನು ಮುಂದುವರೆದವರನ್ನಾಗಿ ಮಾಡಬೇಕು. ಯಾರನ್ನು ಹಿಂದುಳಿದವರೆಂದು ಹೇಳಬೇಕೆಂದರೆ ಆ ಕಾಲೋನಿಯಲ್ಲಿ ಯಾವುದೇ ಸವಲತ್ತನ್ನು ತೆಗೆದುಕೊಳ್ಳದಿರುವವನು. ಆದರೆ ನಿಂಗಯ್ಯ ಅವರ ತಮ್ಮ ಮತ್ತು ನಿಂಗಯ್ಯಅವರ ಅಣ್ಣ ಅಲ್ಲ. ನಿಂಗಯ್ಯನವರು ಮಾತ್ರ ಮುಂದುವರೆದವರಾಗಬೇಕು.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:- ಒಕ್ಕಲಿಗರಲ್ಲೂ ಕೂಡ ಹೀಗೇ ಆಗಿದೆ. ಈ ಬಗ್ಗೆ ದೊಡ್ಡ ಚರ್ಚೆ ಮಾಡೋಣ ಬಿಡಿ.

ಶ್ರೀ ಬಿ.ಬಿ. ನಿಂಗಯ್ಯ:- ನಮ್ಮ ಸ್ನೇಹಿತರೆಂದು ಹೇಳುತ್ತಿದ್ದಿರಿ. ಇವತ್ತಿನವರೆಗೆ ನಾನು ಶಾಸಕನಾದ ನಂತರ ನನ್ನ ಕುಟುಂಬದಲ್ಲಿ ಯಾರಿಗೂ ಕೂಡ ನಾನು ಆ ಪ್ರಯೋಜನವನ್ನು ತೆಗೆದುಕೊಂಡಿಲ್ಲ.

ಶ್ರೀ ಡಿ.ಎನ್. ಜೀವರಾಜ್:- ನಾನು ಬೇಕೆಂದು ಹೇಳಲಿಲ್ಲ.

ಶ್ರೀ ಬಿ.ಬಿ. ನಿಂಗಯ್ಯ:- ನನಗೆ ಮಾತನಾಡುವುದಕ್ಕೆ ಅವಕಾಶ ಕೊಡಿ. ಇವತ್ತು ಐದು ಸಹಸ್ರ ವರ್ಷಗಳ ಇತಿಹಾಸ ಈ ಭಾರತೀಯ ಸಮಾಜಕ್ಕಿದೆ. ಇದನ್ನು ಮಾತನಾಡುವ ಸಂದರ್ಭದಲ್ಲಿ ಅದನ್ನು ಗಂಭೀರವಾಗಿ ತೆಗೆದುಕೊಂಡು ಮಾತನಾಡುವುದಕ್ಕೆ ಸಮಾಜ ಕಲ್ಯಾಣ ಇಲಾಖೆ ವಿಷಯ ಬರುತ್ತದೆ ಆಗ ಚರ್ಚೆ ಮಾಡೋಣ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:- ಏನಾದರೂ ಕ್ರಾಂತಿಕಾರಿ ಬದಲಾವಣೆ ಮಾಡುವುದಕ್ಕೆ ತಾವು ಘೋಷಣೆ ಮಾಡಬೇಕು. ನಮ್ಮ ಹಳ್ಳಿ ರಸ್ತೆಗಳೆಲ್ಲವೂ ಡಾಂಬರೀಕರಣವಾಗಬೇಕು. ಡ್ರೈನೇಜ್ ಸಿಸ್ಟಂ ಚೆನ್ನಾಗಿರಬೇಕು. ಶೌಚಾಲಯದ ಬಗ್ಗೆ ಹೇಳಬೇಕು.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ಪುಟ್ಟಣ್ಣಯ್ಯರವರೆ, ಅವರು ಕೊಟ್ಟಿರುವ ಮಾಹಿತಿ ಪ್ರಕಾರ ಒಂದು ಲಕ್ಷ ಕಿ.ಮೀ. ಇನ್ನೂ ಡಾಂಬರೀಕರಣವಾಗಬೇಕು. ಇದುವರೆಗೆ 58,000 ಕಿ.ಮಿ. ಎಂದು ಕೊಟ್ಟಿದ್ದಾರೆ. 58,000 ಕಿ.ಮೀ. ರಸ್ತೆ ಮಾಡುವುದಕ್ಕೆ ಇಷ್ಟು ವರ್ಷ

ತೆಗೆದುಕೊಂಡಿದ್ದೇವೆ. ಒಂದು ಲಕ್ಷ ಕಿ.ಮೀ. ರಸ್ತೆಗೆ ನೀವು ಕೊಡುವ amount ಎಲ್ಲಾ ಲೆಕ್ಕ ತೆಗದುಕೊಂಡರೆ ನೀವು ಹೇಳಿದ ಕ್ರಾಂತಿಯನ್ನು ಬಾಯಿಯಲ್ಲಿ ಮಾಡಬಹುದಷ್ಟೇ. ಈಗ ಇರುವುದನ್ನು ನೋಡಿದರೆ ಹಳ್ಳಿ ರಸ್ತೆಗಳೆಲ್ಲಾ ಆಗುವುದಕ್ಕೆ ಇನ್ನೂ ಶತಮಾನ ಬೇಕಾಗುತ್ತದೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:- ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಕುಮಾರಸ್ವಾಮಿ ಯವರು ಇನ್ನೂ ಶತಮಾನ ಬೇಕು ಎಂದು ಹೇಳುವುದರಲ್ಲಿ ನಿಜವಿದೆ. ಆದ್ದರಿಂದ ಕನಿಷ್ಠ ಸುಧಾರಣೆ ಮಾಡುವಂತಹ ಆಲೋಚನೆಯನ್ನು ಮಾಡಬೇಕಾಗಿದೆ. 29 ಇಲಾಖೆಗಳ ವಿಷಯದ ಬಗ್ಗೆ ಸರ್ಕಾರ ಚರ್ಚೆ ಮಾಡುತ್ತಿದೆ. ಶುದ್ಧವಾದ ಕುಡಿಯುವ ನೀರು, ರಸ್ತೆ ಡ್ರೈನೇಜ್ ಸಿಸ್ಟಂ ಅನ್ನು ಹಳ್ಳಿಗಳಲ್ಲಿ ಮಾಡಬೇಕು. ಪಂಚಾಯಿತಿಯನ್ನೇ ಸರ್ಕಾರ ಮಾಡುವಂತಹ ಆರ್ಥಿಕ ಭದ್ರತೆ ಮತ್ತು ಆಡಳಿತಾತ್ಮಕವಾಗಿ ಆಲೋಚನೆ ಮಾಡಬೇಕೆಂದು ಹೇಳುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಅಶೋಕ್ ಖೇಣಿ (ಬೀದರ್ ದಕ್ಷಿಣ):- ಮಾನ್ಯ ಅಧ್ಯಕ್ಷರೆ, ಪುಟ್ಟಣ್ಣಯ್ಯನವರು ದೇವರ ಬಗ್ಗೆ ಮಾತನಾಡುತ್ತಿದ್ದರು. ಅವರು ದೇವರನ್ನು open ಆಗಿ ಇಡಬೇಕೆಂದು ಹೇಳುತ್ತಿದ್ದರು. ನಾನು ಒಂದು simple incident ಹೇಳುತ್ತೇನೆ. ಎರಡು ವರ್ಷಗಳ ಹಿಂದೆ ನನಗೆ ಆಪರೇಷನ್ ಆಗಿತ್ತು. ನಾನು 40 second ತೀರಿಕೊಂಡಿದ್ದೆ. ನಾನು ದೇವರನ್ನು ಕೇಳಿ ಮತ್ತೆ ವಾಪಸ್ಸು ಬಂದಿದ್ದು. ದೇವರಿದ್ದಾನೆಂಬುದು ನಿಜ. ಪುಟ್ಟಣ್ಣಯ್ಯನವರೇ, ದೇವರು ಇರುವುದಕ್ಕೆ ನಾನಿಲ್ಲಿರುವುದು. ಅವರು ರೈತರನ್ನು ನೋಡಿಕೊಳ್ಳುತ್ತಾರೆ, ಎಲ್ಲಾ ಕೆಲಸ ಚೆನ್ನಾಗಿ ಆಗುತ್ತದೆ. ತಾವು ಹೇಳುವುದು ಸರಿಯಿದೆ. ನಾವು ದೇವರನ್ನು ಮರೆಯುತ್ತೇವೆ. ಯಾವಾಗ ನಮಗೆ ಕಷ್ಟವಿರುತ್ತದೆ ಆಗ ನಾವು ದೇವರನ್ನು ನೆನೆಯುತ್ತೇವೆ, ಪ್ರೀತಿ ಮಾಡುತ್ತೇವೆ ಪೂಜೆ ಮಾಡುತ್ತೆವೆ. ಯಾವಾಗ ಕಷ್ಟವಿರುವುದಿಲ್ಲ, ನಾವು ಯಾವಾಗ ಸದಾಶಿವನಗರದಲ್ಲಿ ಅಥವಾ ಕೋರಮಂಗಲದಲ್ಲಿರುತ್ತೇವೆ ಆಗ ನಾವು ದೇವರನ್ನು ಮರೆಯುತ್ತೇವೆ. ಈಗ ನಾನೂ Rural Development ಬಗ್ಗೆ ಮಾತನಾಡುತ್ತೇನೆ. My constituency needs only one Minister i.e., Rural Development Minister. ನಮ್ಮಲ್ಲಿ 124

villages ಇವೆ. ನಮ್ಮಲ್ಲಿ town ಅಥವಾ city ಯಾವುದೂ ಇಲ್ಲ. ನಾನು ಎಲ್ಲಾ ಊರಿಗೆ ಸಂಬಂಧಿಸಿದಂತೆ ಒಂದು detailed report ಅನ್ನು ಮಾಡಿಸಿದ್ದೇನೆ. 124 villages, 34 Gram Panchayathsಗಳಲ್ಲಿ ರೋಡ್ ಎಲ್ಲಿ ಬೇಕು, ಕುಡಿಯುವ ನೀರು ಎಲ್ಲಿ ಬೇಕು. ಅಂಗನವಾಡಿಗಳು, ಸ್ಕೂಲ್‌ಗಳು ಮತ್ತು hospitals ಎಲ್ಲೆಲ್ಲಿ ಬೇಕು ಎಂಬ ಬಗ್ಗೆ detailed study ಮಾಡಿಸಿದ್ದೇನೆ. To bring the villages to the standard of Bangalore you need to spend ₹ 1,00,000/- per person. Actual cost required is ₹ 1,00,000/- per household to bring it to the standard of city. ಹಣ ಖರ್ಚು ಮಾಡುತ್ತಿರುವ ಬಗ್ಗೆ ತಿಳಿದುಕೊಳ್ಳಲು ನಾನು ಬಜೆಟ್ ಅನ್ನು ಅಭ್ಯಾಸ ಮಾಡುತ್ತೇನೆ. In the budget there is a big gap between allocation and release. There is an item called 'unspent provision'. What is the meaning of unspent provision ಎಂದು ನನಗೆ ಗೊತ್ತಿಲ್ಲ. In Rural Development and Panchayath Raj Sector they say that the original provision is ₹ 1,512 crores. Then supplementary provision is ₹ 800 crores. Total is ₹ 2,312 crores. But expenditure is only ₹ 205 crores. Rest they say unspent provision, ₹ 2,106 crores is unspent. Unspent means is it that you are going to give the last year's unspent money to us this year. Or is it just to fix the numbers and make us feel good? If it is for making feel good factor, yes fine. We are happy that so much money is in the account. But practically we are not getting the money. ಏನಾಗುತ್ತದೆಂದರೆ, ಮಾನ್ಯ ರಾಜಣ್ಣನವರು ಹೇಳಿದ ಹಾಗೆ, suppose if we need ₹ 10 lakhs to do some work and you release one lakh, it is impossible to do that work. It is like my child wants a shirt and a pant, I allocate rs 100 to buy a pant and a shirt and I release only rs 20 to him to buy a shirt and after two years I release another rs 20 buy a pant. So, by that time the shirt is worn out and the pant may be new.

This is how the whole planning process is wrong. I think when you allocate funds, allocate for the completion of that project then we get revenue generation from them. ಏನಾಗಿದೆ decentralization of power accumulated ಆಗಿದೆ. ಪುಟ್ಟಣ್ಣಯ್ಯರವರು ಹೇಳಿದ ಹಾಗೆ we have 91,000 grama panchayat members, we have decentralized the power. But also, what we had in the process is we have decentralized corruption. So, what is going on May be a few people were in power before. Now 91,000 people are in villages for corruption. This is what is happening. When you take the allocation for housing, I requested that they should do purely on lottery. ಯಾರೋ ಬಂದು ಹೇಳುತ್ತಾರೆ, 20, 30, 40 ಸಾವಿರ ರೂಪಾಯಿ ಲಂಚ ತೆಗೆದುಕೊಳ್ಳುತ್ತಿದ್ದಾರೆ to put their names. Where will this poor people give that kind of money to get their housing done? Even if they give that for corruption how can they build their house? So, what has happened is that there is absolutely no accountability. We are spending money, take for example, your scheme for rural employment, Rural employment ನಲ್ಲಿ we have got a scheme to create jobs. But What is happening is, I requested our officers there you got these men here. They are getting employment, they are getting job, government is giving them money, can I use them to fix our Anganwadis, can I use them to fix our hospitals, can I use them to fix our panchayaths, can I use them to fix the schools, they said 'No'. It is not allowed as per the law. I am saying what work could be done by machine, for example, digging of the trench they are giving the shovel and digging the trench to create work, I think this is a shame. Why don't we just give them spoon, we can create more jobs in that way to dig. Instead of that what we should have is machines, to

do the work which they do efficiently and provide these people training skills of painting, fixing the buildings or maintaining of the villages etc. that should be done.

ಉಪಾಧ್ಯಕ್ಷರು:– ಸ್ವಲ್ಪ ಕನ್ನಡದಲ್ಲಿ ಮಾತನಾಡಿ ಆದಷ್ಟು. Try to speak in Kannada.

Sri H.K. PATIL:- ನೀವು ಹೇಳುವುದು ಸರಿ ಎನಿಸುತ್ತದೆ. ಆದರೆ how many artists you can create? What type of jobs what you are mentioning can be in quantum? We want to create the work for agricultural labourers. For them the employment programme is very much focused. You tell us. ನಾವು ಈಗ ಏನೇನು create ಮಾಡುತ್ತಿದ್ದೇವೆ, ಅದನ್ನು ಬಿಟ್ಟು ಯಾವುದನ್ನು create ಮಾಡಬೇಕೆಂದು ಹೇಳಿ. ನೀವು ನಮ್ಮ agricultural labourers, artists ಆಗಬಹುದು, artists ಅನ್ನು ಮಾಡುವುದಕ್ಕೆ ಅವರಿಗೆ ಹಣ ಕೊಡಿ ಎಂದರೆ ನಮ್ಮದೇನೂ ತಕರಾರು ಇಲ್ಲ. ಅವರಿಗೆ suit ಆಗುವಂತಹ ಯಾವ ಹುದ್ದೆಗಳನ್ನು ನಾವು ಸೃಷ್ಟಿ ಮಾಡಬಹುದು ಎನ್ನುವುದನ್ನು ದಯಮಾಡಿ ಹೇಳಿ.

SRI ASHOK KHENY:- Sir, ನಾನು ಹೇಳುತ್ತಿರುವುದು artists, paint ಹೇಳುತ್ತಿಲ್ಲ. ಸುಣ್ಣ ಹಚ್ಚುವುದು buildingಗೆ, that could be trained in one day. ನಾನು ಹೇಳುವುದು clean ಮಾಡುವುದು. Hospitals ಸ್ವಚ್ಛ ಮಾಡುವುದು, Anganwadis ಸ್ವಚ್ಛ ಮಾಡುವುದು, ಅಲ್ಲಿ ಕಚಡಾ ತೆಗೆಯುವುದು, this is the work which the labourer works. It is not an artist's work. ಹೇಗೆ agriculture work ಮಾಡುತ್ತೀರಿ same expertise could be given and in that way we have clean villages. When you have cleanliness, it is next to godliness. When you have cleaned the villages, naturally your children are motivated to perform better. ಈಗ ಏನಾಗುತ್ತದೆ ಎಂದರೆ for example, solid waste disposal. ನಾವು

ಬೆಂಗಳೂರು ಸಿಟಿಯಲ್ಲಿ problems ನೋಡುತ್ತೇವೆ. But, we are creating a huge future problem. ನನ್ನ constituencyಯಲ್ಲಿ ಈಗ study ಮಾಡಿದ್ದೇನೆ, 37 tonnes of garbage solid waste is collected every single day. Looking at it 15,000 tonnes of garbage waste per year is getting accumulated. Similarly 2.7 million cubic meters of sewage is flowing. ಏನು ಮಾಡುತ್ತಿದ್ದಾರೆಂದರೆ ಹೊಸ programmes ಮಾಡುತ್ತಿದ್ದಾರೆ, multi-village schemes ಮಾಡಿ ನೀರು ಕೊಡುತ್ತಿದ್ದಾರೆ. But, along with that sewage treatment plant ಹಾಕುತ್ತಿಲ್ಲ. ಏನಾಗುತ್ತಿದೆ ಎಂದರೆ the more water we give we generate more sewage. ಎಲ್ಲಿ ಹೋಗುತ್ತದೆ? Sewage ಎಂದರೆ low lying areas which is basically SC/ST colonies and poor sections living colonies. So, we are generating more sewage without planning together. Concrete road ಕಟ್ಟುತ್ತಿದ್ದೇವೆ. ಚೆನ್ನಾಗಿ ಕಟ್ಟುತ್ತಿದ್ದೇವೆ. ಅದರ ಜೊತೆಯಲ್ಲಿ ನೀರು ಹೋಗುವುದಕ್ಕೆ pipes ಹಾಕುತ್ತಿಲ್ಲ. Next programme ಬರುತ್ತದೆ we will do multi-village scheme for drinking water, for houses ಎಂದು ಹೇಳುತ್ತಾರೆ. ಅವರು ಬಂದು he will start digging the concrete road and put his pipes. So, what is required is you have to put the pipes for water, electric, sewage before putting the concrete roads, because it is permanent. If concrete road is laid property 30 ವರ್ಷ service ಕೊಡುತ್ತದೆ. ಅದಕ್ಕೆ it is important that our rural development should have a concrete plan and we put all the infrastructure in the base before putting the concrete. In that way we have the permanent solution. When Plug and play, ನಮ್ಮ funds ಬರುತ್ತದೆ, ನೀರು ಬರುತ್ತದೆ, just plug into those pipelines. ಅದು ನನ್ನ request ಇದೆ, ಅದನ್ನು ಹಾಗೆ ಮಾಡಬೇಕು. ಈಗ drinking water ಸಲುವಾಗಿ ಮಾಡಬೇಕು other thing is solid waste. Actually, we can create income for village panchayat. ಏನಾಗುತ್ತದೆ ಏಂದರೆ to collect this solid waste together the cost we

have worked out, comes to 2.64 crores per year. However, solid waste ತೆಗೆದುಕೊಂಡು if we made it to vermi compost we will get an income of ₹ 45 lakhs per month. That would be nearly three times the money which we are spending on collecting the solid waste. These are the programmes that will generate money for the panchayath. Another thing I noticed was, ಏನಾಗಿದೆ ಎಂದರೆ different parties will come for power, panchayath buildings ಇವೆ, ಯಾರು ಅವರಿಗೆ favour ಇರುತ್ತಾರೆ ಅವರಿಗೆ 10 ರೂ. per month rent, 100 Rs. Per month rent ಕೊಡುತ್ತಾರೆ. ನಾನು ಬೀದರ್‌ನಲ್ಲಿ ನೋಡಿದ್ದೇನೆ, in front of taluka panchayath, they have rented shops for less than ₹ 1000 a month. What is required for us is to start collecting a detailed inventory of what are the assets of the panchayath, for the last 67 years ಎಷ್ಟು asset create ಮಾಡಿದ್ದೇವೆ, What is our revenue from that? And we have to update the revenue and we will generate lot of money to be used for the gram panchyath, I feel that we have created thousands of crores of assets which we are not put in to proper use. Now, other thing which I wanted to do was, programmeನಲ್ಲಿ testing of the water ಬಗ್ಗೆ ಹೇಳಿದ್ದಾರೆ. ನನ್ನ ಇಚ್ಛೆ ಏನೆಂದರೆ testing water ಏನಾಗುತ್ತದೆ ಎಂದರೆ ನಾವು ಬೀದರ್‌ನಿಂದ ನೀರನ್ನು ತೆಗೆದುಕೊಂಡು ಬಂದು ಗುಲ್ಬರ್ಗಕ್ಕೆ ಕಳುಹಿಸಬೇಕು. ಗುಲ್ಬರ್ಗಕ್ಕೆ ಕಳುಹಿಸುವಷ್ಟರಲ್ಲಿ ಏನು ಮಾಡುತ್ತಾರೋ ಗೊತ್ತಿಲ್ಲ, ಕ್ಲೋರಿನ್ ಹಾಕುತ್ತಾರೆ, contamination ಆಗುತ್ತದೆ, ನಮಗೆ testing of water ಯಾವುದು correct ಇದೆ ಗೊತ್ತಾಗುತ್ತಿಲ್ಲ. One testing van could be given for each constituency or each taluk and they test the water every year. Testing of water is a continuous process. Pollution can happen any time, any day, any second. So we need to provide those testing vans to test the drinking water every single borewell and report should be submitted to each

village panchayath. Rural employment scheme ನಲ್ಲಿ ಏನು ಮಾಡುತ್ತಿದ್ದಾರೆಂದರೆ roads ಏನು ಕಟ್ಟುತ್ತಿದ್ದರು, ಯಾರು ಗ್ರಾಮ ಪಂಚಾಯಿತಿಯ ಮೆಂಬರ್ ಇದ್ದಾನೆ, ಯಾರು ಸಾಹುಕಾರನಿದ್ದಾನೆ ಅವನದು ಒಂದೇ ಮನೆ ಇರುತ್ತದೆ ರೋಡ್‌ನಲ್ಲಿ, ಒಂದು ಕಿಲೋ ಮೀಟರ್ ರೋಡ್ ಕಟ್ಟಿಕೊಳ್ಳುತ್ತಾನೆ. So, the road for which ₹ 50 lakhs or 40 lakhs is spent for serving only one house. ನಾವು ಏನು ಮಾಡಿದ್ದೇವೆಂದರೆ in every village we have identified how many houses are there in each road and we prioritize it. ಯಾವ ರೋಡ್‌ನಲ್ಲಿ 33 ಮನೆಗಳಿರುತ್ತವೆ that road will be built first. Next would be 26 houses, may be 13 houses, maximum number of people will benefit from it from building these roads. ಇದನ್ನು programme ಎಂದು ಮಾಡಬೇಕು. There should be a policy. ಎಲ್ಲಿ ಮತ್ತು ಹೇಗೆ ತರಬೇಕು? I think the idea is to prioritize and give to maximum benefits from the money to the maximum number of people. Similarly with the drinking water, drinking waterಗೆ ನನಗೆ ಬೋರ್‌ವೆಲ್ ಬೇಕು ಎಂದು ಜನ ಬಂದು influence ಮಾಡುತ್ತಾರೆ. There is no survey done about the amount of water required. For example ತಾವು villagesನಲ್ಲಿ 50 litres per day ಎಂದು ಹೇಳುತ್ತೀರಿ, Cityಯಲ್ಲಿ 80 litres per day ಎಂದು ಹೇಳುತ್ತೀರಿ. ನನ್ನ ವಿಚಾರದಲ್ಲಿ villagers ಗೆ ಜಾಸ್ತಿ ನೀರು ಬೇಕಾಗುತ್ತದೆ. 55, 135. ವಿಲೇಜ್‌ಗೆ 55. ನಿಜವಾಗಿಯೂ ಕುಡಿಯುವುದಕ್ಕೆ ನೀರು ಜಾಸ್ತಿ ಬೇಕು.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:- ಮಾನ್ಯ ಉಪಾಧ್ಯಕ್ಷರೆ, ಹಳ್ಳಿಯಲ್ಲಿ 55, ನಗರಕ್ಕೆ 135 ಎಂದು ಯಾವ ಮಾನದಂಡದ ಮೇಲೆ ನಿಗದಿ ಮಾಡಿದ್ದೀರಿ? ಬೆವರು ಮೈಸೂರು-ಬೆಂಗಳೂರಿನಲ್ಲಿ ಬರುತ್ತದೆಯೇ, ಇಲ್ಲವೇ ಹಳ್ಳಿಯಲ್ಲಿ ಬರುತ್ತದೆಯೇ? ಯಾವ ಆಧಾರದ ಮೇಲೆ ಮಾಡಲಾಗಿದೆ? ಸನ್ಮಾನ್ಯ ಉಪಾಧ್ಯಕ್ಷರೇ, ಹಳ್ಳಿಯವರಿಗೆ 55 ಲೀಟರ್, ಮೈಸೂರು-ಬೆಂಗಳೂರು

ನಗರದಲ್ಲಿರುವವರಿಗೆ 135 ಲೀಟರ್. ಯಾವ ಮಾನದಂಡದ ಮೇಲೆ ಆ ತರಹದ ನೀತಿ ಸೃಷ್ಟಿಯಾಗಿದೆ ಎಂದು ಹೇಳಬೇಕು.

(ಗೊಂದಲ)

ಶ್ರೀ ಕೆ.ಎಂ. ಶಿವಲಿಂಗೇಗೌಡ:- ಮಾನ್ಯ ಉಪಾಧ್ಯಕ್ಷರೆ, ಗಲೀಜು ಕಡಿಮೆಯಲ್ಲ. ಅಲ್ಲಿ ವಾತಾವರಣಕ್ಕೆ ಅನುಗುಣವಾಗಿ ಕಟ್ಟೆ, ಕೆರೆ ಎಲ್ಲಾ ಇರುತ್ತದೆ. ಅಲ್ಲಿ ನೀರು ಕುಡಿಸುವುದಕ್ಕೆ ಇರುತ್ತದೆ. ಬಟ್ಟೆ ಒಗೆಯುವುದಕ್ಕೆ ಬೇರೆ sources ಇರುತ್ತದೆ. ಆ ದೃಷ್ಟಿಯಿಂದ ಮನೆಯಲ್ಲಿ utilize ಮಾಡುವುದಕ್ಕೆ 55 ಸಾಕು. ನಾವು ಹೊರಸಂಪನ್ಮೂಲದಲ್ಲಿ ಇನ್ನು 150 ಹೊರಗಡೆ utilize ಮಾಡಿಕೊಳ್ಳುತ್ತೇವೆ. ಅದಕ್ಕೋಸ್ಕರ ಅವರಿಗೂ ನಮಗೂ ವ್ಯತ್ಯಾಸ ಮಾಡಿದ್ದಾರೆ.

ಶ್ರೀ ಅಶೋಕ್ ಖೇಣಿ:- ಗೌಡರೇ, ತಮ್ಮ ಏರಿಯಾದಲ್ಲಿ ನೀರು ಇರಬಹುದು, ನಮ್ಮ ಏರಿಯಾದಲ್ಲಿ ಬಂದು ನೋಡಿ. ನಮ್ಮ ಏರಿಯಾದಲ್ಲಿ ಹಾಗೆ ಯಾವುದೇ ನೀರಿಲ್ಲ.

ಶ್ರೀ ವೈ.ಎಸ್.ವಿ. ದತ್ತಾ:- ಸರ್ಕಾರದ ಪರವಾಗಿ ಶಿವಲಿಂಗೇಗೌಡರು ಒಳ್ಳೆಯ ಉತ್ತರವನ್ನು ಕೊಟ್ಟಿದ್ದಾರೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:- ಸರ್ಕಾರದ ಪರವಾಗಿ ಒಳ್ಳೆ ಉತ್ತರ.

(ಗೊಂದಲ)

ಶ್ರೀ ಕೆ.ಎಂ. ಶಿವಲಿಂಗೇಗೌಡ:- ದನಕರುಗಳೆಲ್ಲವಕ್ಕೂ ನೀರನ್ನು ನಾವು ಹೊರಗಡೆ ಕುಡಿಸುತ್ತೇವೆ. ಅದನ್ನು ನಾವು ಲೆಕ್ಕಕ್ಕೆ ತೆಗೆದುಕೊಳ್ಳುತ್ತೇವೆಯೇ? ನಾವು ದನ, ಕರು, ಬಟ್ಟೆ ಇವೆಲ್ಲವೂ ಪ್ರತಿಯೊಂದು ನಮಗೆ ಲೆಕ್ಕಕ್ಕಿಲ್ಲ. ಹಳ್ಳಿಕಡೆ ಮೊದಲು ಕಟ್ಟೆಯಲ್ಲಿ, ಕೆರೆಯಲ್ಲಿ ನೀರಿರುತ್ತಿತ್ತು.

ಶ್ರೀ ವೈ.ಎಸ್.ವಿ. ದತ್ತಾ:- ಆದರೆ ಈಗೇನಾಗಿದೆಯೆಂದರೆ ಶಿವಲಿಂಗೇಗೌಡರು ಹೇಳಿದ್ದು ಸರಿಯಾಗಿದೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:- ದತ್ತಾರವರೆ, 35 ವರ್ಷಗಳ ಹಿಂದೆ ಇದ್ದಂಥ life style ಬೇರೆ, ಈಗ ನಾನೇ ನನ್ನ ಅನುಭವವನ್ನು ಹೇಳುತ್ತೇನೆ. ನಾನು ಗದ್ದೆ ಕೆಲಸ ಮಾಡಿಕೊಂಡು ಬಂದು ಮಕಾಡೆ ಮಲಗಿಕೊಂಡರೆ ಜಿಗಣಿಯಲ್ಲಿ ನೀರು ಕುಡಿಯುತ್ತಿದ್ದೆವು. ಆಗ resistance power ಯಾವ ರೀತಿಯಿತ್ತೆಂದರೆ, ಕೆಲಸ ಮಾಡುವಾಗ ಕಾಲು ಕಿತ್ತು ಹೋದರೆ ಸೊಪ್ಪಿನ ರಸವನ್ನು ಹಿಂಡಿ ಹಾಕಿದರೆ ಗಾಯ ವಾಸಿಯಾಗುತ್ತಿತ್ತು. ಈಗ Tetvac ತೆಗೆದುಕೊಳ್ಳಬೇಕು. ಈಗ ಏನಾದರೂ ಆ ನೀರನ್ನು ಕುಡಿದರೆ ಮೊದಲು ಆಸ್ಪತ್ರೆಗೆ ಕರೆದುಕೊಂಡು ಹೋಗಿ ಡ್ರಿಪ್ ಹಾಕುತ್ತಾರೆ. ಆ ಕಾಲದ್ದೇ ಬೇರೆ ಪ್ರಶ್ನೆ. ಇವತ್ತು ಗ್ರಾಮೀಣ ಪ್ರದೇಶ ಮತ್ತು ನಗರೀಕರಣದಲ್ಲಿ ಎಲ್ಲರಿಗು ಅಷ್ಟೇ ಸಮಾನವಾದ ನೀರನ್ನು ಕೊಡುವುದಕ್ಕೆ ಮಾಡಬೇಕು.

ಉಪಾಧ್ಯಕ್ಷರು:- ಖೇಣಿಯವರೆ ಇನ್ನು ಐದು ನಿಮಿಷಗಳಲ್ಲಿ ಮುಗಿಸಿ.

ಶ್ರೀ ವೈ.ಎಸ್.ವಿ. ದತ್ತಾ:- ಮಾನ್ಯ ಉಪಾಧ್ಯಕ್ಷರೆ, ನಾನು ಏನು ಹೇಳುವುದಕ್ಕೆ ಹೋದನೆಂದರೆ ಶಿವಲಿಂಗೇಗೌಡರು ಹೇಳಿದ್ದು correct. ಆ system ಮಾಡುವಾಗ ಹಳ್ಳಿಯವರಿಗೆ 55 ಲೀಟರ್, ಪಟ್ಟಣದವರಿಗೆ 135 ಲೀಟರ್ ನೀರು ಬೇಕಾಗುತ್ತದೆಂದು ಹೇಳಬೇಕಾದರೆ ಕೆರೆ, ಕಟ್ಟೆ, ಕೊಳವೆ ಬಾವಿ ಎಲ್ಲವನ್ನೂ ಲೆಕ್ಕಕ್ಕೆ ತೆಗೆದುಕೊಂಡು ಹೇಳಲಾಗಿತ್ತು. ಆದರೆ, ಈಗ ಅವು ಯಾವುವೂ ಇಲ್ಲ. ಹಾಗಾಗಿ, ಈಗ ಏಕರೂಪ ನೀತಿ ಎನ್ನುವಂತೆ ಏಕರೂಪ ಶಿಕ್ಷಣ, ಏಕ ರೂಪ ಭಾಷೆ ರೀತಿಯಲ್ಲೇ ಏಕರೂಪ ನೀರು ಬೇಕಾಗಿದೆ. ಹಾಗಾಗಿ ಎಲ್ಲರಿಗೂ 135 ಲೀಟರ್ ಬೇಕಾಗಿದೆ.

ಶ್ರೀ ಹೆಚ್.ಕೆ. ಪಾಟೀಲ್ (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):- ಮಾನ್ಯ ಉಪಾಧ್ಯಕ್ಷರೆ, ದತ್ತಾರವರೆ ಇದು ಬಹಳ ಗಂಭೀರವಾಗಿರುವಂಥ ವಿಷಯ. ನಾನು ಉತ್ತರ ಕೊಡಬೇಕಾದ ಸಂದರ್ಭದಲ್ಲಿ ನಾನು ಹೇಳಬೇಕಾಗಿತ್ತು, ನಿಜ. ಆದರೆ ಪ್ರಶ್ನೆ ಇಷ್ಟು ತೀವ್ರ ಗಂಭೀರತೆಯಿಂದ ಇದೆ. ಆದ್ದರಿಂದ ಈಗ ನಾನು ಹೇಳಬೇಕಾಗಿರುವುದು ಅವಶ್ಯವೆಂದು ಭಾವಿಸಿಕೊಳ್ಳುತ್ತೇನೆ. ಶಿವಲಿಂಗೇಗೌಡರು ಹೇಳಿದ್ದು ನನಗೆ

ಬಹಳ ನೋವಾಯಿತು. ಶಿವಲಿಂಗೇಗೌಡರೆ, ನೀವು ಮಾತನಾಡುವಾಗ ಹೇಳಿದಿರಲ್ಲ? Yes, ಅದು ಮೇಲ್ನೋಟದ argumentಗೆ ಸರಿ, ನೀವು ಹಳ್ಳಿಯಲ್ಲಿದ್ದೇನೆ ಎಂದು ಹೇಳಿದಿರಿ, ಹಾಗಾದರೆ ನೀವು ಒಬ್ಬರೇ ಹಳ್ಳಿಯಲ್ಲಿ ಇರುತ್ತೀರೇನು? ನಿಮ್ಮ ಜೊತೆಯಲ್ಲಿ ಒಂದು ನಾಯಿ ಇರುತ್ತದೆ, ನಿಮ್ಮ ಮನೆಯಲ್ಲಿ ಒಂದು ಎಮ್ಮೆ ಇರುತ್ತದೆ, ನಿಮ್ಮ ಮನೆಯಲ್ಲಿ ಏನಿಲ್ಲವೆಂದರೂ ಒಂದು ಬೆಕ್ಕು ಆದರೂ ಇರುತ್ತದೆ. ಇವತ್ತು ಪ್ರಶ್ನೆ ಏನೆಂದರೆ, ಎಮ್ಮೆ, ಎತ್ತು, ಆಕಳ, ಇವತ್ತು ನಮ್ಮ ಊರಿನ ಪಕ್ಕಕ್ಕೆ ದನಕರುಗಳಿಗೆ ಕುಡಿಯುವುದಕ್ಕಾಗಿ ಏನು ಕೆರೆ ಇರುತ್ತಿತ್ತೋ ಆ ಕೆರೆ ಇಲ್ಲ. ನಾವು ಮೊದಲೆಲ್ಲಾ ಸಣ್ಣ ಮನೆಯಿರಲಿ, ದೊಡ್ಡ ಮನೆಯಿರಲಿ ಒಬ್ಬರು ಹೋಗಿ ಎಂಟೆಂಟು ಹತ್ತತ್ತು ಕೊಡ ತಗೊಂಡು ಬರುತ್ತಿದ್ದೆವು. ಈಗ ಅದು ಇದೆಯೇ? ಈಗ ಮಧ್ಯಮ ವರ್ಗದ ರೈತ ಸಹಿತ ನೀರಿಗಾಗಿ ಒಂದು ಜಟಕಾ ಗಾಡಿಯನ್ನು ಇಟ್ಟಿರುತ್ತಾನೆ. ಅದಕ್ಕಾಗಿ, ಆ ರೀತಿ ತಮ್ಮ ಅನಿಸಿಕೆ ಏನಿದೆ, ಇವತ್ತಿನ ಪರಿಸ್ಥಿತಿಗೆ ಅಷ್ಟು ಪ್ರಸ್ತುತವಾಗುವುದಿಲ್ಲ. ಆದರೆ ಪುಟ್ಟಣ್ಣಯ್ಯನವರು ಕೇಳುತ್ತಿದ್ದರು, 55 ಲೀಟರ್ ಏಕೆ? ಬೆಂಗಳೂರಿನವರಿಗೆ 135 ಲೀಟರ್, ಇತರೆ ಸಿಟಿಗಳಿಗೆ 100 ಲೀಟರ್ 55 ಏಕೆ? 40 ಇದ್ದದ್ದು 55 ಆಯಿತು. ಆದರೆ, ಪುಟ್ಟಣ್ಣಯ್ಯನವರೆ, ನಮ್ಮ ಸರ್ಕಾರ ಬಂದ ಮೇಲೆ ನಾವು ಮೊದಲ ಎರಡು ತಿಂಗಳೊಳಗೆ ಮಾಡಿದ ನಿರ್ಣಯವೆಂದರೆ 85 ಲೀಟರ್‌ಗೆ ಏರಿಸಿದ್ದೇವೆ. ಈಗ ಏನೆಲ್ಲಾ projects ಮಾಡುತ್ತೇವೆ, in all future projects of water there will be 85 LPCD for villages. ಇನ್ನು Government of Indiaದವರು ಅದಕ್ಕೆ ಒಪ್ಪಿಗೆ ಕೊಡುತ್ತಿಲ್ಲ. ಅವರಿಗೆ ನಾವು ಒತ್ತಡ ಹಾಕುತ್ತಿದ್ದೇವೆ. ಒತ್ತಡ ಹಾಕಿ ಒಪ್ಪಿಗೆಯನ್ನು ತರುತ್ತೇವೆ.

ಉಪಾಧ್ಯಕ್ಷರು:– ಖೇಣಿಯವರೆ, conclude ಮಾಡಿ.

ಶ್ರೀ ವೈ.ಎಸ್.ವಿ. ದತ್ತಾ:– ಶಿವಲಿಂಗೇಗೌಡರು ಕೊಟ್ಟಂಥ ಮಾಹಿತಿ planning Commission ಮಾಹಿತಿ.

ಶ್ರೀ ಹೆಚ್.ಕೆ. ಪಾಟೀಲ್:- Planning Commissionನವರ ವಾದ ಅದು. ಅದರಲ್ಲಿ ಯಾವುದೇ ಹುರುಳಿಲ್ಲ. ಅದನ್ನು ನಾವ್ಯಾರೂ ಒಪ್ಪುವುದಕ್ಕೆ ಸಾಧ್ಯವಿಲ್ಲ.

ಶ್ರೀ ವೈ.ಎಸ್.ವಿ. ದತ್ತಾ:- ಏಕೆಂದರೆ ಆ ವಾದಕ್ಕೆ ನಾವು ಉಪ್ಪು, ಸೊಪ್ಪು ಹಾಕಬಾರದು. Planning Commissionನವರು ಹಳ್ಳಿಯನ್ನು ನೋಡಿಲ್ಲ. ದನಕರು ನೋಡಿಲ್ಲ, ಗುಡಿಸಲುಗಳನ್ನು ನೋಡಿಲ್ಲ, ಹರಕು ಶರ್ಟ್, ಕೊಳಕು ಪಂಚೆಯ ಜನರನ್ನು ನೋಡಿಲ್ಲ.

ಶ್ರೀ ಕೆ.ಎಂ. ಶಿವಲಿಮಗೇಗೌಡ:- ಇವತ್ತು ಆ ಪರಿಸ್ಥಿತಿ ಇಲ್ಲ. ಇವತ್ತು ಕೆರೆ ಕಟ್ಟೆಯಲ್ಲಿ ನೀರಿಲ್ಲ. ಜಾಸ್ತಿ ಮಾಡಿರಿ, ಆ ಆಧಾರವನ್ನಿಟ್ಟುಕೊಂಡು ಅವರು ಮಾಡಿದ್ದಾರೆ. ನಾನು ಹೇಳಿದ್ದು ಸಚಿವರೆ, ಆ ರೀತಿಯಲ್ಲ, ಇವತ್ತು ಕೆರೆಯಲ್ಲಿ, ಕಟ್ಟೆಯಲ್ಲಿ, ಬಾವಿಯಲ್ಲಿ, ಹಳ್ಳದಲ್ಲಿ ನೀರಿಲ್ಲ. ಬೋರ್‌ವೆಲ್‌ನಲ್ಲಿ ಮೊದಲೇ ನೀರಿಲ್ಲ. ಸ್ವಲ್ಪ ಹೆಚ್ಚಿಸಿ, ಟೌನ್‌ನವರಿಗೆ ಕೊಡುವುದಕ್ಕಿಂತ ಇನ್ನೂ ಸ್ವಲ್ಪ ಜಾಸ್ತಿ ಹೆಚ್ಚಿಸಿ. ಆ ಅರ್ಥದಲ್ಲಿ ನಾನು ಹೇಳಿದ್ದು.

(ಗೊಂದಲ)

ಉಪಾಧ್ಯಕ್ಷರು:- ಖೇಣಿಯವರೆ, conclude ಮಾಡಿ.

ಶ್ರೀ ಅಶೋಕ್ ಖೇಣಿ:- ನನಗೆ ಎರಡು ನಿಮಿಷಗಳ ಕಾಲಾವಕಾಶ ಕೊಡಿ.

ಶ್ರೀ ಎಂ.ಟಿ. ಕೃಷ್ಣಪ್ಪ:- 1 ರೂಪಾಯಿ ಅಕ್ಕಿ ಕೊಡುತ್ತಿದ್ದಾರಲ್ಲ, ಅದಕ್ಕೂ ನೀರು ಬೇಕಾಗಿಲ್ಲ ಅನ್ನಿಸುತ್ತದೆ.

ಉಪಾಧ್ಯಕ್ಷರು:- ಕೃಷ್ಣಪ್ಪನವರೆ, ತಾವು ಕುಳಿತುಕೊಳ್ಳಿ.

SRI ASHOK KHENY:- I want to just mention about the AG's report on RDPR. ಏನು ಹೇಳುತ್ತಾರೆಂದರೆ ನಮ್ಮ ಊರಿನಲ್ಲಿ ನೀರು ಇದೆಯಲ್ಲ, ಈಗ technology ಬಂದಿದೆ, ನಾನು ಹೆಚ್.ಕೆ. ಪಾಟೀಲ್‌ರವರಿಗೆ ಹೇಳುತ್ತಿದ್ದೇನೆ. By using solar power, you could give clean water with

no fluoride and no maintenance cost. OK. You don't need reverse osmosis now which I am submitting the papers. So this would be the best solution for our villages, because it automatically generates water with no maintenance, ಅದನ್ನು ನಡೆಸಲು ಯಾರೂ ಅಲ್ಲಿ ಬೇಕಾಗುವುದಿಲ್ಲ. ಅಂಥ technology ಬಂದಿದೆ. I will be submitting that. But more important ನಾನು ಎ.ಜಿ. ರವರ ರಿಪೋರ್ಟ್ ಓದಿ. ಇವರು ರಿಪೋರ್ಟ್‌ನ್ನು ನೋಡಿ ಎಲ್ಲವನ್ನೂ ಓದಿದ್ದೇನೆ. ನಿನ್ನೆ ರಾತ್ರಿ 4 ಗಂಟೆಯವರೆಗೆ ಓದುತ್ತಿದ್ದೆನು. "The resources of Panchayath Raj institution has shown a study and health growth. This large amount of increase in Central Finance Commission grants as against ₹ 177 crores in 2007-08. It has gone upto ₹ 769 crores in 2011-12. A 400% rise. In addition, the support from the state sector has also increased from ₹ 9,000 crores to ₹ 13,000 crores. Despite the healthy resources position, there is significant improvement. But, there is no significant improvement at the field level. ಏಕೆ? Because, there is no accountability, there is no check and balance. ಏನಾಗುತ್ತದೆಯೆಂದರೆ, one of the problems with this department, is that they are spending lot of money, but they are not creating any assets. For example the capital expenditure in social services is ₹ 1.37 crores while the revenue expenditure is ₹ 4,347 crores. We need to create infrastructure that would keep generating future jobs in the villages. ಅದನ್ನು ಬಿಟ್ಟು we have created infrastructure with the capital expenditure of ₹ 1.37 crores while we have spent ₹ 4,347 crores, doled out for programmes and schemes. Schemeಗಳ ಬಗ್ಗೆ ನೀವು ಹೇಳುತ್ತಿದ್ದೀರಲ್ಲ, ನಾನು one year back join ಆದೆ, now, it is nearly a year, and I have graded myself, I have given myself "C minus" for the work which I have done. I am very ashamed of the

performance I have done. I am used to do all my work and trying to do the best. But, as an MLA, I consider my performance as "C minus" hardly, barely passing. I am unable to perform, because I am not getting the type of information which is required to make the work. For example, they told me that there are 240 schemes for which the funds come from the central and state to the villages. I have been able to find it after a lot of search. This is the work I have done. Exactly I have come up with 67 schemes which are given to me and still in spite of about 114 kms. of village connectivity road and 47 km. of village roads. I think it is pretty high considering that this Government has give money though they call it, what do you call "unspent provision". But, actual is money has not been given to us to spend the money like it was done in last five years.

ಉಪಾಧ್ಯಕ್ಷರು:– Conclude ಮಾಡಿ.

SRI ASHOK KHENY:- I think, let us compare with the pattern of expenditure with the central and the state schemes, social service, capital expenditure ₹ 164 crores as against Revenue expenditure ₹ 329 crores. That means they are creating larger capital expenses compared to us. I think it is required to create capital expenses at the villages and also create a maintenance budget for the villages what we spent. Maintenance budget zero, nil ಇದೆ. They said that the Panchayath can collect and do it. Panchayath is incapable of doing it. And the multiple and duplicity of the schemes, for example, I found that for one borewell there are 6 different agencies which have done the work. Same borewell. Because, there are so many schemes, I do't think anybody can tell us. Let any of the officers sitting here tell

me how many schemes are there. It is impossible to tell us, because I think we have to rationalize the schemes and put them together, so it could be manageable and controlled. There is a philosophy when this came when NASA sending rockets to the moon that the number of path should be less. The lesser the number of path, the failure is less. Similarly, if the number of schemes are put together, the failure or corruption would be less. We will be able to deliver to the people. ಅದು ನನ್ನ request ಇದೆ, I wanted to talk a lot more, ಈಗ time ಇಲ್ಲ. ನಂತರ ಮಾತನಾಡುತ್ತೇನೆ.

ಉಪಾಧ್ಯಕ್ಷರು:- ಶ್ರೀ ಬಿ.ಆರ್. ಪಾಟೀಲ್‌ರವರೆ, 15 ನಿಮಿಷಗಳಲ್ಲಿ ಮಾತನಾಡಿ ಮುಗಿಸಿ.

ಡಾ|| ಉಮೇಶ್ ಜಿ. ಜಾಧವ್:- ಮಾನ್ಯ ಉಪಾಧ್ಯಕ್ಷರೆ, I want to react to Kheny's statement. Sir, you have got "C minus". People have a lot of expectations from you. With the lot of expectations they have voted and made you MLA there. You make that constituency as an ideal Constituency. You spent some money on that and show, we will also see one ideal constituency as Kheny's constituency.

SRI ASHOK KHENY:- The system has to be foolproof and fail-proof. I am trying to create a system that runs on its own just like I sit in my house, my company runs on its own. I am trying to create a system in my constituency where it is able to run on its own and when it can run on its own only, people are motivated to help themselves and create a better future for their children.

ಉಪಾಧ್ಯಕ್ಷರು:- ಅದನ್ನು ಮಾಡಿ ಎಂದೇ ಅವರು ನಿಮಗೆ ಸಲಹೆ ಕೊಟ್ಟಿರುವುದು.

ಶ್ರೀ ಬಿ.ಆರ್. ಪಾಟೀಲ್:- ನಿಮ್ಮ ಕಡೆಯಿಂದ expectation ಜಾಸ್ತಿ ಇದೆ.

ಶ್ರೀ ಎಸ್.ಆರ್. ವಿಶ್ವನಾಥ್:- ಅವರು ಇಲ್ಲಿಯೇ ಏನನ್ನೂ ಮಾಡಿಲ್ಲ. ಅವರು ಗುಲ್ಬರ್ಗಾದ್ದು ಹೇಳುತ್ತಾರೆ. ಇವರೆಲ್ಲಾ ವಸ್ತು ಪ್ರದರ್ಶನ ಇಡುವುದು, ಮಾತನಾಡುವುದರಲ್ಲೇ ಇದ್ದಾರೆ ರೈತರ ಜಮೀನಿಗೆ application ಹಾಕಿರುವುದೇನು? ಒಂದು ಶಾಲೆಯನ್ನೂ ಕಟ್ಟಿಸಿಲ್ಲ, ಒಂದು ರಸ್ತೆಯನ್ನೂ ಮಾಡಿಲ್ಲ. ಸುಮ್ಮನೆ ಹೇಳುತ್ತಿದ್ದಾರೆ.

SRI ASHOK KHENY:- Sir, can I tell you something? MLA ರವರು ಏಕೆ ಮಾತನಾಡುತ್ತಿದ್ದಾರೆಂದರೆ, ಅವರ Members want to travel free on our roads, we refuse to do it.

ಶ್ರೀ ಎಸ್.ಆರ್. ವಿಶ್ವನಾಥ್:- ಈಗ ಈ ವಿಷಯ ಬಂದಿರುವುದಕ್ಕಾಗಿ ಮಾತನಾಡುತ್ತೇನೆ. ಇವರು ಎಷ್ಟು (ಮಾನ್ಯ ಸಭಾಧ್ಯಕ್ಷರ ಆದೇಶದ ಮೇರೆಗೆ ಈ ಪದಗಳನ್ನು ಕಡತದಿಂದ ತೆಗೆದು ಹಾಕಲಾಗಿದೆ.) ಮಾಡುತ್ತಾರೆಂದರೆ,

ಉಪಾಧ್ಯಕ್ಷರು:- ಹಾಗೆಲ್ಲಾ ಮಾತನಾಡಬಾರದು. This is not the way.

ಶ್ರೀ ಎಸ್.ಆರ್. ವಿಶ್ವನಾಥ್:- ನಾನು ಹೇಳುವುದು Pass ಆಗುವವರಲ್ಲಿ ದುಡ್ಡು ಕೊಟ್ಟಿದ್ದಾರೆ. ಇಂದು ನಾನೂ ಕೂಡಾ ನೈಸ್ ಟೋಲ್‌ನಲ್ಲಿ ದುಡ್ಡು ಕೊಟ್ಟೇ ಹೋಗುತ್ತಿರುವುದು. ಇವರು ಒಂದು ಮಾತನ್ನು ಹೇಳಿದರು. ನನ್ನ ಕ್ಷೇತ್ರದ ಬೆಂಗಳೂರು ಡೇರಿ ಅಧ್ಯಕ್ಷರು, ಅಲ್ಲಿ pass ಆಗಿದ್ದಾರೆ. ಗಲಾಟೆ, ಹೊಡೆದಾಟವಾಗಿದೆ. ಇವರು ನಮ್ಮ ಕಾರ್ಯಕರ್ತರ ಮೇಲೆ ಡಕಾಯಿತಿ ಕೇಸ್ ಹಾಕಿಸಿದ್ದಾರೆ. ನಾನು ಇವರಿಗೆ ಫೋನ್ ಮಾಡಿ, ಸರ್, ಗೊತ್ತಿಲ್ಲದೆ ಏನೋ ತಪ್ಪಾಗಿದೆ, ದಯವಿಟ್ಟು ಕ್ಷಮಿಸಬೇಕೆಂದರೆ ಬಹಳ ಕೆಟ್ಟದಾಗಿ ಮಾತನಾಡಿ ಅವರನ್ನು ಜೈಲಿಗೆ ಹಾಕಿಸುತ್ತೇನೆಂದರು. ಕೊನೆಗೆ Non-bailable offence ಮಾಡಿದರು. ಅವರು ಈ ರೋಡಿನಿಂದ ನನಗೆ ವರ್ಷಕ್ಕೆ ₹ 125 ಕೋಟಿ ಲಾಸ್ ಆಗುತ್ತಿದೆ ಎಂದರು. ಬಿಟ್ಟು ಬಿಡಲಿ. ನನ್ನ ಕ್ಷೇತ್ರದಲ್ಲಿ

6 ಲಕ್ಷ ರೂ. ಒಂದು ಎಕರೆಗೆ ರೈತರಿಗೆ ಇವರು ಕೊಟ್ಟಿರುವುದು. ಇವತ್ತಿನವರೆಗೆ ಒಂದು ಸೈಟ್ ಕೊಟ್ಟಿಲ್ಲ. ಮೊನ್ನೆ ಸೈಟ್ ಮಾಡಿಸಿದರು. ಇವರು ದುಡ್ಡು ಕೊಟ್ಟು ಮಾಡಿಸಿರುವುದು. ಅವರ ದುಡ್ಡು ಬಳಸಿರುವುದು ಇವರು. ಅರ್ಥವಾಯಿತೇನು? ಮೊನ್ನೆ ನಡೆದ ನೈಸ್ exhibition ನಲ್ಲಿ 50 ರೂ. ಕೊಟ್ಟಿದ್ದಾರೆ. ಇವರಿಗೆ ಸರ್ಕಾರ ಅನುಮತಿ ಕೊಟ್ಟಿದೆಯೆ? ಲೂಟಿ ಹೊಡೆಯುತ್ತಿದ್ದಾರೆ. ಕತೆ ಹೇಳುತ್ತಾರೆ.

ಶ್ರೀ ಅಶೋಕ್ ಖೇಣಿ:- ಮಾನ್ಯ ಅಧ್ಯಕ್ಷರೆ, ಇವರು ಸುಳ್ಳು ಹೇಳುತ್ತಿದ್ದಾರೆ. I have video tape of his people coming there and beating my employees.

ಶ್ರೀ ಎಸ್.ಆರ್. ವಿಶ್ವನಾಥ್:- ಒಂದು ಹುಟ್ಟಿದ ಹಬ್ಬಕ್ಕೆ 20 ಕೋಟಿ ರೂ. ಖರ್ಚು ಮಾಡುತ್ತಾರೆ. ಇನ್ಯಾರಿಗೋ 20 ಕೋಟಿ ರೂ.ಗೆ ಮನೆ ಕೊಡಿಸುತ್ತಾರೆ. ನಮ್ಮ ಕ್ಷೇತ್ರದಲ್ಲಿ ಒಂದೆರಡು ಸ್ಕೂಲ್ ಕಟ್ಟಿಸುವುದಕ್ಕೆ ಆಗುವುದಿಲ್ಲವೇನು? ಕತೆ ಹೇಳುವುದು ಬಹಳ ದೊಡ್ಡದಾಗಿ ಹೇಳುತ್ತಾರೆ. ಮಾಡಬೇಕಲ್ಲಿ.

SRI ASHOK KHENY:- The public knows, who is showing (ಮಾನ್ಯ ಸಭಾಧ್ಯಕ್ಷರ ಆದೇಶದ ಮೇರೆಗೆ ಪದವನ್ನು ಕಡತದಿಂದ ತೆಗೆದು ಹಾಕಲಾಗಿದೆ.) and who is breaking law.

ಶ್ರೀ ಎಸ್.ಆರ್. ವಿಶ್ವನಾಥ್:- ನಾನು ಟೋಲ್ ನಲ್ಲಿ ದುಡ್ಡು ಕೊಟ್ಟು ಹೋಗುತ್ತೇನೆ. ಇವರು ಎಷ್ಟು ದೊಡ್ಡ ಮನುಷ್ಯರು ಎಂದರೆ, ದೇವೇಗೌಡರನ್ನು ಈ ರೋಡಿನಲ್ಲಿ ಬಿಡುವುದಿಲ್ಲ, ಇನ್ನೊಬ್ಬನನ್ನೂ ಬಿಡುವುದಿಲ್ಲ. ಅವರ ಹತ್ತಿರವೂ ಟೋಲ್ ವಸೂಲಿ ಮಾಡುತ್ತೇನೆ. ಎಂದು ದೊಡ್ಡ ಮಾತನ್ನು ಮಾತನಾಡಿದರು ಇವರು. ಅವನು ಏನೇನು ಹೇಳಿದರು ಅದೆಲ್ಲವನ್ನೂ ಹೇಳಿದರೆ ಬೇರೆ ಕತೆ ಆಗುತ್ತದೆ. ಹೇಳಿದ್ದಾರೆ. ಬೇಕಾದರೆ ದೇವರ ಮೇಲೆ ಪ್ರಮಾಣ ಮಾಡಿ ಹೇಳುತ್ತೇನೆ. ಮಾಜಿ ಪ್ರಧಾನಿಯವರ ಹೆಸರು ಎತ್ತಿದರು ಇವರು.

ಶ್ರಿ ಕೆ.ಎಂ. ಶಿವಲಿಂಗೇಗೌಡ:- ದೇವೇಗೌಡರನ್ನು ಏಕೆ ಬಿಡುವುದಿಲ್ಲ? ಈ ದೇಶದ ಸ್ವತ್ತದು. ನಿಮ್ಮ ಮನೆಯ ಆಸ್ತಿ ಅಲ್ಲ.

ಶ್ರೀ ಎಸ್.ಆರ್. ವಿಶ್ವನಾಥ್:- ಅನಿತಾ ಕುಮಾರಸ್ವಾಮಿ ಬಂದರೂ ಅವರ ಹತ್ತಿರ ಟೋಲ್ ವಸೂಲಿ ಮಾಡುತ್ತೇನೆ ಎಂದರು. ಇವರ ಟೋಲ್ ತೆಗೆದುಕೊಂಡು ನಮಗೇನು ಆಗಬೇಕು? ವರ್ಷಕ್ಕೆ ಬೇಕಾದರೆ ಟೋಲ್ ಕೊಟ್ಟು ಬಿಡುತ್ತೇವೆ.

(ಗೊಂದಲ)

ಶ್ರೀ ಎಸ್.ಆರ್. ವಿಶ್ವನಾಥ್:- ಇನ್ನೊಂದು ಮಾತನ್ನು ಹೇಳಿದರು. ನಾನು ಹೇಳಬಾರದಿತ್ತು, ಆದರೆ ಹೇಳುತ್ತೇನೆ. (ಮಾನ್ಯ ಸಭಾಧ್ಯಕ್ಷರ ಆದೇಶದ ಮೇರೆಗೆ ಈ ಪದಗಳನ್ನು ಕಡತದಿಂದ ತೆಗೆದು ಹಾಕಲಾಗಿದೆ.) ಒಬ್ಬರು ಸದಸ್ಯರಾಗಿ ಎಲ್ಲರೂ ಸರಿಯಿಲ್ಲವಂತೆ, ವಿಧಾನಸೌಧ ಸರಿಯಿಲ್ಲವಂತೆ. (ಮಾನ್ಯ ಸಭಾಧ್ಯಕ್ಷರ ಆದೇಶದ ಮೇರೆಗೆ ಈ ಪದಗಳನ್ನು ಕಡತದಿಂದ ತೆಗೆದು ಹಾಕಲಾಗಿದೆ.) ಎಂದ ಮೇಲೆ enquiry ಮಾಡಬೇಕು. ಅವರು ಎಂ.ಎಲ್.ಎ. ಆಗಿ ಇನ್ನೂ ಒಂದು ವರ್ಷವೂ ಆಗಿಲ್ಲ ಗ್ರಹಚಾರ.

ಶ್ರೀ ಕೆಸ್.ಎಸ್. ಪುಟ್ಟಣ್ಣಯ್ಯ:- ಮಾನ್ಯ ಅಧ್ಯಕ್ಷರೆ, ವಿಚಾರ ಬೇರೆ ಬೇರೆ ಕಡೆಗೆ ಹೋಗುತ್ತಿದೆ. ದಯಮಾಡಿ ಅವಕಾಶ ಕೊಡಬೇಡಿ. ಇದು ಚರ್ಚೆ ಮಾಡುವ ವೇದಿಕೆ ಅಲ್ಲ.

ಉಪಾಧ್ಯಕ್ಷರು:- ಇದು ಚರ್ಚೆ ಮಾಡುವ ವಿಷಯವಲ್ಲ. ವಿಶ್ವನಾಥ್ ರವರೆ, ನೀವು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಡಿ.ಕೆ. ಶಿವಕುಮಾರ್:- ಮಾನ್ಯ ಅಧ್ಯಕ್ಷರೆ, ಈಗ Rural Development ಬಗ್ಗೆ ಚರ್ಚೆ ನಡೆಯುತ್ತಿದೆ.

ಉಪಾಧ್ಯಕ್ಷರು:- ಹೌದು, ವಿಷಯಾಂತರ ಆಗಬಾರದು.

ಶ್ರೀ ಡಿ.ಕೆ. ಶಿವಕುಮಾರ್:– ಅವರದೇ ಆದ ರೀತಿಯಲ್ಲಿ ಸಲಹೆ ಕೊಡುತ್ತಿದ್ದಾರೆ. ನಾನು ವಿಶ್ವನಾಥ್‌ರವರಿಗೆ ಹೇಳುವುದು ಅವರಿಗೆ ಬಹಳ ಹಿಂದಿನ experience ಇದೆ. ಏನಾದರೂ ಇದ್ದರೆ ಒಂದು ನೋಟಿಸ್ ಕೊಟ್ಟು ಮತ್ತೊಂದು ಮಾಡಿ, let us discuss the issue. ನಾನಾದರೂ ದೊಡ್ಡವರಲ್ಲ, ಇವರಾದರೂ ದೊಡ್ಡವರಲ್ಲ. ಅದಕ್ಕೆ ಒಂದು ಮಿತಿ ಇರಲಿ. ಯಾವುದೋ ಒಂದು discussion ಮಧ್ಯೆ deviate ಮಾಡಿ ನೀವು ಬೇರೆ personal issues ತೆಗೆದುಕೊಳ್ಳುವುದು ಬೇಡ. ನೀವು ಹೇಳುವುದೆಲ್ಲಾ ನಿಜ ಇರಬಹುದು. let us come out on discussion.

ಶ್ರೀ ಎಸ್.ಆರ್. ವಿಶ್ವನಾಥ್:– ನಾನು ಅವರ personal ಬಗ್ಗೆ ಮಾತನಾಡಲೇ ಇಲ್ಲ. ಬೇರೆ ಕ್ಷೇತ್ರದಲ್ಲಿಯೂ ಕೂಡಾ ತಾವು development ಗೆ ಅವಕಾಶ ಕೊಡಿ ಎಂದು ನಮ್ಮ ಒಬ್ಬ ಗೌರವಾನ್ವಿತ ಸದಸ್ಯರು ಹೇಳಿದರು. ನನ್ನ ಕ್ಷೇತ್ರದಲ್ಲಿ ರಸ್ತೆ ಆಗಿರುವುದು. ದಯಮಾಡಿ ನನಗೂ ಸ್ವಲ್ಪ ಕೊಡಿ. ನೀವು ಏನೂ ಮಾಡಿಲ್ಲ ಅಂತ ಹೇಳಿದ್ದು. ಇವರು ಏನು ಹೇಳಿದರು ಅದಕ್ಕೆ, (ಮಾನ್ಯ ಸಭಾಧ್ಯಕ್ಷರ ಆದೇಶದ ಮೇರೆಗೆ ಈ ಪದಗಳನ್ನು ಕಡತದಿಂದ ತೆಗೆದು ಹಾಕಲಾಗಿದೆ.) ಎಂದು ಹೇಳುತ್ತೀರಲ್ಲ ನೀವು.

ಉಪಾಧ್ಯಕ್ಷರು:– ಈಗ ಅದು ಬೇಡ ನಿಲ್ಲಿಸಿ.

ಶ್ರೀ ಎಸ್.ಆರ್. ವಿಶ್ವನಾಥ್:– ನೀವು (ಮಾನ್ಯ ಸಭಾಧ್ಯಕ್ಷರ ಆದೇಶದ ಮೇರೆಗೆ ಈ ಪದಗಳನ್ನು ಕಡತದಿಂದ ತೆಗೆದು ಹಾಕಲಾಗಿದೆ.) ಮಾಡಿರುವುದು. ರೈತರನ್ನು ಲೂಟಿ ಮಾಡಿರುವವರು ನೀವು. ಬರೀ 6 ಲಕ್ಷ ರೂ. Compensation ಕೊಟ್ಟಿದ್ದೀರಿ ನೀವು.

ಅಶೋಕ್ ಖೇಣಿ:– (ಗೊಂದಲ) . . . . People, they have beaten up. They were drunken.

ಶ್ರೀ ಎಸ್.ಆರ್. ವಿಶ್ವನಾಥ್:– ಯಾರೂ drunken ಇರಲಿಲ್ಲ. ನಿಮ್ಮವರು ಕುಡುಕರು. ನಿಮ್ಮವರು ಗೂಂಡಾಗಳು ಇರುವುದು, ಟೋಲ್‌ನಲ್ಲಿ

ಗೂಂಡಾಗಳನ್ನು ಇಟ್ಟಿರುವುದು. ನಮಗೆ ಹೇಳುತ್ತೀರಾ ನೀವು. ರೈತರನ್ನು ಲೂಟಿ ಮಾಡುತ್ತಿದ್ದೀರಿ.

ಶ್ರೀ ಅಶೋಕ್ ಖೇಣಿ:- ಎಲ್ಲರಿಗೂ ಗೊತ್ತಿದೆ.

ಶ್ರೀ ಬಿ.ಆರ್. ಪಾಟೀಲ್ (ಆಳಂದ):- ಮಾನ್ಯ ಅಧ್ಯಕ್ಷರೆ, ಪಂಚಾಯಿತಿ ರಾಜ್ ಮತ್ತು ಗ್ರಾಮೀಣಾಭಿವೃದ್ಧಿ ಇಲಾಖೆಯ ಮೇಲೆ ಚರ್ಚೆಗೆ ಅವಕಾಶವನ್ನು ಕೊಟ್ಟಿದ್ದೀರಿ. ಅದಕ್ಕಾಗಿ ತಮಗೆ ಅಭಿನಂದಿಸುತ್ತೇನೆ.

(ಈ ಹಂತದಲ್ಲಿ ಮಾನ್ಯ ಅಧ್ಯಕ್ಷರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು.)

ಸನ್ಮಾನ್ಯ ಅಧ್ಯಕ್ಷರೆ, ಇಂದು ವಿಕೇಂದ್ರೀಕರಣ ಎನ್ನುವುದು ಒಂದು ಕಾರ್ಯಕ್ರಮ ಅಲ್ಲ. ಅದೊಂದು ಸಿದ್ಧಾಂತ. ಈ ವಿಕೇಂದ್ರೀಕರಣದ ಅರ್ಥದ ಹಿನ್ನೆಲೆಯಲ್ಲಿ ಒಂದು ವಿಚಾರ ಇದೆ.

ಶ್ರೀ ಕೆ.ಆರ್. ರಮೇಶ್ ಕುಮಾರ್:- ಮಾನ್ಯ ಅಧ್ಯಕ್ಷರೆ, ವಿಕೇಂದ್ರೀಕರಣ ನಂತರ ಇರಲಿ. ಈಗ ಇಷ್ಟು ಹೊತ್ತು ನಡೆದದ್ದು proceedings ಗೆ ಹೋಗಬೇಕೇನು? ನೀವು ಹೇಳಿ. Your are a senior man. ಅದನ್ನು ಹೇಳಿ. ನಾನು ಹೇಳಿದರೆ, ಇವರೇ ಹೇಳುತ್ತಾರೆ, ಮಾತನಾಡುತ್ತಾರೆಂದು ಹೇಳುತ್ತಾರೆ,

ಶ್ರೀ ಆರ್.ವಿ. ದೇಶಪಾಂಡೆ (ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು):- ನಾನು ಹೇಳಿದೆನಲ್ಲ? ಆ proceedings ನಲ್ಲಿ (ಮಾನ್ಯ ಸಭಾಧ್ಯಕ್ಷರ ಆದೇಶದ ಮೇರೆಗೆ ಈ ಪದಗಳನ್ನು ಕಡತದಿಂದ ತೆಗೆದು ಹಾಕಲಾಗಿದೆ.) ಎಂಬ ಶಬ್ದಗಳನ್ನು ತೆಗೆಯಿರಿ ಎಂದು ಹೇಳಿದೆನಲ್ಲ? ಡೆಪ್ಯೂಟಿ ಸ್ಪೀಕರ್ ಅವರು ಇದ್ದಾಗ ನಾನು ಹೇಳಿದೆ.

ಶ್ರೀ ಬಿ.ಆರ್. ಪಾಟೀಲ್:- ಮಾನ್ಯ ಅಧ್ಯಕ್ಷರೆ, ಮಾನ್ಯ ದೇಶಪಾಂಡೆ ಸಾಹೇಬರು ಹೇಳುವುದು ಬಹಳ ಮುಖ್ಯ. ತಾವು ಬರುವುದಕ್ಕೆ ಮೊದಲು ಕೆಲವು ವೈಯಕ್ತಿಕ ವಿಷಯಗಳು ಪ್ರಸ್ತಾಪವಾದುವು. ಅವುಗಳನ್ನು ಕಡತದಿಂದ ತೆಗೆಸಬೇಕೆಂದು ಅವರು ಹೇಳುತ್ತಿದ್ದಾರೆ.

ಅಧ್ಯಕ್ಷರು:- ಆ ಶಬ್ದಗಳನ್ನು ಕಡತದಿಂದ ತೆಗೆಯಿರಿ.

ಶ್ರೀ ಬಿ.ಆರ್. ಪಾಟೀಲ್:- ಮಾನ್ಯ ಅಧ್ಯಕ್ಷರೆ, ನಮ್ಮ ದೇಶ ಸ್ವತಂತ್ರವಾದ ಮೇಲೆ ಮಹಾತ್ಮಗಾಂಧಿಯವರು ಕಂಡಂತಹ ಒಂದು ಕನಸಿನ ಭಾರತ ಈ ದೇಶದಲ್ಲಿ ಗ್ರಾಮೀಣಾಭಿವೃದ್ಧಿಯಾಗಬೇಕು, ಜನತೆಗೆ ಗ್ರಾಮ ಸ್ವರಾಜ್ಯದ ಸ್ವಾತಂತ್ರ್ಯ ಸಿಗಬೇಕು. ಅಲ್ಲಿ ಸಮಾನತೆ, ಸ್ವಾಭಿಮಾನದ ಜೀವನ ಅವರಿಗೆ ಇರಬೇಕು. ಇಂತಹ ಒಂದು ಸುಂದರವಾದ ದೇಶವನ್ನು ಕಟ್ಟಬೇಕೆಂಬ ಉದ್ದೇಶದಿಂದ ಆ ಗಾಂಧೀಜಿಯವರ ಕಲ್ಪನೆಯ ಹಿನ್ನೆಲೆಯಲ್ಲಿ ಈ ವಿಕೇಂದ್ರೀಕರಣದ ವ್ಯವಸ್ಥೆಯಲ್ಲಿ ಇಂದು ನಾವು ಹೊರಟ್ಟಿದ್ದೇವೆ. ವಿಕೆಂದ್ರೀಕರಣ ಇದನ್ನು ಡಾ|| ಲೋಹಿಯಾ ಅವರು ಕೂಡಾ ಚೌಕಂಬಾ ಎಂಬ ಸಿದ್ಧಾಂತದ ಮೇಲೆ ಈ ವ್ಯವಸ್ಥೆಗೆ ಒಂದು ದೊಡ್ಡ ಸಿದ್ಧಾಂತವನ್ನು ಕೊಟ್ಟರು. ಆಮೇಲೆ ಅಶೋಕ್ ಮೆಹತಾ ರವರು ಈ ವಿಕೇಂದ್ರೀಕರಣದ ಪ್ರಜಾಪ್ರಭುತ್ವ ಎನ್ನುವ ಹೊಸ ಕಲ್ಪನೆಯನ್ನು ಕೊಟ್ಟರು. Democratic Decentralization. ಇಂತಹ ಒಂದು ಸಮಗ್ರವಾದ ಕಲ್ಪನೆಯನ್ನು ಇಟ್ಟುಕೊಂಡು ಆ ಒಂದು ದಾರಿಯಲ್ಲಿ ಇಂದು ನಾವು ಸಾಗುತ್ತಿದ್ದೇವೆ. ಅನೇಕ ಸರ್ಕಾರಗಳು ಇದರ ಬಗ್ಗೆ ಸಾಕಷ್ಟು ಪ್ರಯತ್ನಗಳನ್ನು ಮಾಡಿದ್ದಾವೆ. ದಿವಂಗತ ರಾಜೀವ್ ಗಾಂಧಿಯವರು ಪ್ರಧಾನಿಗಳಾಗಿದ್ದಾಗ ಸಂವಿಧಾನಕ್ಕೆ ತಿದ್ದುಪಡಿಯನ್ನು ತಂದು ಇಡೀ ದೇಶದಲ್ಲಿ ಅದು compulsory ಆಗಿ ಎಲ್ಲಾ ಕಡೆ ವಿಕೇಂದ್ರೀಕರಣ ವ್ಯವಸ್ಥೆ ಬರಬೇಕೆಂಬ ಉದ್ದೇಶದಿಂದ ತಿದ್ದುಪಡಿಯನ್ನು ತಂದ ನಂತರ ಇಂದು ಎಲ್ಲಾ ಕಡೆ ವಿಕೇಂದ್ರೀಕರಣ ವ್ಯವಸ್ಥೆಯನ್ನು ನಾವು ಕಾರ್ಯಗತ ಮಾಡುತ್ತಿದ್ದೇವೆ. ಯಾವ ಪಂಚಾಯಿತಿಯ ಸಬಲೀಕರಣದ ಹಿನ್ನೆಲೆಯಲ್ಲಿ ನಾವು ಸಾಕಷ್ಟು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಈಗ ಸನ್ಮಾನ್ಯ ಖೇಣಿಯವರು ಮಾತನಾಡುತ್ತಾ, ಒಂದು ವಿಷಯವನ್ನು ಪ್ರಸ್ತಾಪ ಮಾಡಿದರು. ನಾನೂ ಕೂಡಾ ಈ ವಾರ್ಷಿಕ ವರದಿ ಮತ್ತು ನಿರ್ವಹಣಾ ಮುಂಗಡ ಪತ್ರದಲ್ಲಿ ನೋಡಿದಾಗ ಎಷ್ಟು ಕಾರ್ಯಕ್ರಮಗಳಿವೆ ಎಂದರೆ; ಇದರಲ್ಲಿ ಬಹಳಷ್ಟು ಗೊಂದಲಗಳಿವೆ. ನಾನೂ ಕೂಡಾ ಕೆ.ಪಿ.ಡಿ. ಸಭೆಗಳಲ್ಲಿ ಬೇರೆ ಬೇರೆ ಇಲಾಖೆಯ ಅಧಿಕಾರಿಗಳನ್ನು ಕೇಳಿದಾಗ, ಈ ಕಾರ್ಯಕ್ರಮಗಳ ಬಗ್ಗೆ ಸ್ಪಷ್ಟವಾದ ಮಾಹಿತಿ ಯಾರಿಗೂ ಇಲ್ಲ ಮಾನ್ಯ ಸಚಿವರೆ. ಈ

ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡುವಂತಹ ಅಧಿಕಾರಿಗಳಿಗೇ ಈ ಕಾರ್ಯಕ್ರಮಗಳು ಏನೇನು ಎಂಬುದು ಯಾರಿಗೂ ಗೊತ್ತಿಲ್ಲ. ಅಷ್ಟೊಂದು ಕಾರ್ಯಕ್ರಮಗಳು ಇಂದು ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ ತಾವು ಕೊಟ್ಟಿದ್ದೀರಿ. ಬಂದಿವೆ, ನಾವು ಸ್ವಾಗತ ಮಾಡೋಣ. ಆದರೆ, ಕಾರ್ಯಕ್ರಮಗಳ ಉದ್ದೇಶ ಹೆಚ್ಚು ಕಡಿಮೆ ಒಂದೇ ಇರುತ್ತದೆ. ಬೇರೆ ಬೇರೆ head ಗಳಲ್ಲಿ ದುಡ್ಡು ಕೊಟ್ಟು ಬೇರೆ ಬೇರೆ ಪ್ರಗತಿಗಳನ್ನು ಮಾಡುವುದಕ್ಕೆ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೀರಿ. ಆದರೆ ಮೂಲಭೂತ ವಾದಂತಹ ಸಮಸ್ಯೆಗಳೇನಿವೆ, ಅವುಗಳಿಗೆ ಹೆಚ್ಚಿನ ಆದ್ಯತೆಯನ್ನು ಕೊಡಲು ಆಗಿಲ್ಲ. ಈ ಒಂದು ವಿಚಾರವನ್ನು ಇಟ್ಟುಕೊಂಡು ಗ್ರಾಮೀಣಾಭಿವೃದ್ಧಿ ಮಾಡಲು ಹೊರಡಬೇಕಾಗುತ್ತದೆ ಮಹಾತ್ಮ ಗಾಂಧೀಜಿಯವರು ಒಂದು ಮಾತನ್ನು ಹೇಳಿದ್ದಾರೆ. ಪಟ್ಟಣ ಮತ್ತು ಹಳ್ಳಿಗಳ ನಡುವೆ ಬಹಳಷ್ಟು ಕಂದಕರ ಇರಬಾರದು. ಇವತ್ತು ಏನಾಗಿದೆ, ಒಂದು ದೊಡ್ಡ ಕಂದರ ನಿರ್ಮಾಣವಾಗಿವೆ. ಪಟ್ಟಣಗಳು ದೊಡ್ಡ ಪ್ರಮಾಣದಲ್ಲಿ ಬೆಳೆಯುತ್ತಿವೆ, ಹಳ್ಳಿಗಳು ದಿನೇ ದಿನೇ ಸೊರಗುತ್ತಿವೆ. ಇದು ಈ ದೇಶಕ್ಕೆ ಒಳ್ಳೆಯ ಲಕ್ಷಣವಲ್ಲ. ಪಟ್ಟಣಗಳು ಎಷ್ಟು ಸಮೃದ್ಧವಾಗಿ ಬೆಳೆಯಬೇಕೋ, ಹಳ್ಳಿಗಳು ಕೂಡಾ ಅಷ್ಟೇ ಸಮೃದ್ಧವಾಗಿ ಬೆಳೆಯಬೇಕೆಂಬುದು ನಮ್ಮ ಉದ್ದೇಶ ಮತ್ತು ಗುರಿ. ಅದಕ್ಕೆ ಮಾಜಿ ಪ್ರಧಾನಿ ಚೌಧರಿ ಚರಣ್ ಸಿಂಗ್ ರವರು ಭಾರತ V/S ಇಂಡಿಯಾ ಎಂಬ ಪುಸ್ತಕವನ್ನು ಬರೆದರು. ಇಂಡಿಯಾ ಎನ್ನುವುದು ಪಟ್ಟಣಕ್ಕೆ ಸಂಬಂಧಪಟ್ಟಂತಹ ಒಂದು ಕಲ್ಪನೆ, ಭಾರತ ಎನ್ನುವುದು ಒಂದು ಗ್ರಾಮೀಣ ಭಾಗಕ್ಕೆ ಸಂಬಂಧಪಟ್ಟ ಪ್ರಶ್ನೆ. ಈ ಒಂದು ಕಂದರ ದಿನೇ ದಿನೇ ಜಾಸ್ತಿಯಾಗುತ್ತಿದೆ. ಬಹಳ ದೊಡ್ಡ ಪ್ರಮಾಣದಲ್ಲಿ ಜನರು ಹಳ್ಳಿಗಳಿಂದ ಪಟ್ಟಣಗಳಿಗೆ ವಲಸೆ ಬರುತ್ತಿದ್ದಾರೆ, ಇದಕ್ಕೆ ನಾನಾ ಕಾರಣಗಳಿವೆ. ಆದರೆ ಗ್ರಾಮೀಣಾಭಿವೃದ್ಧಿ ಸಮಗ್ರವಾಗಿ ಮಾಡಿದ್ದಾಗಿದ್ದರೆ, ಮತ್ತು ಅಲ್ಲಿ ಅವರಿಗೆ ಸರಿಯಾದ ಉದ್ಯೋಗವನ್ನು ಕೊಟ್ಟು ನಾವು ಆರ್ಥಿಕ ಭದ್ರತೆಯನ್ನು ನಾವು ಕೊಟ್ಟಿದ್ದರೆ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಆ ಹಳ್ಳಿಗಾಡಿನ ಜನ ಪಟ್ಟಣಕ್ಕೆ ಇವತ್ತು ಬರುವುದನ್ನು ತಡೆಯುವುದಕ್ಕೆ ಸಾಧ್ಯತೆ ಇದೆ. ಆ ಪ್ರಯತ್ನಗಳು ನಡೆಯುತ್ತಿವೆ, ಆದರೆ ಎಷ್ಟು ತೀವ್ರಗತಿಯಿಂದ ಪ್ರಯತ್ನಗಳು

ನಡೆಯಬೇಕಾಗಿತ್ತು ಅಷ್ಟು ತೀವ್ರಗತಿಯಲ್ಲಿ ಇವತ್ತು ನಡೆಯುತ್ತಿಲ್ಲ. ಇವತ್ತು ಇಲ್ಲಿ ಅನೇಕ ವಿಷಯಗಳನ್ನು ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಪಂಚಾಯಿತಿಗಳು ಯಾವ ವ್ಯವಸ್ಥೆಯಲ್ಲಿದ್ದಾವೆ, ಅದಕ್ಕೆ ಮಾನ್ಯ ಮಂತ್ರಿಗಳು ಎರಡು ಸಮಿತಿಗಳನ್ನು ಮಾಡಿದ್ದಾರೆ. ಈ ಪಂಚಾಯಿತಿಗಳ ಪುನರ್ ರಚನೆಯ ಬಗ್ಗೆ ನಂಜಯ್ಯನಮಠ್ ಅವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಮಾಡಿದ್ದಾರೆ, ಇನ್ನೊಂದು ಸಮಿತಿಯನ್ನು ಸನ್ಮಾನ್ಯ ರಮೇಶ್ ಕುಮಾರ್ ಅವರ ಅಧ್ಯಕ್ಷತೆಯಲ್ಲಿ ಯಾವ ತರಹ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಕಟ್ಟಬೇಕೆನ್ನುವುದರ ಬಗ್ಗೆ ಮಾಡಿದ್ದೀರಿ. ನಮ್ಮ ಅನುಭವದ ಮಾತನ್ನು ಹೇಳುತ್ತೇನೆ, ಹಿಂದೆ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಯಾಗಿದ್ದಾಗ ಈ ಕರ್ನಾಟಕದ ಅಭಿವೃದ್ಧಿಯ ಹೊಸ ಅಧ್ಯಾಯವನ್ನು ಪ್ರಾರಂಭಮಾಡಿದರು. ಜಿಲ್ಲಾ ಪರಿಷತ್ ಮತ್ತು ಮಂಡಲ್ ಪಂಚಾಯತ್ ಎನ್ನುವ ಹೊಸ ಕಾನೂನನ್ನು ತಂದರು. ಆ ಕಾನೂನು ಅನುಷ್ಠಾನಕ್ಕೆ ಬಂದ ಮೇಲೆ ಇವತ್ತು ನನ್ನ ಅನುಭವದಲ್ಲಿ, ನಾನು ತಾಲ್ಲೂಕು ಬೋರ್ಡ್ ಸದಸ್ಯನಾಗಿ ಗೆದ್ದು ಬಂದು ಕೆಲಸ ಮಾಡಿದ ಅನುಭವವಿದೆ. ಆದರೆ ಮಂಡಲ ಪಂಚಾಯತಿ ಮತ್ತು ಜಿಲ್ಲಾ ಪರಿಷತ್ ಅಧಿಕಾರಕ್ಕೆ ಬಂದ ಮೇಲೆ ಬಹಳಷ್ಟು ಪರಿಣಾಮಕಾರಿಯಾಗಿ ಗ್ರಾಮೀಣಾಭಿವೃದ್ಧಿಯಲ್ಲಿ ಕೆಲಸ ಮಾಡಲು ಸಾಧ್ಯವಾಗಿದೆ. ಏಕೆಂದರೆ, ಆ ಒಂದು ಜಿಲ್ಲಾ ಪರಿಷತ್‌ಗಳಿಗೆ ಮತ್ತು ಮಂಡಲ ಪಂಚಾಯಿತಿಗಳಿಗೆ ಸಾಕಷ್ಟು ಅಧಿಕಾರದಶಕ್ತಿ, ಹಣದ ಶಕ್ತಿ, ಹಣದ ಬಲ ಮತ್ತು ಅವರಿಗೆ ಎಲ್ಲಾ ಸೌಕರ್ಯಗಳನ್ನು ಮಾಡಿಕೊಟ್ಟ ಪರಿಣಾಮವಾಗಿ ಅವರು ಬಹಳ ಉತ್ತಮ ರೀತಿಯಲ್ಲಿ ಕೆಲಸವನ್ನು ಮಾಡಿದರು. ಆ ಗತಿ ಹಾಗೇ ಮುಂದುವರೆಯಬೇಕಾಗಿತ್ತು, ಆ ಮಂಡಲ ಪಂಚಾಯಿತಿ ಮತ್ತು ಜಿಲ್ಲಾ ಪರಿಷತ್‌ನ ಒಂದು ವ್ಯವಸ್ಥೆ ಏನಿದೆ ಅದು ಮುಂದುವರೆಯಬೇಕಾಗಿತ್ತು. ಕಾರಣಾಂತರಗಳಿಂದ ಬಂದಂಥ ಸರ್ಕಾರ ಈ ಒಂದು ವ್ಯವಸ್ಥೆಯನ್ನು ಮತ್ತೆ ಬದಲಾವಣೆ ಮಾಡಬೇಕೆಂದು ಹೊರಟು ಮತ್ತೆ ಹೊಸ ರೂಪವನ್ನು ಕೊಟ್ಟು ಮತ್ತೆ ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿ ಎನ್ನುವ three-tier system ಅನ್ನು ಇವರು ತಂದಿದ್ದಾರೆ. ಆದರೆ

ಈ three-tiers system ವ್ಯವಸ್ಥಿತ ರೀತಿಯಲ್ಲಿ ನಡೆಯುತ್ತಿಲ್ಲ. ನನ್ನ ಅನುಭವದ ಪ್ರಕಾರ, ಇವತ್ತು ಹಿಂದೆ ನಾನು ವಿಧಾನ ಪರಿಷತ್ತಿನ ಸದಸ್ಯನಾಗಿದ್ದಾಗಲೂ ಕೂಡ ಪ್ರತಿ ಜಿಲ್ಲಾ ಪಂಚಾಯತ್ ಸಭೆಗೆ ಹೋಗುತ್ತಿದ್ದೆ. ಇವತ್ತು ಕೂಡ ನಾನು ಶಾಸಕನಾದ ಮೇಲೆ ಪ್ರತಿ ಜಿಲ್ಲಾ ಪಂಚಾಯತ್ ಸಭೆಗೆ ಹೋಗುತ್ತಿದ್ದೇನೆ. ಆದರೆ ಅವತ್ತೇನು ವರ್ತನೆ, ನಡವಳಿಕೆ, ಪದ್ಧತಿ ಇತ್ತು, ಇವತ್ತು ಜಿಲ್ಲಾ ಪಂಚಾಯತಿ ಬಂದ ಮೇಲೆ ಅಷ್ಟೊಂದು ವ್ಯವಸ್ಥಿತವಾದ ಪದ್ಧತಿ ನಡೆದುಕೊಂಡು ಬರುತ್ತಿಲ್ಲ. ಜಿಲ್ಲಾ ಪಂಚಾಯತ್ ವ್ಯವಸ್ಥೆಯಲ್ಲಿ ಗುಣಮಟ್ಟ ಬಹಳ ಹಾಳಾಗಿದೆ.

ಅಧ್ಯಕ್ಷರು:– ಆವಾಗ ಮೀಸಲಾತಿ ಇರಲಿಲ್ಲ, ಈಗ ಮೀಸಲಾತಿ ಇದೆ.

ಶ್ರೀ ಬಿ.ಆರ್. ಪಾಟೀಲ್:– ಇಲ್ಲ, ಮೀಸಲಾತಿ ಬರಲೇ ಬೇಕು, ಸಾಮಾಜಿಕ ನ್ಯಾಯ ಸಿಗಲೇ ಬೇಕು.

ಅಧ್ಯಕ್ಷರು:– ಆವಾಗ ಇರಲಿಲ್ಲವೆಂದು ಹೇಳಿದೆ.

ಶ್ರೀ ಬಿ.ಆರ್. ಪಾಟೀಲ್:– ಇರಲಿಲ್ಲ ಸರ್, ಆದರೆ ನಾನು ಇವತ್ತು ಹೇಳುತ್ತೇನೆ, ಬರೀ ಮೀಸಲಾತಿ ಎಂದು ಕುರ್ಚಿ ಮೇಲೆ 22 ತಿಂಗಳು ಕೂರಿಸಿ ಕಳುಹಿಸುವುದಲ್ಲ, ಅವರಿಗೆ 5 ವರ್ಷಗಳ ಕಾಲ ಅವಕಾಶ... ಕೊಡಬೇಕು, ಅವರಿಗೆ ಆರ್ಥಿಕ ಸ್ವಾತಂತ್ರ್ಯ ಕೊಡಬೇಕು, ಅಧಿಕಾರ ಕೊಡಬೇಕು. ಆವಾಗ ಅವರು 5 ವರ್ಷಗಳ ಕಾಲ ತಮ್ಮ ಅಧಿಕಾರವನ್ನು ಚಲಾಯಿಸಿ, ಇಚ್ಛಾಶಕ್ತಿಯನ್ನು ಪ್ರಕಟ ಮಾಡಿ, ತಮಗೆ ಏನು ಅಭಿವೃದ್ಧಿ ಮಾಡುವುದಕ್ಕೆ ಸಾಧ್ಯವಿದೆ? ಅದನ್ನು ಮಾಡಿ ತೋರಿಸಿದರೆ, ನಾಯಕತ್ವ ಬೆಳೆಯುತ್ತದೆ, ವ್ಯಕ್ತಿತ್ವ ಬೆಳೆಯುತ್ತದೆ, ಒಂದು ಅನುಭವ ಬರುತ್ತದೆ. ಇವತ್ತಿನ ಮೀಸಲಾತಿ ಏನಾಗಿದೆ? ಪಂಚಾಯಿತಿಗಳಲ್ಲಿ ಅದು ಅರ್ಧಾರ್ಧ, ತಾಲ್ಲೂಕು ಪಂಚಾಯಿತಿಗಳಲ್ಲಿ ಮೂರು, ಜಿಲ್ಲಾ ಪಂಚಾಯಿತಿಗಳಲ್ಲಿ 22–22 ತಿಂಗಳು ಪಾಪ ಆ ಮೀಸಲಾತಿಯಲ್ಲಿ ಬಂದು ಕುಳಿತು ಒಂದಿಷ್ಟು ತಿಳಿದುಕೊಳ್ಳುವುದರಲ್ಲೇ ಅವರ ಅವಧಿ ಮುಗಿದು ಹೋಗುತ್ತದೆ. ಅದರಲ್ಲಿ ಅವಿಶ್ವಾಸ ನಿರ್ಣಯ ಮಂಡಿಸುವುದು, ಅವನು ವಿಶ್ವಾಸ ಗೆಲ್ಲುವುದಕ್ಕೆ ಅವನದೊಂದಷ್ಟು ಪ್ರಯತ್ನ,

ಅವನು ಬೆಂಗಳೂರಿಗೆ ಹೊರಟು ಸದಸ್ಯರನ್ನು ಹಿಡಿದುಕೊಳ್ಳುವುದು. ಇದೆಲ್ಲಾ ಬಹಳ ಗೊಂದಲವಾಗಿದೆ ಮಾನ್ಯ ಸಚಿವರೆ, ದಯಮಾಡಿ, ಪಂಚಾಯತ್ ರಾಜ್ ವ್ಯವಸ್ಥೆಗೆ ಇವತ್ತು ನಿಮ್ಮ ಕಾಲದಲ್ಲಿ ಹೊಸ ರೂಪವನ್ನು ಕೊಡಬೇಕು, ಒಂದು ಹೊಸ ವ್ಯವಸ್ಥೆಯನ್ನು ನಿರ್ಮಾಣ ಮಾಡಬೇಕು ಮತ್ತು ಗ್ರಾಮೀಣ ಭಾರತವನ್ನು ಕಟ್ಟಬೇಕಾಗಿದ್ದರೆ, ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಆಮೂಲಾಗ್ರವಾದ ಬದಲಾವಣೆಯನ್ನು ಮಾಡಿ. ಇದಕ್ಕೆ ಸಾಕಷ್ಟು ಹಣಕಾಸನ್ನು ಕೊಡಿ. ಇವತ್ತು ಪಂಚಾಯತ್ ರಾಜ್ ವ್ಯವಸ್ಥೆಯನ್ನು ಕಟ್ಟಿದ್ದೇವೆ. ಆದರೆ ಅದರಲ್ಲಿ ಮಾಂಸವಿಲ್ಲ, ರಕ್ತವಿಲ್ಲ ಏನೂ ಇಲ್ಲ, ಚೈತನ್ಯವಿಲ್ಲ, ಬರೀ skeleton body ಮಾಡಿದ್ದೇವೆ. ಇವತ್ತು ಸಿಬ್ಬಂದಿ ಎಲ್ಲಿದ್ದಾರೆ? ಸಿಬ್ಬಂದಿಗಳಿಗೆ ಬಹಳ ದೊಡ್ಡ ಪ್ರಮಾಣದಲ್ಲಿ ಹಣ ಕೊಡುತ್ತಿದ್ದೇವೆ. ನೇರವಾಗಿ ಕೇಂದ್ರದಿಂದ ಹಣ ಬರುತ್ತದೆ, NREGS ನಿಂದ ಹಣ ಬರುತ್ತದೆ, ಬೇರೆ ಬೇರೆ ಮೂಲಗಳಿಂದ ಹಣ ಬರುತ್ತದೆ ಆದರೆ ಖರ್ಚು ಮಾಡುವಂಥ ಶಕ್ತಿ ಆ ಪಂಚಾಯಿತಿಗಳಿಲ್ಲ. ಇವತ್ತು ಪಂಚಾಯಿತಿಗಳಿಗೆ ಶಕ್ತಿ ತುಂಬಿದರೆ ಮಾತ್ರ ಕೆಲಸ ಮಾಡಲು ಸಾಧ್ಯತೆ ಇದೆ. ಅಂಥ ಒಂದು ಸಮಗ್ರವಾದ ಕಾನೂನನ್ನು ತಂದು ಪಂಚಾಯತ್ ರಾಜ್ ವ್ಯವಸ್ಥೆಯನ್ನು ಗಟ್ಟಿಗೊಳಿಸಿದರೆ ಮಾತ್ರ ಈ ಗ್ರಾಮೀಣ ಭಾಗದ ಅಭಿವೃದ್ಧಿ ಸಾಧ್ಯತೆ ಇದೆ, ಆ ಒಂದು ಕೆಲಸವನ್ನು ಮಂತ್ರಿಗಳಾದ ಮಾನ್ಯ ಹೆಚ್.ಕೆ. ಪಾಟೀಲರು ಮಾಡುತ್ತಾರೆನ್ನುವ ಸಂಪೂರ್ಣವಾದ ಭರವಸೆ ನನಗಿದೆ. ಇವತ್ತು ಎಲ್ಲಾ ಮಾನ್ಯ ಸದಸ್ಯರು ಸದನದಲ್ಲಿ ಸೇರಿದ್ದೇವೆ. ಇವತ್ತು ಎಷ್ಟು ಭಯಾನಕವಾದ ಸಮಸ್ಯೆ ನಮಗೆ ಕಾಡುತ್ತಿದೆ ಎಂದರೆ, ಕುಡಿಯುವ ನೀರಿನ ಸಮಸ್ಯೆ. ಇದಕ್ಕೆ ಸರ್ಕಾರ ಬಹಳ ದೊಡ್ಡ ಪ್ರಮಾಣದಲ್ಲಿ ಹಣ ಖರ್ಚು ಮಾಡುತ್ತಿದೆ, ಪ್ರಯತ್ನಗಳು ಕಡಿಮೆಯಾಗಿಲ್ಲ, ಆದರೆ ನಿಸರ್ಗ ನಮಗೆ ಸಹಾಯ, ಸಹಕಾರ ಮಾಡುತ್ತಿಲ್ಲ. ಒಂದನೆಯದು ಮಳೆ ಬರುತ್ತಿಲ್ಲ, ಎರಡನೆಯದು ಇದ್ದಂಥ ಅಂತರ್ಜಲವನ್ನು ಸಂಪೂರ್ಣವಾಗಿ ಉಪಯೋಗ ಮಾಡಿಕೊಂಡುಬಿಟ್ಟಿದ್ದೇವೆ ಮತ್ತು ನಮ್ಮಲ್ಲಿ ನೀರಿನ over exploitation ಕೂಡ ಆಗುತ್ತಿದೆ. ಎಷ್ಟು ನೀರು ಬೇಕೋ ಅದಕ್ಕಿಂತ ಮಿತಿ ಮೀರಿ ನೀರನ್ನು ನಾವು ಬಳಕೆ ಮಾಡುತ್ತಿದ್ದೇವೆ. ಏಕೆಂದರೆ, ನಮ್ಮ greediness ಗೆ ಹೆಚ್ಚಿಗೆ ಉತ್ಪಾದನೆ

ಮಾಡಬೇಕು, ಹೆಚ್ಚಿಗೆ ಗಳಿಸಬೇಕು ಎನ್ನುವ ಕಾರಣಕ್ಕಾಗಿ. ಇವತ್ತು ಎಲ್ಲಿಯವರೆಗೆ ನಾವು ನೀರಿನ ಸಮಸ್ಯೆಯನ್ನು ಬಗೆಹರಿಸುವುದಿಲ್ಲ ಅಲ್ಲಿಯವರೆಗೆ ತೊಂದರೆ ಇದೆ. ಒಂದು ಮಾತನ್ನು ಹೇಳಿದರೆ ತಪ್ಪಾಗುವುದಿಲ್ಲ, ಬೇಕಾದರೆ ಆಹಾರ ಕೊರತೆ ಬಿದ್ದರೆ ಬೇರೆ ದೇಶದಿಂದ ತಂದುಕೊಳ್ಳಬಹುದು, ಇನ್ನು ಬಟ್ಟೆ ಬೇಕಾದರೆ ಬೇರೆ ದೇಶದಿಂದ ತಂದುಕೊಳ್ಳಬಹುದು, ನೀರು ಬೇಕಾದರೆ ಯಾವ ಸರ್ಕಾರ ಬಂದರೂ ಏನು ಮಾಡುವುದಕ್ಕೆ ಸಾಧ್ಯವಾಗುತ್ತದೆ? ನಾವು ಈ ಅಂತರ್ಜಲ ಮಟ್ಟವನ್ನು ಹೆಚ್ಚಿಗೆ ಮಾಡಲೇಬೇಕು. ಹಿಂದಿನ ಪ್ರಧಾನಮಂತ್ರಿಗಳಾದ ಡಾ|| ಮನಮೋಹನ್ ಸಿಂಗ್ ಅವರು ಒಂದು ಮಾತನ್ನು ಹೇಳಿದ್ದರು, ನಾನು ಓದಿದ್ದೇನೆ, ಈ ಅಂತರ್ಜಲವನ್ನು ಯಾವರೀತಿ ಇಟ್ಟುಕೊಳ್ಳಬೇಕೆಂದರೆ, Fixed Deposit ಆಗಿ ಅಂತರ್ಜಲವನ್ನು ಇಟ್ಟುಕೊಳ್ಳಬೇಕು, ಆ ಬಡ್ಡಿಯನ್ನು ಬಳಸಿಕೊಂಡು ಮಾತ್ರ ನಾವು ಬದುಕಬೇಕು. ಆಗ ಮಾತ್ರ ಈ ನಿಸರ್ಗದ ಸಮತೋಲನವನ್ನು ಕಾಪಾಡಿಕೊಂಡು ಹೋಗುವುದಕ್ಕೆ ಸಾಧ್ಯವಿದೆ, ಇಲ್ಲದಿದ್ದರೆ ಇದಕ್ಕೆ ಉತ್ತರವನ್ನು ಕಂಡುಹಿಡಿಯುವುದಕ್ಕೇ ಸಾಧ್ಯವಿಲ್ಲವೆನ್ನುವ ಮಾತನ್ನು ಅವರು ಹೇಳಿದ್ದು ಬಹಳ ಅರ್ಥಪೂರ್ಣವಾಗಿದೆ. ಭೂಮಿಯಲ್ಲಿದ್ದಂಥ ನೀರನ್ನು 60–70 ವರ್ಷಗಳಲ್ಲಿ ಸಂಪೂರ್ಣವಾಗಿ ಎತ್ತಿ ಹಾಕಿದ್ದೇವೆ, ಭೂಮಿಯಲ್ಲಿ ನೀರೇ ಇಲ್ಲ. ಕುಡಿಯುವುದಕ್ಕೂ ನೀರಿಲ್ಲ, ಕೃಷಿಗೂ ನೀರಿಲ್ಲ, ಯಾವುದಕ್ಕೂ ನೀರಿಲ್ಲ. ಮೊನ್ನೆ ಒಬ್ಬ ಸದಸ್ಯರು ಈ ಹೈನುಗಾರಿಕೆಗೆ ನೀರಿಲ್ಲದೆ ಬಹಳ ದೊಡ್ಡ ಹೊಡೆತ ಬಿದ್ದಿದೆ ಎಂದು ಹೇಳಿದರು. ಮೊದಲು ಯಥೇಚ್ಛವಾಗಿ ನೀರು ಇರುತ್ತಿತ್ತು, ದನಕರುಗಳನ್ನು ಸಾಕುತ್ತಿದ್ದೆವು, ಹೈನುಗಾರಿಕೆಯಾಗುತ್ತಿತ್ತು, ಆರ್ಥಿಕ ಆದಾಯ ಬರುತ್ತಿತ್ತು. ಇವತ್ತು ಪರಿಸ್ಥಿತಿ ಎಲ್ಲಿಯವರೆಗೆ ಬಂದಿದೆ ಎಂದರೆ, ದನಗಳು ಮನೆಯಲ್ಲಿ ನೀರು ಕುಡಿದು ಇಡೀ ದಿವಸ ಹೊಲಕ್ಕೆ ಹೋಗಿ ಬಂದು ಮತ್ತೆ ರಾತ್ರಿ ನೀರು ಕುಡಿದರೆ ಮಾತ್ರವೇ ನೀರು ಸಿಗುತ್ತದೆ, ಅಂಥ ಒಂದು ಪರಿಸ್ಥಿತಿ ಬಂದಿದೆ. ಈ ದೇಶದಲ್ಲಿ ನೀರು ಮಾರಾಟವಾಗುತ್ತದೆ, ಹಳ್ಳಿ ಹಳ್ಳಿಗಳಲ್ಲಿ ಮಾರಾಟವಾಗುತ್ತದೆಂದು ನಾನೇ ಕಲ್ಪನೆ ಮಾಡಿಕೊಂಡಿರಲಿಲ್ಲ ಬಹುಶಃ ನೀವ್ಯಾರೂ ಕಲ್ಪನೆ ಮಾಡಿಕೊಂಡಿರಲಿಲ್ಲ. ಇವತ್ತು ಹಳ್ಳಿಗಳಲ್ಲಿ ಬಾಟಲ್ ನೀರು

ಮಾರಾಟಕ್ಕಿಟ್ಟಿದ್ದೇವೆ. ಇವತ್ತು ಆ ನೀರಿನ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಗಂಭೀರವಾಗಿ ಪ್ರಯತ್ನ ಎಲ್ಲಿಯವರೆಗೆ ಮಾಡುವುದಿಲ್ಲ ಅಲ್ಲಿಯವರೆಗೆ ನೀವು ನೀರಿನ ಸಮಸ್ಯೆಗೆ ಉತ್ತರ ಕಂಡುಹಿಡಿಯುವುದಕ್ಕೆ ಸಾಧ್ಯವಿಲ್ಲ. ಇದಕ್ಕೆ ಸಾಕಷ್ಟು ಹಣ ಕೊಡಬಹುದು, ಬೋರ್ ಹಾಕಬಹುದು, ಪೈಪ್‌ಲೈನ್ ಹಾಕಬಹುದು, ಆದರೆ ಅಂತರ್ಜಲ ಮಟ್ಟವನ್ನು ಏರಿಸುವಂಥ ಸಮಗ್ರವಾದ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು. ಅದಕ್ಕೆ ನಾನು ಇನ್ನೊಂದು ಚರ್ಚೆಯಲ್ಲಿ ಹೇಳಿದೆ, ದಯಮಾಡಿ ಈ ಅಂತರ್ಜಲವನ್ನು ಹೆಚ್ಚು ಮಾಡುವ ಪ್ರಯತ್ನಗಳು ಎಲ್ಲೆಲ್ಲಿ ಆಗಿವೆ, ಅದು ಅಣ್ಣಾ ಹಜಾರೆಯವರು ಮಾಡಿರಬಹುದು, ರಾಜೇಂದ್ರ ಸಿಂಗ್ ಅವರು ಮಾಡಿರಬಹುದು ಮತ್ತು ಬೇರೆ ಯಾರ‍್ಯಾರು ಮಾಡಿದ್ದಾರೆ, ಅಂಥ ಪ್ರಯೋಗಗಳನ್ನು ನೋಡಿ. ದಯಮಾಡಿ ಇವತ್ತು ಕೂಡ ನಾನು ವಿನಂತಿ ಮಾಡಿಕೊಳ್ಳುತ್ತೇನೆ, ಅಣ್ಣಾ ಹಜಾರೆಯವರ ಸಲಹೆಯನ್ನು, ಮಾರ್ಗದರ್ಶನವನ್ನು ಸರ್ಕಾರದವರು ಪಡೆಯಿರಿ. ಹೆಚ್.ಕೆ. ಪಾಟೀಲರಿಗೂ, ರಾಜೇಂದ್ರ ಸಿಂಗ್ ಅವರಿಗೆ ಬಹಳ ಅನ್ಯೋನ್ಯವಾದ ಸಂಬಂಧವಿದೆ. ಡಿ.ಆರ್. ಪಾಟೀಲರಿಗೂ ಇವರಿಗೂ ಬಹಳ ಅನ್ಯೋನ್ಯವಾದ ಸಂಬಂಧವಿದೆ. ಅವರು ಬಹಳ ಹಳೆಯ ಸ್ನೇಹಿತರು. 1977ರ ಚಳುವಳಿಯ ಸದಸ್ಯರು. ಇವತ್ತು ಇಂಥ ತಜ್ಞರನ್ನು ಕರೆದುಕೊಂಡು ಕರ್ನಾಟಕದಲ್ಲಿ ನೀವು ಯಾವ ರೀತಿಯಾಗಿ ಅಂತರ್ಜಲ ಮಟ್ಟವನ್ನು ಹೆಚ್ಚು ಮಾಡುವುದಕ್ಕೆ ಸಾಧ್ಯತೆ ಇದೆ, ಇದನ್ನು ನೀವು ಬಹಳ ಗಂಭೀರವಾಗಿ ಯೋಚನೆ ಮಾಡದೇ ಹೋದರೆ ಮುಂದೆ ಬರುವ ದಿನಗಳಲ್ಲಿ ಕಷ್ಟವಾಗುತ್ತದೆ. ಗುಲ್ಬರ್ಗಾ ಜಿಲ್ಲೆಯದು ಒಂದು Science Report ಇದೆ. 2030ಕ್ಕೆ ಗುಲ್ಬರ್ಗಾ ಜಿಲ್ಲೆಯ ಅಂತರ್ಜಲ ಸಂಪೂರ್ಣವಾಗಿ ಕುಸಿದು ಹೋಗುತ್ತದೆ, ಒಂದು ಹನಿ ಕೂಡ ನೀರು ಸಿಗುವುದಿಲ್ಲವೆನ್ನುವಂಥ ಬಹಳ ಭಯಾನಕವಾದಂಥ ವರದಿಯನ್ನು ನಾನು ಓದಿದ್ದೇನೆ. 2030ಕ್ಕೆ ಇಡೀ ನೀರು ಸಂಪೂರ್ಣವಾಗಿ ಇಲ್ಲವಾಗುತ್ತದೆ, ನೀರು ಮಾಯವಾಗಿಬಿಟ್ಟರೆ ಹೇಗೆ ಬದುಕುವುದಕ್ಕೆ ಸಾಧ್ಯವಿದೆ, ಯಾವ ಸರ್ಕಾರಗಳು ಏನು ಮಾಡುವುದಕ್ಕೆ ಸಾಧ್ಯವಿದೆ? ವಿಜ್ಞಾನ ಅದಕ್ಕೆ ಉತ್ತರ ಕಂಡುಹಿಡಿಯಬಹುದು. ಆದರೆ ಅಷ್ಟೊಂದು ದುಡ್ಡು ಖರ್ಚು ಮಾಡುವುದಕ್ಕೆ ನಮ್ಮ ದೇಶ ಅಮೇರಿಕ ಅಲ್ಲ

ಅಥವಾ ರಷ್ಯಾ ಅಲ್ಲ. ಸಮುದ್ರದ ನೀರನ್ನೂ ಕೂಡ ನಾವು purify ಮಾಡಿ ಕುಡಿಯುವ ತಂತ್ರಜ್ಞಾನ ಬಂದಿದೆ. ಆದರೆ ಅಷ್ಟೊಂದು ಸಂಪನ್ಮೂಲ ಇಲ್ಲ. ಇದ್ದ ನೀರನ್ನೇ ನಮಗೆ ಕೊಡುವುದಕ್ಕಾಗುತ್ತಿಲ್ಲ. ಸಮುದ್ರದ ನೀರನ್ನು ನೀವು ಬಿಡುತ್ತೀರಾ ಮಾನ್ಯ ರಮಾನಾಥ ರೈರವರೇ, ಅಲ್ಲಿಂದ ಅವರು ನೀರು ಕೊಡಬಹುದು. ಅಲ್ಲಿಂದ ನೀವು ನೀರು ಕೊಟ್ಟರೆ ನಾವು ಸಂತೋಷವಾಗಿ ತೆಗೆದುಕೊಳ್ಳುತ್ತೇವೆ. ಆದರೆ ಅದಕ್ಕೆ ಅಷ್ಟು ಹಣ ಖರ್ಚು ಮಾಡುವಂತಹ ಸಾಮರ್ಥ್ಯ ನಮಗೆ ಇಲ್ಲ. ಇವತ್ತು ಕುಡಿಯುವ ನೀರಿನ ವಿಷಯದ ಬಗ್ಗೆ ಯೋಜನೆಗಳಿವೆ.

ಶ್ರೀ ಬಿ. ರಮಾನಾಥ ರೈ:- Series of dam ಮಾಡಿದರೆ ಎಲ್ಲ ಅಂತರ್ಜಲ ತನ್ನಿಂದ ತಾನೇ ನಿಂತು ಹೋಗುತ್ತದೆ.

ಶ್ರಿ ಬಿ.ಆರ್. ಪಾಟೀಲ್:- ಅದಕ್ಕೆ ಬಹಳಷ್ಟು ಯೋಜನೆಗಳಿವೆ. Micro Water Shed Programme ಅನ್ನು ವೈಜ್ಞಾನಿಕವಾಗಿ ಬಹಳ effective ಆಗಿ ಮಾಡಬೇಕು. ಆಗ ಅಂತರ್ಜಲದ ಮಟ್ಟ ಸುಧಾರಣೆಯಾಗುತ್ತದೆ. ಮಾನ್ಯ ಅಧ್ಯಕ್ಷರೆ, ನಾನು ಸರ್ಕಾರಕ್ಕೆ ಒಂದು ವಿನಂತಿ ಮಾಡಿಕೊಳ್ಳುತ್ತೇನೆ. ಕೇಂದ್ರ ಸರ್ಕಾರದವರು Ground Water Regulation and Control Bill ಎಂದು model bill ಕಳುಹಿಸಿದ್ದಾರೆ. ಇವತ್ತಿನ ದಿನ ಮಾನಗಳಲ್ಲಿ ಏನು ಸಮಸ್ಯೆ ಉದ್ಭವವಾಗುತ್ತಿದೆ? Ground Water Regulation and Control Act ಎಂದು ಒಂದು model bill ಬಂದಿದೆ. ಬೇರೆ ಬೇರೆ ರಾಜ್ಯಗಳಲ್ಲಿ ಅಲ್ಲಿ ಕಾಯಿದೆಯನ್ನು ಪಾಸ್ ಮಾಡಿಕೊಂಡಿದ್ದಾರೆ. ಕರ್ನಾಟಕದಲ್ಲಿ ಕೂಡ ನೀವು Ground Water Regulation and Control Act ಅನ್ನು ನೀವು ಪಾಸ್ ಮಾಡಲೇ ಬೇಕಾಗುತ್ತದೆ. ಇಲ್ಲದಿದ್ದರೆ ಸಿಕ್ಕಾಪಟ್ಟೆ ನೀರು over exploitation ಆಗಿ ದುರುಪಯೋಗ ಕೂಡ ಆಗುತ್ತಿದೆ. ಆ ಕಾನೂನನ್ನು ನೀವು ದಯಮಾಡಿ ತೆಗೆದುಕೊಂಡು ಬನ್ನಿ. ಇಲ್ಲದಿದ್ದರೆ ಇದಕ್ಕೆ ಉತ್ತರ ಕಂಡುಹಿಡಿಯುವುದಕ್ಕೆ ಸಾಧ್ಯವಿಲ್ಲ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ enforcement of law ಬಹಳ ದೊಡ್ಡ ಕೆಲಸ ಮಾಡುತ್ತದೆ. ಕಾನೂನು ಬೇಕು ಅದಕ್ಕೆ ಒತ್ತಡ ಬೇಕು, ಅದಕ್ಕೆ ನಿಯಂತ್ರಣ ಬೇಕು, ಅಂತಹ ಒಂದು ಕಾನೂನನ್ನು ನೀವು ತರಬೇಕಾಗುತ್ತದೆ. ಅದು ಅನಿವಾರ್ಯ ಇದೆ

ಅಂತಹ ಕಾನೂನನ್ನು ನೀವು ತರಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ, ಮಾನ್ಯ ಅಧ್ಯಕ್ಷರೆ, ಇವತ್ತು ಬಹಳ ವಿಷಯಗಳನ್ನು ನಾನು ಮಾತನಾಡಬೇಕಾಗಿದೆ, ಒಂದೆರಡು ಮೂರು ವಿಷಯಗಳನ್ನು ಮಾತ್ರ ಹೇಳುತ್ತೇನೆ. ನನಗೂ HKDB meetingಗೆ ಹೋಗಬೇಕಾಗಿದೆ. ಬಹಳ ದೊಡ್ಡ ಕಲ್ಪನೆ ಹಿನ್ನೆಲೆಯಲ್ಲಿ NREGS ಬಂದಿದೆ. ಇದು ಬಹಶಃ ಇಲ್ಲಿ ಸೇರಿದಂತಹ ಎಲ್ಲಾ ಸದಸ್ಯರಿಗೂ ಅದರ ಅನುಭವ ಇದೆ. ಯಾವ ರೀತಿ ನಮ್ಮ ಹಳ್ಳಿಗಳು ಹಾಳಾಗುತ್ತಿವೆ, ಯಾವ ರೀತಿ ಕೃಷಿ ಮೇಲೆ ದೊಡ್ಡ ಪರಿಣಾಮ ಬೀರುತ್ತಿದೆ, ಯಾವ ರೀತಿ ಭ್ರಷ್ಟಾಚಾರ ಬೆಳೆಯುತ್ತಿದೆ, ಇದರ ಬಗ್ಗೆ ತಾವು ಚಿಂತನೆಯನ್ನು ಮಾಡಬೇಕಾಗುತ್ತದೆ. ಮಾನ್ಯ ಧರ್ಮ್‌ಸಿಂಗ್‌ರವರು ಬೀದರ್ ಜಿಲ್ಲೆಗೆ ಒಂದು ಸಾರಿ ಮಾನ್ಯ ಶರದ್‌ಪವಾರ್‌ರವರನ್ನು ಕರೆಸಿದ್ದರು. ಅವರದ್ದೇ ಆದ ಒಂದು ಆಲೋಚನೆ ಇದೆ. ಉದ್ಯೋಗ ಖಾತರಿ ಯೋಜನೆಯಲ್ಲಿ ಅವರಿಗೆ ಉದ್ಯೋಗ ಕೊಡುವುದಕ್ಕೆ ವೈಯಕ್ತಿಕವಾಗಿ ಕೃಷಿಕರ ಹೊಲದಲ್ಲಿ ಅದನ್ನು ತೊಡಗಿಸುವಂತಹ ಏನಾದರೂ ಒಂದು ಕಾರ್ಯಕ್ರಮ ಹಾಕಿಕೊಳ್ಳಿ. ಇವತ್ತು ಕೃಷಿಯಲ್ಲಿ ಕೂಲಿಕಾರರು ಸಿಗುತ್ತಿಲ್ಲ. ಎಲ್ಲರೂ ಪಟ್ಟಣ ಪ್ರದೇಶಗಳಿಗೆ ಬರುತ್ತಿದ್ದಾರೆ. ಇವರನ್ನೇನಾದರೂ ಅಲ್ಲಿ maximum ಆಗಿ ತಾವು labour engagement ಮಾಡಿದರೆ ರೈತರಿಗೂ ಕೂಡ ಅನುಕೂಲವಾಗುತ್ತದೆ, ಇವರಿಗೂ ಕೂಡ employment ಸಿಗುತ್ತದೆ. ಅಂತಹ ಒಂದು ಕಲ್ಪನೆ ಏನಾದರೂ ಕಾರ್ಯಕ್ರಮ ಹಾಕಿಕೊಂಡು ಹೊರಟರೆ ಇವತ್ತು ನಿಜವಾಗಿ ಕೃಷಿಗೂ ಕೂಡ ಅನುಕೂಲವಾಗುತ್ತದೆ ಮತ್ತು ಅವರಿಗೆ ಉದ್ಯೋಗ ಕೂಡ ಸಿಗುತ್ತದೆ. ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಉದ್ಯೋಗ ಖಾತರಿ ಕೊಟ್ಟಿದ್ದೇವೆ. ಇಷ್ಟು ದೊಡ್ಡ ಪ್ರಮಾಣದಲ್ಲಿ ನಾವು ಆರ್ಥಿಕ ಭದ್ರತೆಯನ್ನು ಕೊಟ್ಟಿದ್ದೇವೆ. ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ Employment Guaranty ಯಲ್ಲಿ ನಾವು ಕೆಲಸ ಕೊಟ್ಟರೂ ಕೂಡ ಈ ಪಟ್ಟಣ ಪ್ರದೇಶಕ್ಕೆ ಬರುವಂತಹ ಮೈಗ್ರೇಷನ್ ಏಕೆ ನಿಂತಿಲ್ಲ? ಇವತ್ತು ಬೆಂಗಳೂರಿನ ಯಾವುದೇ ಮೂಲೆಯಲ್ಲಿ ಓಡಾಡಿ ಜನ ಸಿಗುವುದು ರಾಯಚೂರಿನವರು, ಬೀದರ್‌ನವರು, ಗುಲ್ಬರ್ಗದವರು, ಯಾದಗಿರಿಯವರು, ಕೊಪ್ಪಳದವರು, ಬಿಜಾಪುರದವರು ಮತ್ತು ಗದಗ್

ಜಿಲ್ಲೆಯವರು. ಏಕೆ? Employment Guaranty ಸಿಕ್ಕಿದರೆ ಅವರು ಪಟ್ಟಣಕ್ಕೆ ಏಕೆ ಬರಬೇಕು? ನೀವು ಕೂಲಿ ಕೂಡ ಜಾಸ್ತಿ ಮಾಡಿದ್ದೀರಿ. ಏಕೆ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ವಲಸೆ ಬರುತ್ತಿದ್ದಾರೆ? ಅವರೇನು ಖುಷಿ ಪಡುವುದಕ್ಕೆ ಅಥವಾ ಎಂಜಾಯ್ ಮಾಡುವುದಕ್ಕೆ ಬರುವುದಿಲ್ಲ. ಹೊಟ್ಟೆಪಾಡಿಗಾಗಿ ಬರುತ್ತಿದ್ದಾರೆ. ಆ ಕಾರಣದಿಂದ ನಾನು ಹೇಳುತ್ತಿದ್ದೇನೆ. Employment Guaranty Scheme ಸರಿಯಾದ ರೀತಿಯಲ್ಲಿ ನಡೆಯುತ್ತಿಲ್ಲ, ನಿಜವಾದ ಬಡವರಿಗೆ ಅದು ಸಿಗುತ್ತಿಲ್ಲ. ಅದು ಮಧ್ಯವರ್ತಿಗಳ ಕೈಗೆ ಸೇರುತ್ತಿದೆ. ಇದರ ದುರುಪಯೋಗವಾಗುತ್ತಿದೆ. ಸರ್ಕಾರದ ಖರ್ಚಿನಲ್ಲಿ ಮಾತ್ರ ನಾವು ಇಷ್ಟು ದುಡ್ಡನ್ನು ಖರ್ಚು ಮಾಡಿ ಇಷ್ಟು ಜನರಿಗೆ employment ಕೊಟ್ಟಿದ್ದೇವೆಂದು Planning Commission ನವರು projection ಮಾಡುತ್ತಾರೆ. ಇದು ನಿಜವಾಗಿ ಯಾವುದೂ ಆಗುತ್ತಿಲ್ಲ. ಇದಕ್ಕೆ ನಿಯಂತ್ರಣ ಮಾಡದೇ ಹೋದರೆ ಈ ದೇಶದ ಸಂಪತ್ತನ್ನು ನಾವೇ ಕ್ರಿಮಿನಲ್ ವೇಸ್ಟ್‌ಗೆ ಹಾಳು ಮಾಡುತ್ತಿದ್ದೇವೆ. ದಯಮಾಡಿ ಈ ಒಂದು ವಿಚಾರವನ್ನು ತಾವು ಗಮನದಲ್ಲಿಟ್ಟುಕೊಳ್ಳಬೇಕು.

ಶ್ರೀ ವೈ.ಎಸ್.ವಿ. ದತ್ತ:- ಗುಳೆ ಹೋಗುವುದರ ಬಗ್ಗೆ ಬಹಳ ಗಂಭೀರವಾದ ಆತಂಕ ಮತ್ತು ಚಿಂತನೆ ನಮ್ಮ ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರಿಗೆ ಇದೆ. ನನಗೆ ಇನ್ನೂ ಚೆನ್ನಾಗಿ ಜ್ಞಾಪಕ ಇದೆ. ಬೆಳಗಾಂನಲ್ಲಿ ನಾವು ಪ್ರಥಮ ಬಾರಿ ಅಧಿವೇಶನ ನಡೆಸಿದಾಗ 2007-08ರಲ್ಲಿ ತಾವು ಬರ ಪರಿಸ್ಥಿತಿಯಲ್ಲಿ ನಿಮ್ಮ ಭಾಗದಿಂದ ಹೇಗೆ ಜನ ಗುಳೆ ಹೋಗುತ್ತಿದ್ದಾರೆ ಎಂಬ ಬಗ್ಗೆ ಸರ್ಕಾರವನ್ನು ಬಡಿದೆಚ್ಚರಿಸಬೇಕೆಂದು ಹೇಳಿ ನಿವು ಧರಣಿ ಕೂತು, ರಾತ್ರಿ ಎಲ್ಲಾ ತಾವು ಕುಳಿತು ಹೋರಾಟ ನಡೆಸಿದ್ದು, ತಮ್ಮ ನೇತೃತ್ವದಲ್ಲಿ ವಿಧಾನ ಪರಿಷತ್ತಿನಲ್ಲಿ ಹೋರಾಟ ನಡೆದಿದ್ದು ಗೊತ್ತಿದೆ. ಹಾಗಾಗಿ ಅವತ್ತು ನೀವು ಪ್ರತಿ ಪಕ್ಷದ ಸಾಲಿನಲ್ಲಿದ್ದಾಗ ಏನು ಸಮಸ್ಯೆ ಇತ್ತು ಈಗ ಸರ್ಕಾರದಲ್ಲಿದ್ದಾಗಲೂ ಆ ಸಮಸ್ಯೆ ಹಾಗೆಯೇ ಇದೆ. ನೀವು ಮಾತ್ರ ಇದರ ಬಗ್ಗೆ ಒಂದು ಸ್ಪಷ್ಟವಾದ ಪರಿಹಾರದ ಮಾರ್ಗ ಸೂಚಿಸಿಕೊಳ್ಳಿ. ಆತಂಕ ಹಾಗೂ ಗಂಭೀರತೆ ಅವತ್ತು ನಿಮಗೆ ತುಂಬ ಕಾಡಿತ್ತು ಎನ್ನುವಂತಹ ಆಸೆ ಭರವಸೆ ನಮಗೆ ಇದೆ.

ಶ್ರೀ ಬಿ.ಆರ್. ಪಾಟೀಲ್:- ಮಾನ್ಯ ಅಧ್ಯಕ್ಷರೆ, ಇಲ್ಲಿ ಅವರ ಮುಖಸುತ್ತಿ ಮಾಡುವುದಕ್ಕೆ ನಾನು ಮಾತನಾಡುವುದಿಲ್ಲ. ಮಾನ್ಯ H.K. ಪಾಟೀಲರು ಗ್ರಾಮೀಣಾಭಿವೃದ್ಧಿ ಸಚಿವರಾದ ಮೇಲೆ ಒಂದು ಹೊಸ ಚಿಂತನೆಯನ್ನು ಪ್ರಾರಂಭ ಮಾಡಿದರು. ಪಂಚಾಯಿತಿಗಳಲ್ಲಿ ಬರೀ employment ಕೊಡುವುದು ಅಷ್ಟೇ ಉದ್ದೇಶ ಅಲ್ಲ. ಇದು ಅಸೆಟ್ ಕ್ರಿಯೇಟ್ ಕೂಡ ಆಗಬೇಕು. ನಮಗೆ ಬಹಳ ಖುಷಿ ಆಯಿತು. 2ನೇ ಅಕ್ಟೋಬರ್ ದಿವಸ ಪಂಚಾಯತ್‌ಗಳಲ್ಲಿ ಇರುವ ಕೆರೆಗಳ ಹೂಳು ತೆಗೆಯುವ ಕಾರ್ಯಕ್ರಮವನ್ನು ತಾವು ಎಲ್ಲಾ ಕಡೆ ಸಂದೇಶ ರವಾನೆ ಮಾಡಿದಿರಿ. ಬಹಳ ಖುಷಿಯಿಂದ 2ನೇ ಅಕ್ಟೋಬರ್ ದಿವಸ ನಾನೂ ಕೂಡ ಅಧಿಕಾರಿಗಳನ್ನು ಕರೆದುಕೊಂಡು ಹೋಗಿ ಒಂದು ಕಡೆ ಹೂಳೆತ್ತುವ ಕಾರ್ಯಕ್ರಮವನ್ನು ಪ್ರಾರಂಭ ಮಾಡಿದೆ. ನಾನು ಮೊನ್ನೆ KDP ಮೀಟಿಂಗ್ ನಲ್ಲಿ ಎಷ್ಟು ಕಡೆ ನೀವು ಹೂಳೆತ್ತುವ ಕಾರ್ಯಕ್ರಮವನ್ನು ಮಾಡಿದ್ದೀರಿ ಎಷ್ಟು ಹಣವನ್ನು ಉಪಯೋಗ ಮಾಡಿಕೊಂಡಿದ್ದೀರಿ, ಎಷ್ಟು ಜನರಿಗೆ ಉದ್ಯೋಗವಕಾಶ ಕೊಟ್ಟಿದ್ದೀರಿ ಎಂದು ಕೇಳಿದರೆ ಒಬ್ಬರೂ ಕೂಡ ಉತ್ತರ ಕೊಡಲಿಲ್ಲ. ಕಾರ್ಯಕ್ರಮ ಬಹಳ ಉತ್ತಮವಾಗಿತ್ತು. ಇವತ್ತು ನೀವು ಕಾರ್ಯಕ್ರಮಗಳನ್ನು ಕೊಡುತ್ತಿದ್ದೀರಿ ಆದರೆ ಅಧಿಕಾರಿಗಳು ಅದನ್ನು implement ಮಾಡುತ್ತಿಲ್ಲ. 26,000 ಕೆರೆಗಳು ನಿಮ್ಮ ಜಿಲ್ಲಾ ಪಂಚಾಯಿತಿ ಕೆಳಗಿವೆ. ಇದಲ್ಲದೇ ಗೋ ಕಟ್ಟೆ, ಬಂದಾರಗಳಿವೆ. ಇವೆಲ್ಲವನ್ನೂ ನೀವು ಉದ್ಯೋಗ ಖಾತರಿಯಲ್ಲಿ ಹೂಳೆತ್ತುವ ಕೆಲಸವನ್ನು ನೀವು ಮಾಡಿದರೆ, Ground Water Recharge ಖಂಡಿತವಾಗಿ ಆಗುತ್ತದೆ ಮತ್ತು ಬಹಳ ದೊಡ್ಡ ಕೆಲಸವಾಗುತ್ತದೆ. ಆದರೆ ಏಕೆ ಆಗಲಿಲ್ಲ? ಮಾನ್ಯ ಸಚಿವರು ಇಷ್ಟೊಂದು ಕಳಕಳಿ ಇಟ್ಟುಕೊಂಡು ಕಾರ್ಯಕ್ರಮ ಕೊಟ್ಟರೂ ಕೂಡ ನಿಮ್ಮ ಅಧಿಕಾರಿಗಳು ಏಕೆ ಅನುಷ್ಠಾನ ಮಾಡಲಿಲ್ಲ? ಇದಕ್ಕೆ ವಿಶೇಷವಾದ ಹಣವನ್ನು ಕೊಟ್ಟಿದ್ದೀರಿ. Regular budget ಅಲ್ಲ. Other than this plan ನಲ್ಲಿ ನೀವು ಹೆಚ್ಚಿಗೆ ದುಡ್ಡು ಕೊಟ್ಟಿದ್ದೀರಿ. ಒಂದು ಪೈಸೆ ಕೂಡ ಖರ್ಚಾಗಿಲ್ಲ. ಕಾರಣವೇನು? ಅಂದರೆ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಅಧಿಕಾರಿಗಳಿಗೆ ಪ್ರಾಮಾಣಿಕತೆ ಇಲ್ಲ, ಕಾಳಜಿ ಇಲ್ಲ, ಕಳಕಳಿ ಇಲ್ಲ, ಮತ್ತು ಅವರ ಬಗ್ಗೆ ಈ

ಕೆಲಸಗಳನ್ನು ಮಾಡುವುದಕ್ಕೆ ಮನಸ್ಸಿಲ್ಲ. ಎಲ್ಲಿ ದುಡ್ಡು easy ಆಗಿ ಬರುತ್ತದೆ ಅಲ್ಲಿ ಕೆಲಸವಾಗುತ್ತದೆ. ನಿಜವಾಗಿ ಕೆರೆಗಳ ಹೂಳೆತ್ತಿದರೆ ಜನರಿಗೆ ಕುಡಿಯುವುದಕ್ಕೆ ನೀರು ಸಿಗುತ್ತದೆ, ಭೂಮಿಗೆ ನೀರು ಬರುತ್ತದೆ. ನೀರು ತರುವುದಕ್ಕೆ transportation ನಿಲ್ಲಿಸಬೇಕಾಗುತ್ತದೆ. ಇವರಿಗೆ ದುಡ್ಡು ಉಳಿಯುತ್ತದೆ. ಒಂದೂ ಕಡೆ ಕೂಡ ಹೂಳೆತ್ತುವ ಕಾರ್ಯಕ್ರಮ ಆಗಲಿಲ್ಲ. ತಾವು ಇನ್ನೊಂದು ಕಾರ್ಯಕ್ರಮವನ್ನು ಕೊಟ್ಟಿರಿ, ಮಕ್ಕಳಿಗೆ ಆಟದ ಮೈದಾನ ಕಟ್ಟಿ asset create ಮಾಡಬೇಕೆಂದು ಹೇಳಿದಿರಿ. It is a very good programme. ಆದರೆ ಕೆಲವು ಕಡೆ ಮಾತ್ರ ಆಯಿತು ಎಲ್ಲಾ ಕಡೆ ಆಗಲಿಲ್ಲ. ಜಾಗ ಇದ್ದರೆ ತಾನೆ ಮಾಡುವುದಕ್ಕೆ ಸಾಧ್ಯವಾಗುತ್ತದೆ? ಬಹಳಷ್ಟು ಕಡೆ ಜಾಗದ ಅನುಕೂಲ ಇದ್ದರೂ ಕೂಡ ಎಷ್ಟು ಪ್ರಮಾಣದಲ್ಲಿ ಆಟದ ಮೈದಾನಗಳನ್ನು ಮಾಡಬೇಕಾಗಿತ್ತು ಅಷ್ಟು ಪ್ರಮಾಣದಲ್ಲಿ ಆಟದ ಮೈದಾನಗಳು ಮಾಡಲಿಲ್ಲ.

ಶ್ರೀ ಹೆಚ್.ಕೆ. ಪಾಟೀಲ್:– ಅಲ್ಲಿ ನಿಧಾನವಾಗಿದೆ ಎಂದು ಹೇಳುವುದು ಒಪ್ಪತಕ್ಕಂತಹ ವಿಷಯ. ಅದಕ್ಕೆ ಕಾರಣಗಳನ್ನು ಉತ್ತರದಲ್ಲಿ ಹೇಳುತ್ತೇನೆ. ಆದರೆ ಆಟದ ಮೈದಾನ ನಿರ್ಮಾಣ ಮಾಡುವಂತಹ ಕೆಲಸದಲ್ಲಿ ನಮ್ಮ ಅಪೇಕ್ಷಿತವಾದ ಗುರಿಗೆ ಸಮೀಪ ಬಂದಿದ್ದೇವೆ. ಅತ್ಯಂತ ಉತ್ತಮವಾಗಿರತಕ್ಕಂತಹ ಕಾರ್ಯಕ್ರಮ. ಬಹುತೇಕ ಪ್ರತಿ ಪಂಚಾಯಿತಿಯಲ್ಲಿ ಒಂದಲ್ಲ ಒಂದು ಹಳ್ಳಿಯವರು ಇದರ ಬಗ್ಗೆ ಆಸಕ್ತಿ ತೆಗದುಕೊಂಡಿದ್ದಾರೆ. ಎಷ್ಟು, ಎಲ್ಲಿ, ಏನು ಎನ್ನುವ ಅಂಕಿ ಸಂಖ್ಯೆಗಳನ್ನು ಉತ್ತರದಲ್ಲಿ ಕೊಡುತ್ತೇನೆ.

ಶ್ರೀ ಬಿ.ಆರ್. ಪಾಟೀಲ್:– ಬಹಳ ಸಂತೋಷ. Implement ಆಗಿ ಜನರಿಗೆ ಅನುಕೂಲವಾಗಿ ನಿಜವಾದ ಅಸೆಟ್ ಕ್ರಿಯೇಟ್ ಆಗುತ್ತದೆ ಎಂದರೆ, we will all co-operate with you. Definitely, we will appreciate you. ಆದರೆ ನಮ್ಮ ಅನುಭವದ ಪ್ರಕಾರ ಎಷ್ಟು ತೀವ್ರ ಗತಿಯಿಂದ, ಎಷ್ಟು ಪರಿಣಾಮಕಾರಿಯಾಗಿ ಎಷ್ಟು ಜನರಿಗೆ ಅನುಕೂಲ ಮಾಡಿ ಕೊಡುವುದಕ್ಕೆ ಸಾಧ್ಯವಿತ್ತು, ಅಷ್ಟು ಕಳಕಳಿ, ಜನರಿಗೆ ಹೋಗಿ ತಲುಪುತ್ತಿಲ್ಲ. ತಾವು ಮಂತ್ರಿಗಳಾದವರು ಅದಕ್ಕೆ ಉತ್ತರವನ್ನು ಕಂಡುಕೊಳ್ಳಬೇಕು ಮತ್ತು ಅದನ್ನು ದುರಸ್ತಿ ಮಾಡಿ ಸುಧಾರಣೆ ಮಾಡಬೇಕು. ಈ ಕಾರ್ಯಕ್ರಮ ಅನುಷ್ಠಾನ

ಆಗಬೇಕೆಂಬುದು ಅಷ್ಟೇ ನಮ್ಮ ಬೇಡಿಕೆ. ಆರೋಪ ಅಲ್ಲ. ಮತ್ತೊಂದು ಕಾರ್ಯಕ್ರಮ ಹೇಳಿದರು, "ನಮ್ಮ ಹೊಲ, ನಮ್ಮ ರಸ್ತೆ" ಇದು ಬಹಳ ಒಳ್ಳೆಯ ಕಾರ್ಯಕ್ರಮ. ಹಳ್ಳಿಗಾಡಿನ ಕಲ್ಪನೆ ಇವತ್ತು ಬದಲಾವಣೆಯಾಗಿದೆ. ಹಿಂದೆ ಎತ್ತಿನ ಬಂಡಿಯಲ್ಲಿ ಹೋಗುತ್ತಿದ್ದೆವು ಈಗ tractorನಲ್ಲಿ ಹಾಗೂ ಜೀಪುಗಳಲ್ಲಿ ಹೋಗುತ್ತಿದ್ದೇವೆ. ಇವತ್ತು ರಸ್ತೆಗಳು ಬೇಕು. ಆದರೆ ಎಷ್ಟು ಪ್ರಮಾಣದಲ್ಲಿ ಕೆಲಸವಾಗಬೇಕಾಗಿತ್ತೋ ಅದು ಕೂಡ ಆಗಲಿಲ್ಲ. ಮಣ್ಣಿನ ಮೇಲೆ ಮಣ್ಣು, ಮಣ್ಣಿನ ಮೇಲೆ ಮಣ್ಣನ್ನು ಹಾಕಿ ದುಡ್ಡನ್ನು ಎತ್ತಿದ್ದಾರೆಯೇ ಹೊರತಾಗಿ ಅಲ್ಲಿ ಏನಾದರೂ ಒಂದು ಹೊಸ asset creation ಆಗುತ್ತಿಲ್ಲ. ಅದಕ್ಕಾಗಿ ಈ ಬಗ್ಗೆ ಗಂಭೀರವಾಗಿ ತಾವು ಚಿಂತನೆಯನ್ನು ಮಾಡಬೇಕೆಂದು ಹೇಳಬಯಸುತ್ತೇನೆ. ಇನ್ನು ಕುಡಿಯುವ ನೀರಿನ ಸಮಸ್ಯೆಯ ಪರಿಹಾರಕ್ಕಾಗಿ ಮಾನ್ಯ ಸಚಿವರೆ, ತಾವು ಒಂದು ಕಾರ್ಯಕ್ರಮವನ್ನು ಹಾಕಿಕೊಂಡು ಹೊರಡಬೇಕಾಗುತ್ತದೆ. ಏಕೆಂದರೆ ನನ್ನ ಕ್ಷೇತ್ರದಲ್ಲಿಯೇ ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಹೋರಾಟ ಮಾಡಬೇಕಾಯಿತು. ಮಾನ್ಯ ಮುಖ್ಯಮಂತ್ರಿಗಳೇ, ಸರ್ಕಾರದಲ್ಲಿ ದುಡ್ಡಿನ ಕೊರತೆಯಿಲ್ಲ, ದುಡ್ಡಿನ ಕೊರತೆಯಿಲ್ಲವೆಂದು ಹೇಳುತ್ತಿದ್ದೀರಿ. ಆದರೆ ನಮ್ಮ ಸಮಸ್ಯೆ ಏನೆಂದರೆ ದುಡ್ಡಿಲ್ಲವೆಂದು ಹೇಳಿರುವುದರಿಂದಲೇ ಸಮಸ್ಯೆಯಾಗಿದೆ. ಸುಮ್ಮನೆ ಏಕೆ ಇದನ್ನು ಹೇಳಿ ನಿಮ್ಮ ಮೇಲೆ ಆರೋಪ ಮಾಡಬೇಕು? ಇವತ್ತು ಶಾಸಕರ ಅಧ್ಯಕ್ಷತೆಯಲ್ಲಿರುವ ಟಾಸ್ಕ್‌ಫೋರ್ಸ್‌ನವರು ಮಾಡುವ ತೀರ್ಮಾನ ಫೈನಲ್ ತಾನೆ? ಆದರೆ ಟಾಸ್ಕ್‌ಫೋರ್ಸ್ ಮಾಡಿರುವುದಕ್ಕೂ ಕೂಡ ಸರ್ಕಾರ ಒಪ್ಪಿಗೆ ಕೊಡಬೇಕು ಎನ್ನುತ್ತಾರೆ. ಇದೆಂಥ ಟಾಸ್ಕ್‌ಫೋರ್ಸ್? ಶಾಸಕರಿಗೆ ಕೇವಲ ಇಷ್ಟೇ ಅಧಿಕಾರವೇ? ಮತ್ತೆ ನಾವೇಕೆ ಮಂಜೂರು ಮಾಡಬೇಕು? ಟಾಸ್ಕ್‌ಫೋರ್ಸ್ ಮಾಡಿರುವುದಕ್ಕೆ ಅಧಿಕಾರಿಗಳು ಮಂಜೂರು ಮಾಡಬೇಕಂತೆ. ನಮ್ಮದು ನಾಮಕಾವಸ್ತೆ ಟಾಸ್ಕ್‌ಫೋರ್ಸ್ ಸಭೆ, ಒಪ್ಪಿಗೆ ಕೊಟ್ಟರೆ ಮಾತ್ರ ನಾವು ಖರ್ಚು ಮಾಡುವುದಕ್ಕೆ ಸಾಧ್ಯತೆಯಿದೆ. ಇವತ್ತು ಮಳೆ ಬಂದಿಲ್ಲ. ಇವತ್ತಿಗೂ ಕುಡಿಯುವ ನೀರಿನ ಸಮಸ್ಯೆ ಬಹಳ ಗಂಭೀರವಾಗಿದೆ. ನೀವು ಬೇಕಾದಷ್ಟು ಹಣವನ್ನು ನಮಗೆ ಕೊಡುತ್ತಿಲ್ಲ. 1 ಕೋಟಿ 45 ಲಕ್ಷರೂಪಾಯಿ ನನ್ನ ಕ್ಷೇತ್ರಕ್ಕೆ ಬರಬೇಕಾದ್ದು ಇನ್ನೂ ಬಂದಿಲ್ಲ. ಇನ್ನು

ಅಡಿಶನಲ್ ಆಗಿ 47 ಬೋರ್‌ಗಳಿಗೆ 1 ಕೋಟಿ ರೂ.ಗಳನ್ನು ಮತ್ತೆ ಕೇಳಿದ್ದೇವೆ. ಅದನ್ನು ಯಾವಾಗ ಕೊಡುತ್ತೀರೋ ಗೊತ್ತಿಲ್ಲ. ಮಳೆಗಾಳ ಪ್ರಾರಂಭವಾಗುತ್ತದೆ. ಕುಡಿಯುವುದಕ್ಕೆ ನೀರಿಲ್ಲ. ಆದರೆ ದುಡ್ಡಿದೆ, ದುಡ್ಡಿದೆಯೆಂದು ತಾವು ಪತ್ರಿಕೆಯಲ್ಲಿ ಹೇಳುತ್ತೀರಿ. ಆದರೆ ದುಡ್ಡನ್ನು ಏಕೆ ಕೊಡುತ್ತಿಲ್ಲ? ಏಕೆ ನಿಮ್ಮ ಒಪ್ಪಿಗೆಯನ್ನು ಪಡೆಯಬೇಕು? ನಿಮ್ಮ ಅಧಿಕಾರಿಗಳು ಹೇಳುತ್ತಾರೆ, ಕಾಮಗಾರಿಗಳ ಪ್ರಸ್ತುತೆಯ ಬಗ್ಗೆ ಅಭಿಪ್ರಾಯ ನೀಡುವಂತೆ, ಪ್ರಸ್ತುತ ಮುಂಗಾರು ಆರಂಭವಾಗಿರುವುದರಿಂದ ಸದರಿ ಕಾಮಗಾರಿಗಳ ಅವಶ್ಯಕತೆಯಿದೆಯೇ ಎನ್ನುವಂಥ ಮಾತನ್ನು ಕೇಳುತ್ತಾರೆ. ಅಂದರೆ ನಾವೇನು ಹುಚ್ಚರೆ? ಶಾಸಕರಾದ ನಾವು ತಲೆ ಕೆಡಿಸಿಕೊಂಡು ಜನಪರವಾಗಿ ಮೀಟಿಂಗ್ ಮಾಡಿ ಎಲ್ಲೆಲ್ಲಿ ನೀರಿನ ಸಮಸ್ಯೆಯಿದೆ ಆ ನೀರಿನ ಸಮಸ್ಯೆಯನ್ನು ಬಗೆಹರಿಸಬೇಕೆಂದು ನಾವು ಸಭೆ ಮಾಡಿ ಈ ಟಾಸ್ಕ್‌ಫೋರ್ಸ್‌ನಲ್ಲಿ ನಿರ್ಣಯ ಮಾಡುತ್ತೇವೆ.

ಶ್ರೀ ಪಿ. ರಾಜೀವ್ (ಕುಡಚಿ):- ಬಿ.ಆರ್. ಪಾಟೀಲರೆ, ಒಂದ್ನಿಮಿಷ, ಕುಡಿಯುವ ನೀರಿಗೆ ತುರ್ತಾಗಿ ಹಣ ಬೇಕೆಂದು ನಾವು ಟಾಸ್ಕ್‌ಫೋರ್ಸ್‌ನಲ್ಲಿ ಮೀಟಿಂಗ್ ಮಾಡಿದ್ದು ಮಾರ್ಚ್ ಮತ್ತು ಏಪ್ರಿಲ್ ತಿಂಗಳಲ್ಲಿ. ಇವತ್ತಿನವರೆಗೂ ಕೂಡ ಒಂದು ರೂಪಾಯಿ ಬಿಡುಗಡೆಯಾಗಿಲ್ಲ. ಒಂದು ಜಿಲ್ಲೆಗೆ ₹ ಐದು ಲಕ್ಷ ₹ ಆರು ಲಕ್ಷ ಬಂದಿದೆ. ಇಲ್ಲಿಯವರೆಗೂ ಹಣ ಬಿಡುಗಡೆಯಾಗಿಲ್ಲ. ಅಂದರೆ ಇಲ್ಲಿಯವರೆವಿಗೆ ಕುಡಿಯುವ ನೀರನ್ನು ಜನರು ಹೇಗೆ ಕುಡಿಯಬೇಕು, ಹೇಗೆ ಬದುಕಬೇಕು? ಅಧಿಕಾರಿಗಳ ಮನೋಭಾವನೆ ಹೇಗಿದೆಯೆಂದರೆ ಇದು ಹೇಗೋ ನಡೆದುಹೋಗಿಬಿಡುತ್ತದೆ ಎನ್ನತಕ್ಕಂಥದ್ದೇ ಆಗಿದೆ.

ಶ್ರೀ ಬಿ.ಆರ್. ಪಾಟೀಲ್:- ಮಾನ್ಯ ಅಧ್ಯಕ್ಷರೆ, ರೆಗ್ಯುಲರ್ ಸ್ಕೀಂನಲ್ಲಿ ನೀವು ಇದನ್ನು ತೆಗೆದುಕೊಳ್ಳಿ ಎಂದು ಅಧಿಕಾರಿಗಳು ಹೇಳುತ್ತಾರೆ. ರೆಗ್ಯುಲರ್ ಸ್ಕೀಂ ಎಂದರೆ ಅದಕ್ಕೆ ಪ್ಲ್ಯಾನ್ ಅಪ್ರೂವಲ್ ಆಗಬೇಕು, ಟೆಂಡರ್ ಕರೆಯಬೇಕು, ವರ್ಕ್ ಆರ್ಡರ್ ಕೊಡಬೇಕು. ಹೀಗೆ ಅದಕ್ಕೆಲ್ಲಾ ನೂರೆಂಟು ಸಮಸ್ಯೆಯಿದೆ. ಆದರೆ ಟಾಸ್ಕ್‌ಫೋರ್ಸ್ ಕೆಲಸವೇ ಬೇರೆ, ರೆಗ್ಯುಲರ್ ಪ್ರೋಗ್ರಾಂಗಳೇ ಬೇರೆ. ಟಾಸ್ಕ್‌ಫೋರ್ಸ್‌ನಿಂದ ಈ ರೀತಿಯ ಅನುಭವ

ನಮಗೆ ಆಗುತ್ತಿದೆ. ನಿಜವಾಗಿಯೂ ಟಾಸ್ಕ್‌ಫೋರ್ಸ್‌ಗೆ ಮರ್ಯಾದೆಯಿದ್ದರೆ ಮಾಡಿದಂಥ ಕಾಮಗಾರಿಗಳಿಗೆ ತಕ್ಷಣ ದುಡ್ಡನ್ನು ಕೊಟ್ಟರೆ ನಾವು ಜನರಿಗೆ ನೀರನ್ನು ಕುಡಿಸುವುದಕ್ಕೆ ಸಾಧ್ಯವಾಗುತ್ತದೆ. ಸುಮ್ಮನೆ ನಮಗೆ ಟಾಸ್ಕ್‌ಫೋರ್ಸ್ ಅಧ್ಯಕ್ಷರನ್ನಾಗಿ ಮಾಡಿ ಜನತೆಯ ಎದುರಿಗೆ ಎಂ.ಎಲ್.ಎ. ರವರು ಕೆಲಸ ಮಾಡಲಿಲ್ಲ ಎಂ.ಎಲ್.ಎ. ಜನರಿಗೆ ನೀರನ್ನು ಕುಡಿಯುವುದಕ್ಕೆ ಕೊಡಿಸಲಿಲ್ಲ ಎಂದು ನಮ್ಮ ಮೇಲೆ ಅಪವಾದ ಬರಿಸುವುದಕ್ಕೆ ಮಾಡುವುದಾದರೆ ಇಂಥ ಟಾಸ್ಕ್‌ಫೋರ್ಸ್ ನಮಗೆ ಬೇಡ. ನೀವು ಬೇಕಾದರೆ ಆ ಟಾಸ್ಕ್‌ಫೋರ್ಸ್‌ನ್ನು ತೆಗೆದುಹಾಕಿ. ಇಂಥ ಟಾಸ್ಕ್‌ಫೋರ್ಸ್ ನಮಗೆ ಬೇಕಾಗಿಲ್ಲ. ನೀವು ದುಡ್ಡು ಕೊಡುವುದಾದರೆ ಮತ್ತು ಅಧಿಕಾರಿಗಳು ನಿಮ್ಮ ಮಾತನ್ನು ಕೇಳುವುದಾದರೆ ಟಾಸ್ಕ್‌ಫೋರ್ಸ್‌ಅನ್ನು ಮಾಡಿ. ಇಲ್ಲದಿದ್ದರೆ ಈ ಟಾಸ್ಕ್‌ಫೋರ್ಸ್‌ಅನ್ನು ತೆಗೆದುಹಾಕಿ, ಸರ್ಕಾರವೇ ಜವಾಬ್ದಾರಿಯನ್ನು ತೆಗೆದುಕೊಳ್ಳಿ, ನೀವೇನಾದರೂ ಮಾಡಿ ನೀರನ್ನು ಕುಡಿಸಿ ಅಥವಾ ಬಿಡಿಸಿ. ಇಂಥ ಒಂದು ಟಾಸ್ಕ್‌ಫೋರ್ಸ್‌ಅನ್ನು ಇಟ್ಟು ನಮಗೆ ಕಷ್ಟ ಕೊಡಬೇಡಿ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನು ಈ ಭೂ ಸೇನಾ ನಿಗಮವೆಂದು ಏನಿದೆ ಅದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವ್ಯವಸ್ಥೆಯೊಳಗೆ ಸೇರುತ್ತದೆ. ನನ್ನ ಅನುಭವ ಹೇಳುತ್ತೇನೆ, ಆ ಲ್ಯಾಂಡ್ ಆರ್ಮಿಯಷ್ಟು ಅಧ್ವಾನ ಬೇರೆ ಯಾವುದೂ ಇಲ್ಲ. ನಾನು ಲ್ಯಾಂಡ್ ಆರ್ಮಿಯ ಎಂ.ಡಿ. ಯವರಿಗೆ ಪತ್ರವನ್ನು ಬರೆದು information ಕೇಳಿದೆ. ಇವತ್ತಿನವರೆಗೂ ಅದಕ್ಕೆ ಉತ್ತರವೇ ಸಿಕ್ಕಿಲ್ಲ. ಲ್ಯಾಂಡ್ ಆರ್ಮಿಯ ಅಧಿಕಾರಿಗಳು ಕೆ.ಡಿ.ಪಿ. ಮೀಟಿಂಗ್‌ಗೆ ಬರುತ್ತಾರೆ. ಅವರುಗಳಿಗೆ ಲ್ಯಾಂಡ್ ಆರ್ಮಿ ಎಲ್ಲೆಲ್ಲಿ ಕೆಲಸ ತೆಗೆದುಕೊಂಡಿದೆ? ಎಲ್ಲೆಲ್ಲಿ ಎಷ್ಟು ಕೆಲಸವಾಗಿದೆಯೆಂಬುದೇ ಗೊತ್ತಿರುವುದಿಲ್ಲ. ಎಲ್ಲಾ ಕೆಲಸಗಲು incomplete. ಸುವರ್ಣ ಗ್ರಾಮ ಯೋಜನೆಯಲ್ಲಿ ಕೆಲಸವನ್ನು ತೆಗೆದುಕೊಂಡಿದ್ದಾರೆ. ಸುವರ್ಣ ಗ್ರಾಮ ಯೋಜನೆಗಳ ಕೆಲಸ ಹೇಗೆ ನಡೆದಿದೆಯೆಂದು ನೋಡಲು ಹಳ್ಳಿಗಳಿಗೆ ಹೋಗಿ ನೋಡಿದರೆ ಆ ಹಳ್ಳಿಯ ಜನರು ನಮ್ಮ ಊರಿನಲ್ಲಿ ರಸ್ತೆ ಕೆಲಸವಿರಬಹುದು, ಚರಂಡಿ ಕಾಮಗಾರಿ ಕೆಲಸವಿರಬಹುದು, ಸಮುದಾಯ

ಭವನ ಕಟ್ಟಡದ ಕೆಲಸವಿರಬಹುದು ಇವು ಯಾವುವು ಕಂಪ್ಲೀಟ್ ಆಗಿಲ್ಲವೆಂದು ಹೇಳುತ್ತಾರೆ. ಅಲ್ಲಿ ಆಗಿರುವ ಕಾಮಗಾರಿ ಕೆಲಸವು ಕೂಡ ಎಷ್ಟು ಕಳಪೆಯಿಂದ ಕೂಡಿದೆಯೆಂದರೆ ಲ್ಯಾಂಡ್ ಆರ್ಮಿಯವರು ಮಾಡಿದ ಶಾಲೆಗಳ ಕಟ್ಟಡದ ಕೆಲವು ಭಾಗವು ಕೂಡ ಕಿತ್ತುಕೊಂಡು ಹೋಗಿದೆ. ಶಾಲೆಗಳನ್ನು ಕಟ್ಟಿದ್ದಾರೆ, ಅಲ್ಲಿ ನೀರು ಸೋರುತ್ತಿದೆ. ಆಗಲೇ ಕಟ್ಟಡದಲ್ಲಿ ಬಿರುಕು ಬಿಟ್ಟಿದೆ. ಒಂದು ಪಂಚಾಯಿತಿ ಕಟ್ಟಡದ ಉದ್ಘಾಟನೆ ಮಾಡಬೇಕೆಂದು ನನಗೆ ಲ್ಯಾಂಡ್ ಆರ್ಮಿಯವರು ಕರೆದರು. ಗಡಿ ಭಾಗದಲ್ಲಿರುವ ನಿಂಬಾಳ್ ಎನ್ನುವ ಒಂದು ಗ್ರಾಮಕ್ಕೆ ನಾನು ಹೋಗಿದ್ದೆ. ಕಟ್ಟಡವನ್ನು ಗಟ್ಟಿಮುಟ್ಟಾಗಿ ಕಟ್ಟಿದ್ದಾರೋ ಇಲ್ಲವೋ ನೋಡೋಣ, ಬಿದ್ದಮೇಲೆ ನನಗೆ ಕೆಟ್ಟ ಹೆಸರು ಬರಬಾರದು, ಎಂ.ಎಲ್.ಎ. ಉದ್ಘಾಟನೆ ಮಾಡಿದ್ದು ಬಿದ್ದುಹೋಯಿತು ಎಂದು ಹೇಳಬಾರದು ಎನ್ನುವ ಕಾರಣಕ್ಕೆ ನಾನು ಹೋಗಿ ಸುಮ್ಮನೆ ಅಲ್ಲಿಯ ಕಿಟಕಿಯನ್ನು ಒತ್ತಿದೆನಷ್ಟೇ ಡಬಾರ್ ಎಂದು ಅದು ಕೆಳಗೆ ಬಿತ್ತು ನಾನೇನೂ ಅಂಥ ಶಕ್ತಿಶಾಲಿ ಮನುಷ್ಯನೇನಲ್ಲ ಸುಮ್ಮನೆ ಹೀಗೆ ದಬ್ಬಿದ ತಕ್ಷಣ ಕಿಟಕಿಯೇ ಬಿದ್ದುಹೋಯಿತು. ನಾನು ಅಂಥ ಕಟ್ಟಡವನ್ನು ಉದ್ಘಾಟನೆ ಮಾಡಿದ್ದರೆ ನನ್ನ ಗತಿ ಏನಾಗುತ್ತಿತ್ತು ಹೇಳಿ. ಮತ್ತೊಂದು ಸಲ ಆ ಊರಿಗೆ ನಾನು ಹೋಗುವುದಕ್ಕೆ ಆಗುತ್ತಿತ್ತೆ? ಓ, ಎಂ.ಎಲ್.ಎ. ಇಂಥ ಕಳಪೆ ಬಿಲ್ಡಿಂಗ್‌ನ್ನು ಉದ್ಘಾಟನೆ ಮಾಡಿದ್ದಾರೆ, ಇವನ್ಯಾವ ಎಂ.ಎಲ್.ಎ. ಎಂದು ಹೇಳಿ ನನಗೆ ಛೀಮಾರಿ ಹಾಕುತ್ತಿದ್ದರು. ಈ ಲ್ಯಾಂಡ್ ಆರ್ಮಿಯವರದ್ದು ಬಹಳ ದೊಡ್ಡ ತಲೆಬೇನೆಯಾಗಿದೆ.

ಶ್ರೀ ಗುರುಪಾಟೀಲ್ ಶಿರವಾಳ್ (ಶಹಾಪುರ):- ಮಾನ್ಯ ಬಿ.ಆರ್. ಪಾಟೀಲರೆ, ಒಂದ್ನಿಮಿಷ, ಮಾನ್ಯ ಅಧ್ಯಕ್ಷರೆ, ಸುಮಾರು ಆರು ತಿಂಗಳ ಕೆಳಗೆ ಮಾನ್ಯ ಸಚಿವರು ಶಹಾಪುರ ಕ್ಷೇತ್ರದಲ್ಲಿ ಸುವರ್ಣ ಗ್ರಾಮ ಯೋಜನೆಯಡಿಯಲ್ಲಿ ಬರತಕ್ಕಂಥ ಎಲ್ಲಾ ಕಾಮಗಾರಿಗಳ inspection ಗೆ order ಮಾಡಿದ್ದಾರೆ. ಈಗಾಗಲೇ ಸುಮಾರು ಆರು ತಿಂಗಳು ಕಳೆದುಹೋಗಿದೆ. ಇದುವರೆಗೂ ಒಬ್ಬರು ಬಂದಿಲ್ಲ. ಇದು ನಮ್ಮ ಸ್ಥಿತಿ.

ಶ್ರೀ ಬಿ.ಆರ್. ಪಾಟಿಲ್:- ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರಿಗೆ ಹಿಂದಿನ ಸದನದ ಅಧಿವೇಶನದಲ್ಲಿಯೇ ಮಹಿಳೆಯರಿಗೆ ಶೌಚಾಲಯದ ಅವಶ್ಯಕತೆ ಬಗ್ಗೆ ಹೇಳಿದ್ದೆ. ಇದು ಬಹಳ ಗಂಭೀರವಾದ ವಿಚಾರವಾಗಿದೆ. ನಮ್ಮ ಕಡೆ ಸಾಯಂಕಾಲವಾದರೆ ರಸ್ತೆ ಮೇಲೆ ನಾವು ಓಡಾಡುವಂತಿಲ್ಲ. ಬಹುಶಃ ನಿಮ್ಮ ಕಡೆ ಕೂಡ ಅದೇ ಅನುಭವವಾಗಿರಬಹುದು. ಎಲ್ಲಾ ಹೆಣ್ಣುಮಕ್ಕಳು, ನಮ್ಮ ತಾಯಂದಿರು, ಅಕ್ಕತಂಗಿಯರು ರಾತ್ರಿಯಾದರೆ ಅಥವಾ ಸೂರ್ಯ ಉದಯಕ್ಕೆ ಮುಂಚೆಯೇ ಈ ರಸ್ತೆ ಕಡೆ ಶೌಚಾಲಯಕ್ಕೆ ಬರುವುದು.

ಅಧ್ಯಕ್ಷರು:- ಹೌದು, ಆ ರೀತಿಯಿದೆ, ಅದಕ್ಕೋಸ್ಕರವೇ ಶೌಚಾಲಯ ಕಟ್ಟಿಸಿಕೊಳ್ಳಲು ಸರ್ಕಾರ ನೆರವು ಕೊಟ್ಟಿದ್ದಾರಲ್ಲ.

ಶ್ರೀ ಬಿ.ಆರ್. ಪಾಟೀಲ್:- ಮಾನ್ಯ ಅಧ್ಯಕ್ಷರೆ, ನಾನು ಹಿಂದಿನ ಅಧಿವೇಶನದಲ್ಲಿಯೂ ಈ ಶೌಚಾಲಯದ ಬಗ್ಗೆ ಪ್ರಸ್ತಾಪ ಮಾಡಿದ್ದೆ. ಮಾನ್ಯ ಸಚಿವರದ್ದು ಒಂದು ಚಿಂತನೆಯಿದೆ. ಅದೇನೆಂದರೆ ವೈಯಕ್ತಿಕವಾದಂಥ ಶೌಚಾಲಯಗಳನ್ನು ಮಾಡಬೇಕೆಂದಿದೆ. Individual toilet ನಲ್ಲಿ ಮನೆ ಮನೆಗೂ ಟಾಯ್ಲೆಟ್ ಆಗಬೇಕೆಂದು ಹೇಳಿ ಕಾರ್ಯಕ್ರಮವನ್ನು ಹಾಕಿದ್ದಾರೆ. ಅದಕ್ಕೆ 10,500 ರೂ. ಗಳನ್ನು ಸರ್ಕಾರ ಕೊಡುತ್ತದೆ. ಫಲಾನುಭವಿಗಳು ಕೂಡ ಮೂರ್‍ನಾಲ್ಕು ಸಾವಿರ ರೂ.ಗಳನ್ನು ಹಾಕಿಕೊಂಡರೆ ಶೌಚಾಲಯ ಕಟ್ಟಿಕೊಳ್ಳಲು ಅನುಕೂಲವಾಗುತ್ತದೆ. ಶೌಚಾಲಯ ಕಟ್ಟಲು ಆಗುವ ಖರ್ಚು ಬೇರೆ ಬೇರೆ ಭಾಗಗಳಲ್ಲಿನ ಮಣ್ಣಿಗನುಗುಣವಾಗಿ ಬೇರೆ ಬೇರೆಯಾಗುತ್ತದೆ. ಆದರೆ ಇವತ್ತು ನೀವು ಎಷ್ಟು ಪ್ರಮಾಣದಲ್ಲಿ individual toilet ಗಳನ್ನು ಮಾಡಬೇಕೆಂದು ಹೊರಟ್ಟಿದ್ದೀರೋ ಅಷ್ಟು ಪ್ರಮಾಣದಲ್ಲಿ ಆಗಲಿಲ್ಲ. ನಾನು ಹಳ್ಳಿಗಳಿಗೆ ಹೋದಾಗ ಅಲ್ಲಿಯ ಜನರನ್ನು ಕೇಳಿದೆ, ಸರ್ಕಾರ ನಿಮಗೆ 10,500 ರೂ.ಗಳನ್ನು ಕೊಡುತ್ತದೆ, ನೀವು ಟಿ.ವಿ., ಮೊಬೈಲ್ ಗಳನ್ನು ತೆಗೆದುಕೊಳ್ಳುತ್ತೀರಿ, ಅದೇ ರೀತಿ ನಾಲ್ಕೈದು ಸಾವಿರ ರೂ.ಗಳನ್ನು ಖರ್ಚು ಮಾಡಿ ಶೌಚಾಲಯವನ್ನು ಕಟ್ಟಿಸಿಕೊಳ್ಳಿ ಎಂದರೆ, ಅವರೇನು ಹೇಳುತ್ತಾರೆ ಗೊತ್ತೆ, ಸಾರ್ ಟಾಯ್ಲೆಟ್ ಕಟ್ಟಿದ್ದೇವೆ, ಆದರೆ ಅದಕ್ಕೆ ನೀರನ್ನು ಜಾಸ್ತಿ ಹಾಕಬೇಕಾಗುತ್ತದೆ, ನಮಗೆ ಕುಡಿಯುವುದಕ್ಕೇ ನೀರಿಲ್ಲದಿರುವಾಗ ಟಾಯ್ಲೆಟ್‌ಗೆ

ಎಲ್ಲಿಂದ ನೀರು ಹಾಕುವುದು? ನೀರನ್ನು ಹಾಕದಿದ್ದರೆ ಹೊಲಸಾಗುತ್ತದೆ, ಫ್ಲಷ್ ಮಾಡದಿದ್ದರೆ ಶೌಚಾಲಯ ಹಾಳಾಗುತ್ತದೆಂದು ಹೇಳುತ್ತಾ ಆ individual toilet ಕಟ್ಟುವುದನ್ನು ಮುಚ್ಚಿಬಿಟ್ಟರು. ನಾನು ನೋಡಿದ್ದೇನೆ. ಅವರೆಲ್ಲರೂ individual toilet ಗಳನ್ನು ತೆಗೆದುಬಿಟ್ಟರು. ಏಕೆಂದರೆ ಕುಡಿಯುವುದಕ್ಕೆ ನೀರಿಲ್ಲದಿರುವಾಗ ಟಾಯ್ಲೆಟ್‌ಗೆ ನೀರನ್ನು ಎಲ್ಲಿಂದ ತರೋಣವೆಂದು ಅವರ ಸಮಸ್ಯೆಯಾಗಿದೆ. ಆದಕಾರಣ ನಾನು ಮಾನ್ಯ ಸಚಿವರಲ್ಲಿ ಒಂದು ವಿನಂತಿಯನ್ನು ಮಾಡಿಕೊಳ್ಳುತ್ತೇನೆ. individual toilet ಕಟ್ಟಿಸಬೇಕೆನ್ನುವ ನಿಮ್ಮ ಕಲ್ಪನೆಯೇನಿದೆ, ಕಾಳಜಿಯೇನಿದೆ ಅದಕ್ಕೆ ನಾವು ಕೂಡ ಸಹಕಾರವನ್ನು ಕೊಡುತ್ತೇವೆ. ಇದು ಹಂತ ಹಂತವಾಗಿ ನಡೆಯಲಿ. ಆದರೆ ಹೆಣ್ಣು ಮಕ್ಕಳು ಮರ್ಯಾದೆಯಿಂದ ಶೌಚಾಲಯಕ್ಕೆ ಹೋಗುವುದಕ್ಕೆ ಅನುಕೂಲ ಮಾಡುವ ಸಲುವಾಗಿ community toilet ಗಳನ್ನು ಕಟ್ಟಿಸುವಂಥ ಕೆಲಸವನ್ನು ತಾವು ಮಾಡಿಸಿಕೊಡಬೇಕು. ನಮ್ಮ ಗುಲ್ಬರ್ಗಾ ಜಿಲ್ಲೆಯಲ್ಲಿ ಇಂಥ 7 community toilet ಗಳನ್ನು ಮಾತ್ರ ಮಾಡಿರುವುದು.

ಶ್ರೀ ಎನ್.ಎ. ಹ್ಯಾರಿಸ್:- ಪಾಟೀಲ್ ಸಾಹೇಬರೆ ಅದಕ್ಕೂ ನೀರು ಬೇಕಲ್ಲವೆ?

ಶ್ರೀ ಬಿ.ಆರ್. ಪಾಟೀಲ್:- ನಮ್ಮ ಹೆಣ್ಣು ಮಕ್ಕಳು ಏನು ಹೇಳುತ್ತಾರೆಂದರೆ, ನಾವು ಮರ್ಯಾದೆಯಿಂದ ಶೌಚಾಲಯಕ್ಕೆ ಹೋಗಲು ಅನುಕೂಲವಾಗುವಂತೆ ಕನಿಷ್ಠ ನಾಲ್ಕು ಗೋಡೆಗಳನ್ನು ಕಟ್ಟಿಕೊಡಿ. ನಾವು ಹಗಲಿನಲ್ಲಿ ಶೌಚಾಲಯಕ್ಕೆ ಎಲ್ಲಿಗೆ ಹೋಗುವುದು? ನಿಮ್ಮ ಪಟ್ಟಣ ಪ್ರದೇಶದ ಸಮಸ್ಯೆಯೇ ಬೇರೆ, ನಮ್ಮ ಭಾಗದ ಸಮಸ್ಯೆಯೇ ಬೇರೆಯಾಗಿದೆ. ಪಟ್ಟಣಗಳಲ್ಲಿ individual toilet ಇರುತ್ತವೆ. ಅದನ್ನು ಅವರು ಉಪಯೋಗ ಮಾಡಿಕೊಳ್ಳುತ್ತಾರೆ. ಹಳ್ಳಿಗಳಲ್ಲಿ ಇವತ್ತು ಜನಸಂಖ್ಯೆ ಜಾಸ್ತಿಯಿದ್ದಾಗ extension ಜಾಸ್ತಿಯಾಗುತ್ತಿದೆ. ಈ ಮೊದಲೆಲ್ಲಾ ಗುಡ್ಡಗಾಡು ಇರುತ್ತಿತ್ತು, ಗಿಡಗಂಟೆಗಳು ಹೆಚ್ಚು ಇರುತ್ತಿತ್ತು. ಇದರಿಂದಾಗಿ ಮರ್ಯಾದೆಯಿಂದ ಶೌಚಾಲಯಕ್ಕೆ ಹೋಗಿ ಬರಲು ಆಗ ಇಂಥ ಅವಕಾಶವಿತ್ತು. ಈಗ ಅಲ್ಲೆಲ್ಲಾ ಬಡಾವಣೆಗಳಾಗಿ ಹೆಣ್ಣು ಮಕ್ಕಳು ಶೌಚಾಲಯಕ್ಕೆ ಹೋಗಲು ಇಂಥ ಜಾಗವಿಲ್ಲದಂತಾಗಿದೆ.

ಶ್ರೀ ಹೆಚ್.ಕೆ. ಪಾಟೀಲ್:- ಮಾನ್ಯ ಬಿ.ಆರ್. ಪಾಟೀಲರೆ, ಒಂದು ಕಾಲವಿತ್ತು, ಈ ಗೋಡೆಯನ್ನು ಕಟ್ಟಿಕೊಡಿ, ಅದನ್ನು ಶೌಚಾಲಯವೆಂದು ಹೇಳೀ ಉಪಯೋಗ ಮಾಡುತ್ತೇವೆನ್ನುತ್ತಿದ್ದರು. ಇಂಥ ವ್ಯವಸ್ಥೆಗೆ ನೀವು ಒಪ್ಪಿಗೆ ಕೊಡುತ್ತೀರ?

ಶ್ರೀ ಬಿ.ಆರ್. ಪಾಟಿಲ್:- ನಾನು ತಾತ್ವಿಕವಾಗಿ ಒಪ್ಪಿಗೆ ಕೊಡದಿದ್ದರೂ ಕೂಡ ಅನಿವಾರ್ಯವಾಗಿ ನೀವು ಮಾಡಲೇಬೇಕಾಗುತ್ತದೆ.

ಶ್ರೀ ಹೆಚ್.ಕೆ. ಪಾಟೀಲ್:- ಶೌಚಾಲಯಗಳನ್ನು ಅನಿವಾರ್ಯವಾಗಿ ಮಾಡಲೇಬೇಕೆಂದು ಹೇಳಿ. ಅದಕ್ಕೆ ನೀರನ್ನು ಒದಗಿಸಲೇಬೇಕೆಂದು ಹೇಳಿ. ನೀವೇ ಗೋಡೆಯನ್ನು ಕಟ್ಟಿಕೊಟ್ಟುಬಿಡಿ ಎಂದರೆ ಅದನ್ನು ನಾವು ಹೇಗೆ ಒಪ್ಪುವುದಕ್ಕಾಗುತ್ತದೆ?

ಶ್ರೀ ಬಿ.ಆರ್. ಪಾಟೀಲ್:- ಈಗ ಪ್ಲ್ಯಾನಿಂಗ್ ಕಮಿಷನ್‌ನವರು ಟಾರ್ಗೆಟ್ ಇಟ್ಟುಕೊಂಡು ಯೋಜನೆ ಹಾಕಿಕೊಂಡು ಕಳುಹಿಸುತ್ತಾರೆ. ನಾವೇನು ಶೇಕಡ ನೂರರಷ್ಟು ಆ ಟಾರ್ಗೆಟ್‌ನ್ನು ಮುಟ್ಟುತ್ತೇವೆಯೆ? ಎಷ್ಟೋ ಪ್ಲ್ಯಾನಿಂಗ್ ಕಮಿಷನ್‌ನವರು ಪ್ಲ್ಯಾನ್ ಮಾಡಿದ್ದು ಫೇಲ್ಯೂರ್ ಆಗಿವೆ. ಆದರೆ ಶೌಚಾಲಯ ವಿಚಾರದಲ್ಲಿ ನಿಮ್ಮ ಪ್ಲ್ಯಾನ್ ಏನಿದೆ ಅದನ್ನು ನಾನು ಒಪ್ಪುತ್ತೇನೆ. ಅದಕ್ಕೆ ನಾವು ಸಹಕಾರವನ್ನು ಕೊಡುತ್ತೇವೆ.

ಅಧ್ಯಕ್ಷರು:- ನೀರನ್ನು ಒದಗಿಸಿಕೊಡಬೇಕು ಎಂದು ಹೇಳುತ್ತಿದ್ದೀರಿ.

ಶ್ರೀ ಬಿ.ಆರ್. ಪಾಟಿಲ್:- ಸರ್, ಅದು individual toilet ಬಗ್ಗೆ ಜನರಲ್ಲಿ awareness ಬರಬೇಕು, ಅವರುಗಳು ಮನೆಯಲ್ಲಿ ಜಾಗವಿದ್ದರೆ toilet ಕಟ್ಟಿಕೊಳ್ಳಬೇಕು, ನೀರಿರಬೇಕು ಮತ್ತು ಶೌಚಾಲಯ ಉಪಯೋಗ ಮಾಡಿಕೊಳ್ಳಬೇಕು ಎಂಬುದು ಸರಿ. ಆದರೆ ಅದನ್ನು ಕಟ್ಟಿಕೊಳ್ಳುವವರೆಗೆ ಸಾಮೂಹಿಕ ಶೌಚಾಲಯವನ್ನು ಕಟ್ಟಿಸಿಕೊಡಲೇಬೇಕಾಗುತ್ತದೆ. ಇದು ಅನಿವಾರ್ಯವಿದೆ. ಆದುದರಿಂದ ದಯಮಾಡಿ ನಾನು ಕೈಜೋಡಿಸಿ ಸರ್ಕಾರಕ್ಕೆ ವಿನಂತಿ ಮಾಡುತ್ತೇನೆ. ನಾನು ಎಲೆಕ್ಷನ್ ಸಮಯದಲ್ಲಿ ಹೋದಾಗ ಅಲ್ಲಿ ಹೆಣ್ಣುಮಕ್ಕಳು ನಮಗೆ ಏನೂ ಬೇಡ toilet ಮಾಡಿಕೊಡಿ ಎಂದು ಹೇಳುತ್ತಾರೆ.

ದಯಮಾಡಿ ಈ ಸರ್ಕಾರ ಆ ದಿಕ್ಕಿನಲ್ಲಿ ವಿಚಾರ ಮಾಡಿ ಕೆಲಸ ಮಾಡಬೇಕೆಂದು ಹೇಳುತ್ತೇನೆ. ಇನ್ನು ಬಹಳ ಪ್ರಮುಖವಾದಂತಹ ವಿಚಾರದ ಬಗ್ಗೆ ಹೇಳಬೇಕಾಗಿದೆ. . . .

ಅಧ್ಯಕ್ಷರು:- ಈಗ ಸಮಯ ಆಯಿತು ಇನ್ನೂ ಎರಡು ಮೂರು ವಿಚಾರ ಇವೆ. ಏಕೆಂದರೆ ಆರು ಗಂಟೆಗೆ ಮೀಟಿಂಗ್ ಇದೆಯೆಂದು ಅಲ್ಲಿಗೆ ಹೋಗುತ್ತಿದ್ದಾರೆ.

ಶ್ರೀ ಬಿ.ಆರ್. ಪಾಟೀಲ್:- ನನಗೂ ಐದು ಗಂಟೆಗೆ ಹೈದರಾಬಾದ್ ಕರ್ನಾಟಕ ಬೋರ್ಡ್ ಮೀಟಿಂಗ್ ಇದೆ. ಆದರೆ ಅದಕ್ಕಿಂತ ಮಹತ್ತರವಾದ ವಿಷಯವಿದೆ ಎಂದು ಇಲ್ಲಿ ಬಂದು ನಿಂತುಕೊಂಡಿದ್ದೇನೆ. ಜಿಲ್ಲಾ ಪಂಚಾಯತ್‌ನಲ್ಲಿ ಒಂದು Planning Committee ಎಂದು ಇದೆ. ಅದು ಬಹಳ ಆದರ್ಶವಾದಂತಹ ಕಲ್ಪನೆ. ಆದರೆ ಅವು ಎಷ್ಟು ಪರಿಣಾಮಕಾರಿಯಾಗಿ ಕೆಲಸ ಮಾಡಬೇಕಾಗಿತ್ತು, ಅಷ್ಟು ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಿಲ್ಲ. ಕೆಲವು ಜಿಲ್ಲಾ ಪಂಚಾಯಿತಿಗಳಲ್ಲಿ ಮೀಟಿಂಗ್ ಕೂಡ ಸೇರುತ್ತಿಲ್ಲ. ಒಂದೆರಡು ಸಲ ಮೀಟಿಂಗ್ ಸೇರುತ್ತಾರೆ. ಈ planning ಎನ್ನುವುದು ಒಂದು specialization ಇದೆ. ಬೇರೆ ಬೇರೆ ಕ್ಷೇತ್ರದ ತಜ್ಞರು, ನುರಿತವರನ್ನು Planning Commissionನ ಸದಸ್ಯರನ್ನಾಗಿ ಮಾಡುತ್ತಾರೆ. ಅವರು ದೇಶದ ಆಗುಹೋಗುಗಳು, ಬೇಕುಬೇಡಗಳನ್ನು ಮತ್ತು ಸಂಪನ್ಮೂಲಗಳನ್ನು, ಸ್ಥಳೀಯ ಪರಿಸ್ಥಿತಿಯನ್ನು ಅಧ್ಯಯನ ಮಾಡಿ planning ಮಾಡುತ್ತಾರೆ. ಅದೇ ಪ್ರಕಾರ ಜಿಲ್ಲಾ ಪಂಚಾಯಿತಿ planning ಆಗಬೇಕೆನ್ನುವುದು ಕಾನೂನಿನ ಉದ್ದೇಶ. ಆದರೆ ಇವತ್ತು planning ಎನ್ನುವ ಶಬ್ದ ಏನಿದೆ, ಅದಕ್ಕೆ ಯಾವುದೇ ಅರ್ಥವಿಲ್ಲ. ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ ಅನೇಕ ಜನ ತಜ್ಞರಿದ್ದಾರೆ, ಒಳ್ಳೆಯ ಸಂಸ್ಥೆಗಳಾದ Tata Institute ಇದೆ, BAIF ಇದೆ, ಇಂತಹ ಅನೇಕ ಪ್ರತಿಷ್ಠಿತ ಸಂಸ್ಥೆಗಳಿವೆ. ಇದರಲ್ಲಿ ಎಕ್ಸ್‌ಪರ್ಟ್ಸ್ ಇದ್ದಾರೆ. ನೀವು Planning Committeeಯಲ್ಲಿ ಅವರನ್ನು ಸೇರಿಸಿ. ಆಯಾಯ ಜಿಲ್ಲೆಯ ಮೂಲ ಸೌಕರ್ಯ, ಅಲ್ಲಿಗೆ ಬೇಕಾದಂತಹ ಹಣಕಾಸು, ಅಲ್ಲಿನ ಸಮಸ್ಯೆ, ಅಲ್ಲಿನ topography, ಅಲ್ಲಿರುವಂತಹ ನೀರಾವರಿ ಅಥವಾ ಒಣಬೇಸಾಯ

ಇವನ್ನೆಲ್ಲ ವಿಚಾರಗಳನ್ನು ತೆಗೆದುಕೊಂಡು planning ಯಾವ ತರಹ ಇರಬೇಕು? ಹಣ ಎಲ್ಲೆಲ್ಲಿ ಖರ್ಚು ಮಾಡಬೇಕು? ಎಲ್ಲೆಲ್ಲಿ ಏನೇನು ಅವಶ್ಯಕತೆ ಇದೆ ಎನ್ನುವುದು planning ಆಗದೇ ದುಡ್ಡು ಖರ್ಚಾಗುತ್ತಿದೆ. ನಾನು ಜಿಲ್ಲಾ ಪಂಚಾಯಿತಿಯಲ್ಲಿದ್ದಾಗ action planಗೆ ಒಪ್ಪಿಗೆ ಕೊಡುತ್ತಿದ್ದೆ. ಅಧಿಕಾರಿಗಳು ಪ್ರತಿ ವರ್ಷಕ್ಕೆ 10–15% ಹೆಚ್ಚಿಗೆ ಮಾಡಿ planning ಬರೆದು ಕೊಡುತ್ತಾರೆ. ನಾವೆಲ್ಲಾ ಸದಸ್ಯರೂ ಕೈಯೆತ್ತಿ ಬಿಡುತ್ತೇವೆ. ಆದರೆ ನಾವು ಆದ್ಯತೆ ವಲಯಗಳನ್ನು ಬಿಟ್ಟು ಬಿಡುತ್ತೇವೆ. ಗುಲ್ಬರ್ಗಕ್ಕೆ ಸಂಬಂಧಪಟ್ಟಂತೆ ತೆಗೆದುಕೊಂಡರೆ ಅಲ್ಲಿ ಎಲ್ಲಿ inland fishing ಮಾಡುವುದು? Land ಇಲ್ಲ fish ಇಲ್ಲ. ಅಲ್ಲಿ ನೀರಿಲ್ಲವೆಂದರೆ fish ಎಲ್ಲಿ ಆಗುತ್ತದೆ? ಅದಕ್ಕೆ ದುಡ್ಡು ಇಡುತ್ತಾರೆ. ಏಕೆ? ಆ ಹಣ ಖರ್ಚಾಗುವುದಿಲ್ಲ. ಈ ರೀತಿ ಅನೇಕ ಖರ್ಚುಗಳನ್ನು ವ್ಯರ್ಥವಾಗಿ planningನಲ್ಲಿಟ್ಟು, ಅದು ಉಪಯೋಗವಾಗುವುದಿಲ್ಲ, ಜನತೆಗೂ ಮುಟ್ಟುವುದಿಲ್ಲ, ಖರ್ಚಾಗುವುದಿಲ್ಲ, ಕಡೆಗೆ eleventh hourನಲ್ಲಿ ಬೇರೆ ಕಡೆಗೆ ವರ್ಗಾಯಿಸಿ ಖರ್ಚು ಮಾಡಿಕೊಳ್ಳುತ್ತಾರೆ. ಗ್ರಾಮ ಮಟ್ಟದಲ್ಲಿ, ತಾಲ್ಲೂಕು ಮಟ್ಟದಲ್ಲಿ ಮತ್ತು ಜಿಲ್ಲಾ ಮಟ್ಟದಲ್ಲಿ planning ಅನ್ನು ಬಹಳ perfect ಆಗಿ ಮಾಡಿ. Satellite survey ಮುಖಾಂತರ ನಿಮಗೆ ಎಲ್ಲಾ ವಿವರಗಳು ಸಿಗುತ್ತವೆ. ಇವತ್ತು ಶಹಾಪೂರ ಮತ್ತು ಸುರಪುರ irrigation areaದಲ್ಲಿ water-shed ಮಾಡುತ್ತೇನೆಂದರೆ ಯಾವ ಅರ್ಥ ಇದೆ? ಬಯಲು ಪ್ರದೇಶದಲ್ಲಿ water-shed ಮಾಡಬೇಕಾಗಿರುವುದು.

ಅಧ್ಯಕ್ಷರು:– ದಯವಿಟ್ಟು ಮುಗಿಸಿ.

ಶ್ರೀ ಬಿ.ಆರ್. ಪಾಟೀಲ್:– ಮಾನ್ಯ ಅಧ್ಯಕ್ಷರೆ, ಒಂದೆರಡು ನಿಮಿಷ ಮಾತನಾಡುತ್ತೇನೆ.

ಅಧ್ಯಕ್ಷರು:– ಆಗುವುದಿಲ್ಲ, ಇನ್ನೂ ಬೇರೆ ವಿಷಯಗಳು ಇವೆ. ನೀವು ಮುಕ್ಕಾಲು ಗಂಟೆ ಮಾತನಾಡಿದಿರಿ.

ಶ್ರೀ ಬಿ.ಆರ್. ಪಾಟಿಲ್:– ನಾನು ಮುಕ್ಕಾಲು ಗಂಟೆ ಮಾತನಾಡಿಲ್ಲ.

ಅಧ್ಯಕ್ಷರು:- ಮಾತನಾಡಿಲ್ಲವೆಂದು ಯಾರು ಹೇಳಿದರು?

ಶ್ರೀ ಬಿ.ಆರ್. ಪಾಟಿಲ್:- ತಾವು ಬಂದೇ 20 ನಿಮಿಷವಾಯಿತು.

ಅಧ್ಯಕ್ಷರು:- ಯಾರು ಹೇಳಿದ್ದು?

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:- ನೀವೇ ಬಂದು 20 ನಿಮಿಷ ಆಯಿತು ಎಂದರೆ ಅದನ್ನು ಯಾರು ಹೇಳಿದರು ಎಂದರೆ ನೀವೇ ಹೇಳಬೇಕು.

ಅಧ್ಯಕ್ಷರು:- ಮುಕ್ಕಾಲು ಗಂಟೆ ಆಗಿದೆ.

ಶ್ರೀ ಬಿ.ಆರ್. ಪಾಟೀಲ್:- ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರಿಗೆ ಏನೋ ಮಾಡಬೇಕೆಂದು ಕಳಕಳಿ ಇದೆ.

ಅಧ್ಯಕ್ಷರು:- ಕಳಕಳಿ ಇದ್ದದ್ದೇ, ಒತ್ತಾಯ ಮಾಡಬೇಕು.

ಶ್ರೀ ಬಿ.ಆರ್. ಪಾಟೀಲ್:- ಇವತ್ತು ಅಧಿಕಾರ ವಿಕೇಂದ್ರೀಕರಣದ ಹೆಸರಿನಲ್ಲಿ ಅಧಿಕಾರಿಗಳು ಸವಾರಿ ಮಾಡುತ್ತಿದ್ದಾರೆ. ಅವರು ಸವಾರಿ ಮಾಡುವುದನ್ನು ನಿಲ್ಲಿಸಿ. ಮಾನ್ಯ ಪುಟ್ಟಣ್ಣಯ್ಯನವರು ಗ್ರಾಮ ಪಂಚಾಯಿತಿಯ ಅಧ್ಯಕ್ಷ ಹಿಂದೆ, ಪಿಡಿಓ ಮುಂದೆ ಇರುತ್ತಾರೆಂದು ಹೇಳಿದರು. ನಮ್ಮ ಅಧ್ಯಕ್ಷರುಗಳು ಬೆಳಗ್ಗೆ ಎದ್ದು ಪಿಡಿಓಗಳನ್ನು ಹುಡುಕಿಕೊಂಡು ಹೋಗುತ್ತಾರೆ. ಅವನು ಹೊರಗಡೆ ನಿಲ್ಲಿಸುತ್ತಾನೆ. ಆಮೇಲೆ ಅವನು ಕರೆದಾಗ ಒಳಗೆ ಹೋಗಬೇಕು. ಪಿಡಿಓ ಸಹಿ ಮಾಡಿ ಎಂದರೆ ಸಹಿ ಮಾಡಬೇಕು. ಮೀಸಲಾತಿಯಲ್ಲಿ ಅನೇಕ ವರ್ಗದ ಜನರನ್ನು ಕರೆದುಕೊಂಡು ಬಂದಿದ್ದೇವೆ. ಅವರಿಗೆ ಏನೂ ಗೊತ್ತಿಲ್ಲ, ಪಿಡಿಓ ಅಧಿಕಾರಿಗಳು ಅಧಿಕಾರ ಮಾಡುತ್ತಿದ್ದಾರೆ. ಎಲ್ಲಾ ಅಧಿಕಾರಿಗಳು ಅಧಿಕಾರ ಮಾಡುತ್ತಿದ್ದಾರೆ ಜನಪ್ರತಿನಿಧಿಗಳು ಅಧಿಕಾರ ಮಾಡುತ್ತಿಲ್ಲ. ಇವತ್ತು ನಾವು ಸುಮ್ಮನೆ ಹೇಳಿಕೊಳ್ಳುವುದಕ್ಕೆ ದೊಡ್ಡ ಮಾತು. ಇವತ್ತು ನಿಜವಾದಂತಹ ವಿಕೇಂದ್ರೀಕರಣ ಪದ್ಧತಿಯಲ್ಲಿ, ಜನತಾಂತ್ರಿಕ ವಿಕೇಂದ್ರೀಕರಣ ತರುವುದಾದರೆ ನೀವು ನೇರವಾಗಿ ಜನರಿಗೆ ಅಧಿಕಾರ ಕೊಡಿ. ಮೀಸಲಾತಿಯನ್ನು ಪ್ರತಿ ಐದು ವರ್ಷಗಳಿಗೊಮ್ಮೆ ಕೊಡಿ. ಅವರಿಗೆ 22 ತಿಂಗಳು ಅಧಿಕಾರವನ್ನು ಕೊಟ್ಟು ಕೂರಿಸಿ ಕೆಳಗಿಳಿಸುವುದು ಅಲ್ಲ. ಅವರಿಗೆ

ಸಮಗ್ರವಾಗಿ ನಾಯಕತ್ವ ಬೆಳೆಯಬೇಕು. ಅವರಿಗೆ ಅನುಭವ ಮತ್ತು ಕಾರ್ಯಕ್ಷಮತೆ ಬೆಳೆಯಬೇಕು. ಅವರಿಗೆ ಕೆಲಸ ಮಾಡುವುದಕ್ಕೆ ಅವಕಾಶ ಸಿಗಬೇಕು.

ಶ್ರೀ ಎಂ.ಪಿ. ರವೀಂದ್ರ:- ಮಾನ್ಯ ಅಧ್ಯಕ್ಷರೆ, ಪಂಚಾಯತ್ ರಾಜ್ ಮುಖಾಂತರ ಅಧಿಕಾರ ವಿಕೇಂದ್ರೀಕರಣವನ್ನು ಮಾಡಿಕೊಟ್ಟಿರುವುದು ಸರಿಯಿದೆ. ಆದರೆ ಅಲ್ಲಿ ಕೂಡ ಕೆಲವು ಬದಲಾವಣೆಗಳು ಆಗಬೇಕಾಗಿದೆ. ಐದು ವರ್ಷಗಳ ಕಾಲಾವಧಿಯಲ್ಲಿ ಮೀಸಲಾತಿಯನ್ನು ಇಟ್ಟಿದ್ದಾರೆ, ಅದನ್ನು ಕನಿಷ್ಠ 15 ವರ್ಷಕ್ಕೆ ಇಡಬೇಕು.

ಅಧ್ಯಕ್ಷರು:- ನಿಮಗೆ ಅವಕಾಶ ಬಂದಾಗ ಮಾತನಾಡಿ. ಅವರಿಗೆ ಅನಿಸಿದ್ದು ಅವರು ಹೇಳುತ್ತಾರೆ, ನಿಮಗೆ ಅನಿಸಿದ್ದನ್ನು ನೀವು ಹೇಳಿ.

ಶ್ರೀ ಬಿ.ಆರ್. ಪಾಟೀಲ್:- ನಾನು ಗ್ರಾಮ ಸಭೆಗಳ ಬಗ್ಗೆ ಮಾತನಾಡಿ ಒಂದು ನಿಮಿಷದಲ್ಲಿ ಮುಗಿಸುತ್ತೇನೆ. ಗ್ರಾಮ ಸಭೆ ಮಾಡುವ ವಿಚಾರದಲ್ಲಿ ಹೇಳುವುದಾದರೆ ನಾನು People's Parliament ನಲ್ಲಿ ನಂಬಿಕೆ ಇಟ್ಟವನು. ಆದರೆ ನಮ್ಮ ದೇಶದ ಪರಿಸ್ಥಿತಿ, ಸ್ಥಿತಿಗತಿ, ನಮ್ಮ ಸಾಮಾಜಿಕ ವ್ಯವಸ್ಥೆ, ಆರ್ಥಿಕ ಪರಿಸ್ಥಿತಿ ನೋಡಿದರೆ ನೋವಾಗುತ್ತದೆ. ನಮ್ಮ ಗ್ರಾಮ ಸಭೆ ಹೇಗೆ ನಡೆಯುತ್ತದೆ ಎಂದರೆ ಅಧಿಕಾರಿಗಳು ಮಧ್ಯಾಹ್ನ ಎರಡು ಗಂಟೆಗೆ ಬರುತ್ತಾರೆ. ಆಗ ಜನರೆಲ್ಲ ಹೊಲಕ್ಕೆ ಕೂಲಿಗೆ ಹೋಗಿರುತ್ತಾರೆ. ಅಲ್ಲಿ ಕುಳಿತಿರುವಂತಹ ಒಂದಿಷ್ಟು ಪೋಲಿಪೋಕರಿಗಳು ಫೋಟೋ ತೆಗೆದು ಗ್ರಾಮಸಭೆ ಮಾಡಲಾಯಿತು, ಅದರಲ್ಲಿ ಇಂತಿಂತಹ ನಿರ್ಣಯಗಳನ್ನು ಮಾಡಲಾಯಿತು ಎಂದು ಬರೆದುಕೊಂಡು ಬರುತ್ತಾರೆ. ನಿಜವಾಗಿ ಯಾರಿಗೆ ಫಲ ಸಿಗಬೇಕು, ಯಾರಿಗೆ ಅನುಕೂಲವಾಗಬೇಕು, ಅವರೆಲ್ಲರೂ ವಂಚಿತರಾಗುತ್ತಾರೆ. ಈ ರೀತಿ ಗ್ರಾಮಸಭೆಗಳು ನಡೆದರೆ ಯಾವ ರೀತಿ ನಿಮಗೆ ಫಲಾನುಭವಿಗಳಿಗೆ ಮನೆಗಳನ್ನು ಹಂಚುವುದಕ್ಕೆ ಆಗುತ್ತದೆ? ಇದಕ್ಕೆ ವೈಜ್ಞಾನಿಕವಾದಂತಹ ದಾರಿಯನ್ನು ಕಂಡುಹಿಡಿದುಕೊಳ್ಳಬೇಕು. ಹೌಸಿಂಗ್ ಬೋರ್ಡ್‌ನಲ್ಲಿ ಲಾಟರಿ ಮುಖಾಂತರ ಮನೆಗಳನ್ನು ಕೊಡುತ್ತಾರೆ. ನೀವು ಸೈಟ್‌ಲೆಸ್ ಮತ್ತು

ಹೌಸ್‌ಲೆಸ್, ಕಾಸ್ಟ್‌ವೈಸ್ ಕೂಡ ಸರ್ವೆ ಮಾಡಿಸಿ. ನಿಮಗೆ ಎಷ್ಟು ಮನೆಗಳು ಬಂದಿರುತ್ತವೆ? ಅದನ್ನು ಲಾಟರಿ ಎತ್ತಿ ಆಯಾಯ ಫಲಾನುಭವಿಗಳಿಗೆ ನಿಜವಾಗಿ ಮನೆ ಸಿಕ್ಕು, ಕಟ್ಟಿಕೊಳ್ಳಲಿ. ಇದರಲ್ಲಿ ಬಹಳ ದೊಡ್ಡ ರಾಜಕಾರಣ ಇದೆ. ನಮ್ಮಲ್ಲಿ ದಲ್ಲಾಳಿಗಳು ನಮ್ಮ ಹೆಸರಿನಲ್ಲಿ ದುಡ್ಡು ವಸೂಲಿ ಮಾಡಿ ತೆಗೆದುಕೊಳ್ಳುವುದು, ಮನೆ ಕೊಡುತ್ತೇವೆಂದು ಮೋಸ ಮಾಡುವುದು, ಈ ತರಹ ಬಹಳ ದೊಡ್ಡ ದುರುಪಯೋಗವಾಗುತ್ತದೆ. ಇದಕ್ಕೆ ವೈಜ್ಞಾನಿಕವಾದ ಪದ್ಧತಿಯನ್ನು ಕಂಡುಹಿಡಿದು ಫಲಾನುಭವಿಗಳನ್ನು ಆಯ್ಕೆ ಮಾಡುವುದಕ್ಕೆ ಏನಾದರೂ ಕ್ರಮ ಕೈಗೊಳ್ಳಬೇಕು. ಶಾಸಕರಿಗಂತೂ ಬಹಳ ಕಷ್ಟವಿದೆ. ಎಲ್ಲರಿಗೂ ಇದರ ಅನುಭವವಿದೆ. ಗ್ರಾಮ ಪಂಚಾಯತ್ ಕೆಲಸಕ್ಕೂ, ತಾಲ್ಲೂಕು ಪಂಚಾಯತ್, ಜಿಲ್ಲಾ ಪಂಚಾಯತ್ ಕೆಲಸಕ್ಕೂ answerable ಮತ್ತು ಅಕೌಂಟಬಿಲಿಟಿ ಎಂಎಲ್‌ಎ. ಆಗುತ್ತೇವೆ. ದಯಮಾಡಿ ಈ ವ್ಯವಸ್ಥೆಯನ್ನು ಸರಿಪಡಿಸಿ. ಇಲ್ಲದಿದ್ದರೆ ನಾವು ಪಂಚಾಯತ್ ವ್ಯವಸ್ಥೆ ಬೆಳೆಸುವುದಕ್ಕಾಗುವುದಿಲ್ಲ. ಇದಕ್ಕೆ ಒಂದು ದಾರಿ ಹುಡುಕಿಕೊಂಡು ಲಾಟರಿ ಸಿಸ್ಟಂ ಮಾಡಿ ಮನೆಗಳನ್ನು ಕೊಡುವ ಕೆಲಸವನ್ನು ಮಾಡಬೇಕೆಂದು ಹೇಳುತ್ತಾ, ತಾವು ಬಹಳ ಗಡಿಬಿಡಿ ಮಾಡುತ್ತಿದ್ದೀರಿ.

ಮಾನ್ಯ ಸಿಟಿ ರವಿಯವರು ಮಾತನಾಡುವಾಗ ಹೇಳಿದರು. ನಾವು ಸಮಗ್ರತೆ ಮತ್ತು ಅಧಿಕಾರದ ಜೊತೆಗೆ ಸಮಾನತೆ ತರುವಂತಹ ದೃಷ್ಟಿಕೋನ ಇಟ್ಟುಕೊಂಡು ವಿಕೇಂದ್ರೀಕರಣ ವ್ಯವಸ್ಥೆಯನ್ನು ಸ್ಥಾಪನೆ ಮಾಡುವುದಕ್ಕೆ ಹೊರಟಿದ್ದೇವೆ. ಆ ಒಂದು ನಿಟ್ಟಿನಲ್ಲಿ ಗ್ರಾಮ ಸಭೆಗಳಲ್ಲಿ ಬಲಿಷ್ಠರು ಮತ್ತು ಉಚ್ಛ ಜಾತಿಯವರು ಬರುತ್ತಾರೆ. ಬಡವರು, ನಿರ್ಗತಿಕರು ಮತ್ತು ಕೆಳ ಜಾತಿಯವರು ಯಾರೂ ಬರುವುದಿಲ್ಲ. ಅವರಿಗೆ ಧ್ವನಿಯಿರುವುದಿಲ್ಲ. ಹೆಣ್ಣುಮಕ್ಕಳಿಗೆ ಸಭೆಯಲ್ಲಿ ಭಾಗವಹಿಸುವಂತಹ ಸಾಮಾಜಿಕ ವಾತಾವರಣ ಇಲ್ಲ. ಇಂತಹ ಪರಿಸ್ಥಿತಿಯಲ್ಲಿ ನೀವು ಒಂದು ರೂಪವನ್ನು ಕಂಡುಹಿಡಿದು ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕೆಂದು ಹೇಳುತ್ತೇನೆ.

ವಿಶ್ವ ಬ್ಯಾಂಕಿನಿಂದ 600 ಕೋಟಿ ರೂಪಾಯಿ ಗ್ರಾಮ ಸ್ವರಾಜ್ ಗಾಂಧೀಜಿ ಕಲ್ಪನೆಯಿಂದ ದುಡ್ಡು ಪಡೆದಿದ್ದೀರಿ. ಇದೂ ಕೂಡ ಎಲ್ಲಿ ಆಗಿದೆ ಎಂದು ನಮಗೆ ಗೊತ್ತಾಗುತ್ತಿಲ್ಲ. ದುಡ್ಡು ನಿಜವಾದಂತಹ ರೂಪದಲ್ಲಿ ಖರ್ಚಾಗಬೇಕು ಮತ್ತು ಜನರಿಗೆ ಅನುಕೂಲವಾಗಬೇಕೆನ್ನುವ ಕಳಕಳಿಯನ್ನು ಇಟ್ಟುಕೊಂಡು ನನಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು:– ಈಗ ಎರಡು ವಿಧೇಯಕಗಳನ್ನು ಮಂಡಿಸುತ್ತಿದ್ದೇನೆ.

7. ಶಾಸನ ರಚನೆ ವಿಧೇಯಕಗಳ ಮಂಡನೆ

1. ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ (ತಿದ್ದುಪಡಿ) ವಿಧೇಯಕ 2014

ಮಂಡನೆಗೆ ಅನುಮತಿ ಕೋರಿಕೆ

ಅಧ್ಯಕ್ಷರು:– ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ (ತಿದ್ದುಪಡಿ) ವಿಧೇಯಕ 2014 ಅನ್ನು ಮಾನ್ಯ ಹೆಚ್. ಆಂಜನೇಯರವರು ಸಭೆಯಲ್ಲಿ ಮಂಡಿಸಬೇಕು.

ಶ್ರೀ ಟಿ.ಬಿ. ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು):– ಮಾನ್ಯ ಅಧ್ಯಕ್ಷರೆ, ಮಾನ್ಯ ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರ ಪರವಾಗಿ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ (ತಿದ್ದುಪಡಿ) ವಿಧೇಯಕ 2014 ಅನ್ನು ಸಭೆಯ ಮುಂದೆ ಮಂಡಿಸಲು ಅನುಮತಿಯನ್ನು ಕೋರುತ್ತೇನೆ.

ಅಧ್ಯಕ್ಷರು:– ಈಗ ಪ್ರಸ್ತಾವನೆಯನ್ನು ಮಂಡಿಸಲಾಯಿತು, ಈಗ ಪ್ರಸ್ತಾವನೆಯನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವನೆ ಹೀಗಿದೆ,